ಮೇ 11, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1984
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಒಂದೇ ತಟ್ಟೇಲಿ ಅನ್ನ ತಿಂದು ಮೂರ್ತ ಇಡ್ತಾರೋ....

# ಕ್ಯಾತಮಾರನಹಳ್ಳಿ ರೌಡಿ ಶೀಟರ್ ಕಾರ್ತಿಕ್ ಕಗ್ಗೊಲೆ!




'ಆಂಟಿ' ಮಹಿಮೆ!



## ಹಿಂದೂ ಕಾರ್ಯಕರ್ತನ ರಿವೇಂಜ್ ಕಿಲ್ಲಿಂಗ್!

## ಲೌಡ್ ಸ್ಪೀಕರ್ ವಿಚಾರಕ್ಕೆ 'ಪತ್ನಿ'ಯೇ ಫಿನಿಶ್!





## ಜನಾರೆಡ್ಡಿಗೆ 7 ವರ್ಷ ಸಜೆ!



## ಚಕ್ಕಂದವಾಡ್ತಾ ಗಂಡನಿಗೆ ಸಿಕ್ಕಿಬಿದ್ದ ಪತ್ನಿ-ಪ್ರಿಯಕರ ಇಬ್ಬರೂ ಕಚಕ್!

ಈಗಿನ ಪರಿಸ್ಥಿತಿಯಲ್ಲಿ ಆಡಳಿತ ನಿಭಾಯಿಸುವುದು ಸಿದ್ದರಾಮಯ್ಯರಿಗೆ ಸವಾಲ್ ಆಗಿ ಪರಿಣಮಿಸಿದೆ. ಅವರು ಐದು ವರ್ಷಗಳನ್ನು ಪೂರ್ಣಗೊಳಿಸುತ್ತಾರೆ ಎಂಬ ನಂಬಿಕೆಯೂ ಇಲ್ಲದಾಗಿದೆ. ಅವರ ಸುತ್ತ ಇರುವ ಭಟ್ಟಂಗಿಗಳು ಎಲ್ಲೋ ಒಂದು ಕಡೆ ಅವರ ದಿಕ್ಕು ತಪ್ಪಿಸುತ್ತಿದ್ದಾರಾ? ಅಥವಾ ಇನ್ನು ಕೆಲವೇ ತಿಂಗಳಲ್ಲಿ ಅಧಿಕಾರ ಬಿಟ್ಟುಕೊಡಬೇಕೆಂಬ ಆತಂಕ, ನೋವು ಅವರನ್ನು ಕಾಡುತ್ತಿದ್ದು ಅದರಿಂದ ಅವರು ಆಗಾಗ್ಗೆ ರೊಚ್ಚಿಗೇಳುತ್ತಿದ್ದಾರಾ? ಹೀಗೆ ಹಲವು ಪ್ರಶ್ನೆಗಳು ಕಾಡುತ್ತಿವೆ.

**2013ರಿಂದ 2018ರವರೆಗೆ ಮುಖ್ಯಮಂತ್ರಿಯಾಗಿದ್ದಾಗ ಒಂದಷ್ಟು ಒಳ್ಳೆಯ ಹೆಸರು ಗಳಿಸಿದ್ದ ಸಿದ್ದರಾಮಯ್ಯನವರು ಈ ಬಾರಿ ಹೆಜ್ಜೆ ಇಟ್ಟಲ್ಲೆಲ್ಲ ಎಡವುತ್ತಿರುವುದು ಎದ್ದು ಕಾಣಿಸುತ್ತಿದೆ. ಅಷ್ಟೇ ಅಲ್ಲದೆ ಅವರ ಮಾತು, ನಡೆದುಕೊಳ್ಳುವ ರೀತಿ ಅವರನ್ನು ಇಷ್ಟಪಡುವವರಿಗೆ ಮುಜುಗರ ತರುತ್ತಿದೆ. ಅವರಿಂದ ಏನನ್ನು ನಿರೀಕ್ಷಿಸಿದ್ದರೋ ಅದ್ಯಾವುದೂ ಆಗದಿರುವುದು ಮತ್ತು ಒಂದು ಸಮುದಾಯವನ್ನು ಅತಿಯಾಗಿ ಓಲೈಕೆ ಮಾಡುತ್ತಿರುವುದು, ಹಿಂದೂ ವಿರೋಧಿ ಧೋರಣೆ ತಾಳುತ್ತಿರುವುದು ಇದೆಲ್ಲವೂ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತೆ ಮಾಡುತ್ತಿದೆ.**



# ಸಿಎಂ ಸಿದ್ದರಾಮಯ್ಯ ರೊಚ್ಚಿಗೇಳುತ್ತಿರುವುದೇಕೆ?

ಒಂದು ಪಕ್ಷ ಅಧಿಕಾರಕ್ಕೆ ಬಂದ ನಂತರ ಏನೇ ರಾಜಕೀಯ ಮಾಡಿದರೂ ಆಡಳಿತ ನಡೆಸುವ ವೇಳೆ ರಾಜಕೀಯ ಮುಕ್ತವಾಗಿರಬೇಕು. ಟೀಕೆ, ಟಿಪ್ಪಣಿಗಳು ಬಂದಾಗಲೂ ಅದೆಲ್ಲವನ್ನು ಆರೋಗ್ಯಕರವಾಗಿ ಸ್ವೀಕರಿಸಬೇಕಾಗುತ್ತದೆ. ಆದರೆ ಅದ್ಯಾಕೋ ಗೊತ್ತಿಲ್ಲ ರಾಜ್ಯ ರಾಜಕೀಯದಲ್ಲಿ ಅದರಲ್ಲೂ ಆಡಳಿತರೂಢ ನಾಯಕರು



ಎಲ್ಲವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಿದ್ದರೇನೋ ಎಂಬ ಭಾವನೆ ಮೂಡಲಾರಂಭಿಸಿದೆ. ಈ ರೀತಿಯ ವರ್ತನೆಗಳೇಕೆ? ಇದು ಎಷ್ಟರ ಮಟ್ಟಿಗೆ ಸರಿ ಎಂಬಿತ್ಯಾದಿ ಪ್ರಶ್ನೆಗಳು ಜನರಲ್ಲಿ ಹುಟ್ಟಿಕೊಳ್ಳಲಾರಂಭಿಸಿದೆ. ಅದರಲ್ಲೂ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ, ನಡೆ ನುಡಿಗಳು ಅಚ್ಚರಿಹುಟ್ಟಿಸುತ್ತಿವೆ.

ಯಾವುದೇ ರಾಜಕೀಯ ಪಕ್ಷವಿರಲಿ ಅದು ಅಧಿಕಾರ ಹಿಡಿದ ಬಳಿಕ ಸರ್ವಜನರ ಪಕ್ಷವಾಗಬೇಕು. ವಿಪಕ್ಷ, ಜನ ಎಲ್ಲರಿಂದಲೂ ಹೊಗಳಿಕೆ ಮಾತ್ರವಲ್ಲದೆ ಟೀಕೆ, ವಿರೋಧ, ಆರೋಪ, ಪ್ರತಿಭಟನೆ ಹೀಗೆ ಎಲ್ಲವನ್ನು ಸಮವಾಗಿ ಸ್ವೀಕರಿಸುವ ತಾಳ್ಮೆಯನ್ನು ಹೊಂದಿರಬೇಕಾಗುತ್ತದೆ. ಜತೆಗೆ ಎಲ್ಲವನ್ನೂ ಜಾಗರೂಕತೆಯಿಂದ ನಿಭಾಯಿಸುವ ಶಕ್ತಿಯನ್ನು ಹೊಂದಿರ ಬೇಕಾಗುತ್ತದೆ. ಪ್ರತಿಭಟನೆ ಮಾಡಿದ ತಕ್ಷಣ ಪ್ರತಿಭಟನಾಕಾರರ ಮೇಲೆ ಗೋಲಿಬಾರ್ ಮಾಡಿಸಲು ಸಾಧ್ಯವಿಲ್ಲ, ಪ್ರತಿಭಟನೆಯ ಹಕ್ಕನ್ನು ಹತ್ತಿಕ್ಕಲು ಸಾಧ್ಯವೇ ಇಲ್ಲ ಏಕೆಂದರೆ ಪ್ರತಿಭಟನೆಯ ಹಕ್ಕನ್ನು ಸಂವಿಧಾನವೇ



ನೀಡಿದೆ. ಹೀಗಾಗಿ ಪ್ರತಿಭಟನೆ ಮಾಡುವವರ ಮನವೊಲಿಸಿ ಅದನ್ನು ತಡೆಯುವ ಜಾಣ್ಮೆ ಬೆಳೆಸಿಕೊಳ್ಳಬೇಕಾಗುತ್ತದೆ.

ಇನ್ನು ರಾಜಕೀಯವಾಗಿ ನಾಯಕರು ಆ ಪಕ್ಷ, ಈ ಪಕ್ಷವೆಂದು ಕಿತ್ತಾಡುವುದು ಇದ್ದದ್ದೇ. ಇದನ್ನು ಜನ ತುಂಬಾ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಎಂದರೆ ಅದು ಮೂರ್ಖತನವಾಗಿ ಬಿಡುತ್ತದೆ. ರಾಜಕಾರಣಿಗಳು ವೇದಿಕೆಯಲ್ಲಿ ಏನೇನೋ ಹೇಳಬಹುದು ಆದರೆ ಅದೆಲ್ಲವೂ ಆಗುವುದಿಲ್ಲ ಮತ್ತು ರಾಜಕಾರಣಿಗಳು ಹೇಳಿದ ತಕ್ಷಣವೇ ಎಲ್ಲವೂ ಆಗಿಹೋಯಿತು ಎಂದು ನಂಬುವಷ್ಟರಮಟ್ಟಿಗೆ ಜನರೂ ದಡ್ಡರಾಗಿಲ್ಲ, ಎಲ್ಲರೂ ಅವರವರ ರಾಜಕೀಯ ಲಾಭಕ್ಕಾಗಿ ಮಾಡುತ್ತಾರೆ ಎಂಬುದು ಜನರೆಲ್ಲರಿಗೂ ಗೊತ್ತಿರುವ ವಿಚಾರವೇ.

2013ರಿಂದ 2018ರವರೆಗೆ ಸಿಎಂ ಆಗಿ ಆಡಳಿತ ನಡೆಸಿದ ಸಿದ್ದರಾಮಯ್ಯರವರನ್ನು ನೋಡಿದರೆ 2023ರಿಂದ ಆರಂಭವಾದ ಆಡಳಿತದಲ್ಲಿ ಹಿಂದಿನ ಆ ಸಿದ್ದರಾಮಯ್ಯ

ಬಿ.ಎಂ. ಲವಕುಮಾರ್

ರನ್ನು ನೋಡಲು ಸಾಧ್ಯವೇ ಇಲ್ಲದಾಗಿದೆ. ಈಗಿನ ಅವರ ಸರ್ಕಾರದಲ್ಲಿ ಹಗರಣಗಳ ಆರೋಪಗಳು ಕೇಳಿ ಬರುತ್ತಿವೆ ಬೆಲೆ ಏರಿಕೆಯ ಬಿಸಿ ಮುಟ್ಟುತ್ತಿದೆ. ಓಲೈಕೆಯ ರಾಜಕೀಯ ಎದ್ದುಕಾಣಿಸುತ್ತಿದೆ. ಅದಕ್ಕಿಂತ ಹೆಚ್ಚಾಗಿ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಅವರ ನಡೆಯಂತು ಆಕ್ರೋಶಕ್ಕೆ ಕಾರಣವಾಗುತ್ತಿದೆ. ಅಧಿಕಾರಿಗಳ ಜತೆ ನಡೆದುಕೊಳ್ಳುವ ರೀತಿ, ನೀತಿಗಳು ಅವರ ವ್ಯಕ್ತಿತ್ವವನ್ನು ಪ್ರಶ್ನಿಸುವಂತೆ ಮಾಡಿದೆ. ಏಕೆ ಹೀಗೆ?

ಸಮಾಜವಾದದ ಹಿನ್ನಲೆಯಲ್ಲಿ ಬಂದಿದ್ದ ಸಿದ್ದರಾಮಯ್ಯರವರು ಒಂದು ಕಾಲದಲ್ಲಿ ಇಂದಿರಾಗಾಂಧಿ ವಿರುದ್ಧವೇ ಹೋರಾಟ ಮಾಡಿದ್ದವರು. ಅವರಿಗೆ ಕಪ್ಪುಪಟ್ಟಿ ಪ್ರದರ್ಶನ ಮಾಡಿ ಜೈಲಿಗೆ ಹೋಗಿದ್ದರು. ಅಂತಹ ಸಿದ್ದರಾಮಯ್ಯರವರು ಇವತ್ತು ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಕಪ್ಪುಪಟ್ಟಿ ತೋರಿಸಿದ ತಕ್ಷಣ ರೊಚ್ಚಿಗೆದ್ದು ಒಬ್ಬ ಪೊಲೀಸ್ ಅಧಿಕಾರಿಗೆ ಕೈಎತ್ತಲು ಹೋಗುವುದೆಷ್ಟು ಸರಿ? ಈ ಸಂದೇಶ ಸಮಾಜಕ್ಕೆ ಯಾವ ರೀತಿಯಲ್ಲಿ ರವಾನೆಯಾಗುತ್ತದೆ ಎಂಬುದು ಗೊತ್ತಾಗುವುದಿಲ್ಲವೆ? ಈ ಘಟನೆ ಬಳಿಕ ಆಡಳಿತ ಪಕ್ಷವಾಗಿ ಸಿಎಂ, ಡಿಸಿಎಂ ಮತ್ತು ಸಚಿವರು ನೀಡಿರುವ ಹೇಳಿಕೆಗಳು ರಾಜ್ಯದಲ್ಲಿ ನಾಳೆ ಸಂಘರ್ಷಕ್ಕೆ ದಾರಿ ಮಾಡಿಕೊಡುವುದಿಲ್ಲವೆ?

ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆವೇಶದ ಮಾತುಗಳನ್ನಾಡುವ ಬದಲಿಗೆ ಎಲ್ಲವನ್ನೂ ಸಮಾಧಾನವಾಗಿ ನಿಭಾಯಿಸುವುದು ಹೇಗೆ ಎಂಬುದನ್ನು ಅರಿತು ಅದರಂತೆ ನಡೆದುಕೊಳ್ಳುವುದೇ ನಿಜವಾದ ಆಡಳಿತದ ವೈಖರಿಯಾಗುತ್ತದೆ. ಅದರಲ್ಲೂ ಅಧಿಕಾರಿಗಳಿಗೆ ಸಾರ್ವಜನಿಕವಾಗಿ ಏಕವಚನದಲ್ಲಿ ಮಾತನಾಡುವುದು, ಅವಮಾನ ಮಾಡುವುದು, ಕೈಎತ್ತುವುದು ಯಾವ ನಾಗರಿಕ ಸಮಾಜವೂ ಒಪ್ಪುವುದಿಲ್ಲ. ಇಷ್ಟಕ್ಕೂ ಸಿದ್ದರಾಮಯ್ಯರವರು ಸಿಎಂ ಆದ ಬಳಿಕ ನೆಮ್ಮದಿಯಾಗಿದ್ದಂತೆ ಕಾಣುತ್ತಿಲ್ಲ, ವಿವಾದಗಳು ಅವರನ್ನು ಸುತ್ತಿಕೊಳ್ಳುತ್ತಿದೆ. ಅವರ ಮಾತುಗಳು ವಿವಾದವಾಗಿ ರೂಪುಗೊಳ್ಳುತ್ತಿದೆ. ಹೀಗಾಗಿಯೇ ಅವರು ಈ ವರ್ತಿಸುತ್ತಿದ್ದಾರಾ?

ಈ ಹಿಂದೆಯೇ ರಾಜಕೀಯದಿಂದ ದೂರವಾಗುತ್ತೇನೆ ಎಂದು ಘೋಷಣೆ ಮಾಡಿದ್ದ ಅವರು 2023ರಲ್ಲಿ ಅತ್ಯಧಿಕ ಸ್ಥಾನ ಪಡೆದು ಕಾಂಗ್ರೆಸ್ ಆಡಳಿತದ ಅಧಿಕಾರ ಹಿಡಿದಾಗ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯರ ನಡುವೆ ಸಿಎಂ ಸ್ಥಾನಕ್ಕಾಗಿ ಜಟಾಪಟಿ ನಡೆದಿತ್ತು. ಅದಾದ ನಂತರ ಸಿಎಂ ಆದರು. ಆದರೆ ಅಧಿಕಾರ ಹಂಚಿಕೆಯ ಒಪ್ಪಂದ ನಡೆದಿದೆ ಎನ್ನುವುದು ಗುಸುಗುಸು ಸುದ್ದಿಯಾಗಿಯೇ ಉಳಿದಿದೆ. ಅದು ನಿಜವೇ ಆದರೆ ಐದು ವರ್ಷಗಳ ಅವಧಿಯ ಅಧಿಕಾರವನ್ನು ಪೂರ್ಣಗೊಳಿಸಬೇಕೆನ್ನುವ ಅವರ ಬಯಕೆ ಈಡೇರುವುದಿಲ್ಲ. ಆ ವಿಚಾರವೂ ಅವರಿಗೆ ಇರಿಸುಮುರಿಸು ತರುತ್ತಿದೆಯಾ?

ಸದ್ಯದ ಸಿಎಂ ಸಿದ್ದರಾಮಯ್ಯ ಅವರ ರಾಜಕೀಯ ಭವಿಷ್ಯದ ಬಗ್ಗೆ ನೋಡಿದ್ದೇ ಆದರೆ ಅವರಿಗೆ ಎಲ್ಲೋ ಒಂದು ಕಡೆ ರಾಜಕೀಯ ಅಸ್ಥಿರತೆಯ ಭಯ ಹುಟ್ಟಿಕೊಂಡಿದೆಯಾ? ಎಂಬ ಪ್ರಶ್ನೆ ಕಾಡದಿರದು. ಸಿಎಂ ಅವಧಿಯನ್ನು ಪೂರ್ಣಗೊಳಿಸುತ್ತೇನೆ ಎಂಬ ನಂಬಿಕೆ ಇದ್ದಂತೆ ಕಾಣಿಸುತ್ತಿಲ್ಲ. ಜತೆಗೆ ಅವರು ರಾಷ್ಟ್ರರಾಜಕಾರಣಕ್ಕೆ ಹೋಗಿ ಅಲ್ಲಿ ನೆಲೆಯೂರಲು ಸಾಧ್ಯವಿದೆಯಾ ಅದು ಕಷ್ಟವೇ... ಹೀಗಾಗಿ ಅಧಿಕಾರ ಹಂಚಿಕೆಯಾಗದಂತೆ ನೋಡಿಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಿದ್ದಾರಾ? ಹೀಗಾಗಿಯೇ ಒಂದಲ್ಲ ಒಂದು ರೀತಿಯ ರಾಜಕೀಯ ಸರ್ಕಸ್ ಮಾಡುತ್ತಿದ್ದಾರಾ? ಹೀಗೆ ಮಾಡುವಾಗ ಎಡವಟ್ಟುಗಳನ್ನು ಮಾಡಿ ಬಿಜೆಪಿಗೆ ಅಸ್ತ್ರಕೊಡುತ್ತಿದ್ದಾರಾ? ಸದ್ಯಕ್ಕೆ ಸಿದ್ದರಾಮಯ್ಯನವರ ಸುತ್ತಲೂ ಬರೀ ಪ್ರಶ್ನೆಗಳೇ ಹುಟ್ಟಿಕೊಳ್ಳುತ್ತಿವೆ. ಮುಂದೇನು? ಕಾದು ನೋಡೋಣ.






# ‘ಕೈ’ ನಾಯಕರು ರಾಜಕೀಯ ಬಿಡಿ...

ಪಹಲ್ಗಾಮ್‌ನಲ್ಲಿ ನಡೆದ ಹಿಂದೂಗಳ ನರಮೇಧದ ನಂತರ ಇಡೀ ದೇಶದ ಜನ ಪಾಕಿಸ್ತಾನದ ವಿರುದ್ಧ ಆಕ್ರೋಶಗೊಂಡಿದ್ದಾರೆ. ಆ ದೇಶದ ಆಟಾಟೋಪಕ್ಕೆ ಇತಿಶ್ರೀ ಹಾಡಲು ಇದು ಪಕ್ವ ಸಮಯ ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಇಡೀ ದೇಶದ ಜನ ಆಕ್ರೋಶಗೊಂಡಿರುವಾಗ ಮತ್ತು ನಮಗಾದ ಅನ್ಯಾಯಕ್ಕೆ ತಕ್ಕ ಶಾಸ್ತಿ ನೀಡಬೇಕಾದ ಸಮಯದಲ್ಲಿ ಆಡಳಿತದಲ್ಲಿ ಯಾರೇ ಇರಲಿ ಅವರಿಗೆ ಸಾಥ್ ನೀಡುವುದು ಈ ದೇಶದ ರಾಜಕೀಯ ನಾಯಕರ ಮತ್ತು ಪ್ರಜೆಗಳ ಆದ್ಯ ಕರ್ತವ್ಯವಾಗುತ್ತದೆ. ಆದರೆ ರಾಜ್ಯದಲ್ಲಿನ ಕಾಂಗ್ರೆಸ್ ನಾಯಕರ ಹೇಳಿಕೆಗಳು ಅವರು ನಡೆದುಕೊಳ್ಳುವ ರೀತಿ ನೀತಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮುಂದೆ ತೊಂದರೆಯಾಗುವ ಸಾಧ್ಯತೆಯಿದೆ.

ಈ ಹಿಂದೆ ಸಿದ್ದರಾಮಯ್ಯ ಅವರನ್ನು ಹಿಂದೂ ವಿರೋಧಿ ಎಂಬಂತೆ ಬಿಂಬಿಸಲಾಗಿತ್ತು. ಅದರ ಪರಿಣಾಮ 2018ರಲ್ಲಿ ಸೋಲು ಕಾಣುವಂತಾಯಿತು. ಇದೀಗ ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಕೆಲವು ಸಚಿವರ ಹೇಳಿಕೆಗಳು ದೇಶದ ಭದ್ರತೆ ಬಗ್ಗೆ ಮಾತನಾಡುತ್ತಿರುವ ಮಾತುಗಳು ಅವರ ವಿರುದ್ಧ ಜನ ರೊಚ್ಚಿಗೇಳುವಂತೆ ಮಾಡುತ್ತಿದೆ. ಈ ಸಮಯದಲ್ಲಿ ರಾಜಕೀಯ ಬೇಕಾ ಎಂದು ಜನ ಕೇಳುವಂತಾಗಿದೆ.

ಸ್ವಾತಂತ್ರ್ಯ ನಂತರ ಪಾಕಿಸ್ತಾನ ಭಾರತದ ಮೇಲೆ ಮಾಡಿದ ದಾಳಿ, ಉಗ್ರ ಚಟುವಟಿಕೆ ಒಂದೇ ಎರಡೇ? ಎಲ್ಲವನ್ನೂ ಸಹಿಸಿಕೊಂಡು ಉತ್ತರ ಕೊಡುವಲ್ಲಿ ಕೊಡುತ್ತಾ ಬಂದಿದೆ. ಆದರೆ ಯಾವತ್ತೂ ನಮ್ಮ ದೇಶ ಅವರಂತೆ ಹೇಡಿತನದ ಕೃತ್ಯಗಳನ್ನು ಮಾಡಲೇ ಇಲ್ಲ. ಹೀಗಾಗಿಯೇ ಅವರು ಮೇಲಿಂದ ಮೇಲೆ ದಾಳಿ ಮಾಡುತ್ತಲೇ ಬಂದರು. ಕಾಶ್ಮೀರದಲ್ಲಿ ಎಷ್ಟು ನರಮೇಧ ನಡೆಯಿತು? ಅಲ್ಲಿನ ಕಾಶ್ಮೀರಿ ಪಂಡಿತರ ಬದುಕು ಏನಾಯಿತು? ಎಲ್ಲವೂ ನಮ್ಮ ಮುಂದೆಯೇ ಇದೆ. ಆದರೆ ಇಷ್ಟೆಲ್ಲ ಆಗಿದ್ದರೂ ಇವತ್ತು ರಾಜ್ಯದ ಕಾಂಗ್ರೆಸ್ ನಾಯಕರ ಮಾತುಗಳು ಯಾರನ್ನೋ ಓಲೈಸುವಂತಿರುವುದು ಮತ್ತು ಇಂತಹ ಸಂದರ್ಭದಲ್ಲಿಯೂ ರಾಜಕೀಯ ಮಾಡುವುದೆಷ್ಟು ಸರಿ ಎಂಬುದು ಜನ ಕೇಳುತ್ತಿರುವ ಪ್ರಶ್ನೆಯಾಗಿದೆ.

ಇವತ್ತು ಪಹಲ್ಗಾಮ್ ನಲ್ಲಿ ನಡೆದ ದಾಳಿ ಹಿಂದೆ ಏನೇನು ವೈಫಲ್ಯಗಳಾಗಿವೆಯೋ ಅದೆಲ್ಲವೂ ಒತ್ತಟ್ಟಿಗಿರಲಿ. ಅಲ್ಲಿ ವೈಫಲ್ಯವಾಗಿದೆ ಎನ್ನುವುದು ಕಣ್ಣಮುಂದೆ ಇರುವ ಸತ್ಯ. ಅದರ ಕುರಿತಂತೆ ತನಿಖೆಗಳಾಗುತ್ತವೆ. ಆದರೆ ಕಾಲ ಮಿಂಚಿ ಹೋಗಿದೆ. ಇಪ್ಪತ್ತಾರು ಮಂದಿಯ ಪ್ರಾಣವೂ ಹೋಗಿದೆ. ಅವರನ್ನು ಕಳೆದುಕೊಂಡ ಕುಟುಂಬಕ್ಕಷ್ಟೆ ಆ ನೋವು ಗೊತ್ತಿದೆ. ಮತ್ತು ಅದು ಜೀವನದುದ್ದಕ್ಕೂ ಕಹಿ ನೆನಪಾಗಿ ಉಳಿಯಲಿದೆ. ಆದರೆ ಅದಕ್ಕೆ ಪ್ರತಿಕಾರ ತೀರಿಸಿಕೊಳ್ಳುವುದು ಈಗಿನ ಅವಶ್ಯಕತೆಯಾಗಿದೆ. ಭಾರತವನ್ನು ಕೆಣಕಿದರೆ ಏನಾಗುತ್ತದೆ ಎಂಬ ಸಂದೇಶವನ್ನು ರವಾನಿಸುವುದು ದೇಶದ ಮುಂದಿದೆ.

ಪಹಲ್ಗಾಮ್ ಘಟನೆಯ ನಂತರ ಪ್ರಧಾನಿ ನರೇಂದ್ರ ಮೋದಿಯನ್ನು ವಿರೋಧಿಸುವ ಭರದಲ್ಲಿ ಕೆಲವರು ದೇಶದ ಬಗ್ಗೆಯೇ ಹಗುರವಾಗಿ ಮಾತನಾಡುವುದು, ಹೇಳಿಕೆ ನೀಡುವುದು, ಆ ಮೂಲಕ ತಮ್ಮ ಮತಬ್ಯಾಂಕ್‌ನ್ನು ಗಟ್ಟಿಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿರುವುದು ಎದ್ದು ಕಾಣಿಸುತ್ತಿದೆ. ಇದು ಯಾವುದೇ ನಾಯಕರಿಗೆ ಶೋಭೆ ತರುವಂತಹದಲ್ಲ, ಅದಕ್ಕೆ ತಕ್ಕ ಬೆಲೆಯನ್ನು ತೆರಬೇಕಾಗುತ್ತದೆ. ಮೋದಿಯನ್ನು ವಿರೋಧಿಸುವುದನ್ನು ನಿಮ್ಮ ರಾಜಕೀಯದ ತಂತ್ರ ಎಂದು ಭಾವಿಸಿ ದೇಶದ ಜನ ಸುಮ್ಮನಾಗಬಹುದು. ಆದರೆ ನಿಮ್ಮ ಹೇಳಿಕೆಗಳು ಶತ್ರು ರಾಷ್ಟ್ರಗಳಿಗೆ ಆಹಾರವಾಗುತ್ತದೆ ಮತ್ತು ದೇಶದ ಮಾನ ಹರಾಜಾಗುತ್ತದೆ



# ಮೈಸೂರಿನ ಕ್ಯಾತಮಾರನಹಳ್ಳಿ ರೌಡಿ ಶೀಟರ್ ಕಾರ್ತಿಕ್ ಕಗ್ಗೊಲೆ!

**ರೌಡಿ ಶೀಟರ್ ಒಬ್ಬ ಕೊಲೆಯಾದ್ರೆ, ಅವನನ್ನು ನೋಡಲು ಲಕ್ಷಾಂತರ ಜನ ಸೇರುತ್ತಾರೆ ಅಂದ್ರೆ... ಅವನನ್ನು ರೌಡಿ ಅನ್ನಬೇಕಾ, ಜನಸೇವಕ/ಜನ ನಾಯಕ ಅನ್ನಬೇಕಾ ಅರ್ಥವಾಗದು ಕಣ್ರೀ! ಮೊನ್ನೆ 05-05-2025 ಸೋಮವಾರ ಮುಂಜಾನೆ ವೇಳೆ ಮೈಸೂರು ಹೊರ ವಲಯದಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದ ಪ್ರತಿಷ್ಠಿತ ಹೋಟೆಲ್ ಒಂದರ ಮುಂದೆ ರೌಡಿ ಶೀಟರ್ ಕಾರ್ತಿಕ್ ಕಗ್ಗೊಲೆ ನಡೆದಿದೆ!! ಅವನು ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿಯಾಗಿದ್ದು ಅವನ ಶವ ಸಂಸ್ಕಾರಕ್ಕೆ ಜಾತಿ ಧರ್ಮಗಳ ಭೇದವಿಲ್ಲದೆ ಲಕ್ಷಾಂತರ ಜನ ಸೇರಿದ್ದು.... ನೋಡುಗರನ್ನು ವಿಸ್ಮಯಗೊಳಿಸಿದೆ!!!**



ಮೈಸೂರಿನ 'ವರುಣ'ದಲ್ಲಿ 'ಹೋಟೆಲ್ ಯತಿನ್' ಮುಂಭಾಗ ಕಳೆದ 05-05-2025 ಸೋಮವಾರ ಬೆಳಗಿನ ಜಾವ ರೌಡಿಶೀಟರ್ ಕಾರ್ತಿಕ್ (32)ನನ್ನು ಕೆಲ ದುಷ್ಕರ್ಮಿಗಳು ಭೀಕರವಾಗಿ ಕೊಚ್ಚಿ ಕೊಲೆ ಮಾಡಿ ಎಸ್ಕೇಪ್ ಆಗಿದ್ದಾರೆ. ಕ್ಯಾತಮಾರನಹಳ್ಳಿ ನಿವಾಸಿಯಾದ ಕಾರ್ತಿಕ್‌ನ ಕೊಲೆಗೆ ಹಳೆ ವೈಷಮ್ಯವೇ ಕಾರಣವಿರಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕಾರ್ತಿಕ್ ಕೊಲೆ ಕುರಿತು ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೈಸೂರು ಸೌತ್ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜುಂಡ ಶೆಟ್ಟಿ ತನಿಖೆ ನಡೆಸುತ್ತಿದ್ದಾರೆ.



ಎಸ್ಪಿ ವಿಷ್ಣುವರ್ಧನ

ಕಾರ್ತಿಕ್‌ನ ಸೋದರಮಾವ ಪದ್ಮನಾಭ ಹೇಳಿಕೆಯ ಪ್ರಕಾರ, ಕಾರ್ತಿಕ್‌ನನ್ನು ಪ್ರವೀಣ್ ಎಂಬಾತನೇ ಹಳೆ ದ್ವೇಷದಿಂದ ಕೊಲೆ ಮಾಡಿದ್ದಾನೆ! ಕಾರ್ತಿಕ್ ಮತ್ತು ಪ್ರವೀಣನ ನಡುವೆ ಲಕ್ಷ್ಮಿ ಎಂಬ ಆಂಟಿಯ ಲವಿ ಡವಿ ವಿವಾದವಿತ್ತಂತೆ! ಇದೇ ವಿಚಾರಕ್ಕೆ ಈ ಹಿಂದೆ ಗಲಾಟೆಯಾಗಿದ್ದು ಕಾರ್ತಿಕ್ ಪ್ರವೀಣ್‌ಗೆ ಒದ್ದು ತನ್ನ ಗ್ಯಾಂಗ್ ಬಿಟ್ಟು ಓಡಿಸಿದ್ದನಂತೆ! ಕಳೆದ ಒಂದು ವರ್ಷದಿಂದ ಕಾಣೆಯಾಗಿದ್ದ ಪ್ರವೀಣ್ ಈಗ ದಿಢೀರ್ ವರುಣ ಹೋಟೆಲ್ ಮುಂದೆ ಪ್ರತ್ಯಕ್ಷವಾಗಿದ್ದೇಗೆ? ಕಾರ್ತಿಕ್ ಹೋಟೆಲ್‌ನಲ್ಲಿದ್ದ ಸಂಗತಿ ಲಕ್ಷ್ಮಿಗೆ ಮಾತ್ರ ಗೊತ್ತಿತ್ತು. ಈ ಕೊಲೆಯಲ್ಲಿ ಅವಳ ಪಾತ್ರವು ಇರಬಹುದು. ಪೊಲೀಸ್ ವಿಚಾರಣೆಯಿಂದ ಸತ್ಯ ಹೊರಬರಲಿದೆ.... ಎನ್ನುತ್ತಾರೆ.

ಲಕ್ಷ್ಮಿ ವಿಚಾರಕ್ಕೆ ಹೊಡೆದಾಡಿಕೊಂಡು ದೂರವಾಗಿದ್ದ ಕಾರ್ತಿಕ್, ಪ್ರವೀಣ್ ಇಬ್ಬರನ್ನು ಯಾರೋ 'ರಾಜಿ' ಮಾಡುವ ಉದ್ದೇಶದಿಂದ ಕಾರ್ತಿಕ್‌ನನ್ನು ಮಾತನಾಡಲು ಕರೆದು, ಏಮಾರಿಸಿ ಕೊಲೆ ಮಾಡಲಾಗಿದೆ ಎಂದು ಪದ್ಮನಾಭನ್ ಆರೋಪಿಸಿದ್ದಾರೆ.

ಪದ್ಮನಾಭನ್ ಹೇಳಿರುವಂತೆ, ಅಂದು ಕಾರ್ತಿಕ್ ತನ್ನ ಮನೆಗೆ ಬಂದು ಊಟ ಮಾಡಿಕೊಂಡು ಮಲಗಿದ್ದ ಸಂದರ್ಭದಲ್ಲಿ ಪ್ರವೀಣ್ ಮತ್ತಿತರರು ಕಾಲ್ ಮಾಡಿ ಮಾತನಾಡಲು ಕರೆದಿದ್ದಾರೆ. ಆದರೆ, ರಾಜಿಯ ನೆಪದಲ್ಲಿ ಹೊರಗಡೆ ಕರೆಸಿಕೊಂಡು ಕಾರ್ತಿಕ್‌ನನ್ನು ಕೊಲೆಗೈದಿದ್ದಾರೆ. ಕೊಲೆಯಲ್ಲಿ ಕನಕಗಿರಿ, ಅಭಿ, ಸಂಜು ಎಂಬುವವರ ತಂಡದ ಹುಡುಗರೂ ಭಾಗಿಯಾಗಿದ್ದಾರೆ ಎಂಬ ಸುದ್ದಿ ಪಸರ್ ಆಗಿದೆ! ಈ ಗ್ಯಾಂಗ್ ಮೈಸೂರು ಹುಣಸೂರು ಮುಂತಾದ ಕಡೆ ನಡೆದಿರುವ ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಕುಖ್ಯಾತಿ ಹೊಂದಿದೆ!! ಸದ್ಯ, ಮೈಸೂರು ಎಸ್ಪಿ ವಿಷ್ಣುವರ್ಧನ್ ಹಾಗೂ ಆಡಿಷನಲ್ ಎಸ್ಪಿ ನಾಗೇಶ್ ಅವರ ಸಾರಥ್ಯದಲ್ಲಿ ಎರಡು ವಿಶೇಷ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆ ಕಾರ್ಯ ಆರಂಭಿಸಲಾಗಿದೆ.

ಮೈಸೂರು ನಗರ ಹಾಗೂ ಹೊರವಲಯ ಮತ್ತು ಅಕ್ಕ ಪಕ್ಕದ ಜಿಲ್ಲೆಗಳಲ್ಲಿ ತಲಾಷ್ ನಡೆಸಲಾಗುತ್ತಿದೆ. ಸದ್ಯಕ್ಕೆ ಹಣಕಾಸಿನ ವಿಚಾರ ಮತ್ತು ಮಹಿಳೆಯ ವಿಚಾರಕ್ಕೆ ಸಂಬಂಧಿಸಿದಂತೆ ಕೊಲೆ ನಡೆದಿರುವ ಕೋನದಲ್ಲಿ ತನಿಖೆ ನಡೆಯುತ್ತಿದೆ. ಕೊಲೆಯಾದ ಮೃತ ಕಾರ್ತಿಕ್ ಬಳಸುತ್ತಿದ್ದ ಕೆ.ಎ.02, ಎಂ.ಯು. 4810 ನಂಬರಿನ ಬ್ಲಾಕ್ ಕಲರ್ 'ಮಹಿಂದ್ರಾ ಥಾರ್' ಪೊಲೀಸರ ವಶದಲ್ಲಿದೆ.

### ಏಳು ಮಂದಿ ಅರೆಸ್ಟ್!

ಅಂದಹಾಗೆ, ಎಸ್ಪಿ ಎನ್. ವಿಷ್ಣುವರ್ಧನ್ ಟೀಮ್ ಬೀಸಿದ ಬಲೆಗೆ ಹಂತಕರಾದ ಪ್ರವೀಣ್, ಆನಂದ್ ಗೌಡ, ಅವಿನಾಶ್, ಚಂದು, ರವಿ, ಶೆಟ್ಟಿ ತಾಟಗಿತ್ತಿ ಲಕ್ಷ್ಮಿ ಸೇರಿದಂತೆ ಒಟ್ಟು 07 ಆರೋಪಿಗಳು ಬಂಧಿತರಾಗಿದ್ದಾರೆ.

ಈ ಕೊಲೆಗೆ ಕಾರಣ... ಎನ್ನಲಾದ ಲಕ್ಷ್ಮಿ ಅಲ್ಲೇ ಹೋಟೆಲ್‌ನಲ್ಲೇ ಇದ್ದಳಂತೆ. ಉಳಿದವರು ಮಳವಳ್ಳಿಯಲ್ಲಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ! ಕೊಲೆಗಾರರ ಪೈಕಿ ಪ್ರಮುಖ ಆರೋಪಿ ಪ್ರವೀಣ ಈ ಹಿಂದೆ ಕಾರ್ತಿಕ್ ಜೊತೆಯೇ ಇದ್ದು ಇವನ ಕಾರ್ ಓಡಿಸುತ್ತಿದ್ದ. ಲಕ್ಷ್ಮಿ ಆಂಟಿ ವಿಚಾರದಲ್ಲಿ ಮನಸ್ತಾಪವಾಗಿ ಕಾರ್ತಿಕ್ ಇವನನ್ನು ಓಡಿಸಿದ್ದ. ಇಬ್ಬರ ಮಧ್ಯೆ ದ್ವೇಷ ಶುರುವಾಗಿತ್ತು. ಈ ನಡುವೆ ಕಾರ್ತಿಕ್ ಪ್ರವೀಣನ ಕತೆ ಮುಗಿಸಲು ಸ್ಕೆಚ್ ಹಾಕಿದ್ದ. ಈ ವಿಷಯ ಗೊತ್ತಾಗಿ ಪ್ರವೀಣನೆ ಹುಡುಗರ ಗ್ಯಾಂಗ್ ಕಟ್ಟಿಕೊಂಡು ಕಾರ್ತಿಕ್ ಕತೆ ಮುಗಿಸಿದ್ದಾನೆ! ಹೆಣ್ಣಿನ ವಿಚಾರದ ಜೊತೆಗೆ ಆರೋಪಿಗಳ ಜೊತೆ ಬೇರೆ ಬೇರೆ ಮನಸ್ತಾಪಗಳೂ ಇದ್ದವು. ಅದನ್ನೆಲ್ಲ ಮುಂದಿನ ಗೋಷ್ಠಿಯಲ್ಲಿ ತಿಳಿಸುತ್ತೇನೆ ಎಂದಿದ್ದಾರೆ, ಎಸ್ಪಿ ವಿಷ್ಣುವರ್ಧನ್!




ಕಾರ್ತಿಕ್-ಪ್ರವೀಣ್

### ಆಟೋ ಡ್ರೈವರ್

ಕಾರ್ತಿಕ್ ಕೊಲೆಯದಾಗ ಇಡೀ ಮೈಸೂರು ಸ್ತಬ್ದವಾಗಿತ್ತು. ಅವನ ಶವದ ಪೋಸ್ಟ್‌ಮಾರ್ಟಂ ಮಾಡಲು ಕೆ.ಆರ್. ಆಸ್ಪತ್ರೆಗೆ ಬಂದಾಗ ಲಷ್ಕರ್ ಮೊಹಲ್ಲಾ ಮಂಡಿ ಮೊಹಲ್ಲಾ, ಬೊಂಬು ಬಜಾರ್, ಇರ್ವಿನ್ ರಸ್ತೆ.... ಎಲ್ಲಾ ಬ್ಲಾಕ್ ಆಗಿದ್ದವು. ಅಷ್ಟು ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. ಕಾರ್ತಿಕ್‌ನ ಹೆಣವನ್ನು ಮಾರನಹಳ್ಳಿ ಮನೆಗೆ ತಂದಾಗ ಆ ಬೀದಿಯ ತುಂಬಾ ಇರುವೆ ಯೋಪಾದಿಯಲ್ಲಿ ಜನ ಸೇರಿತ್ತು! ಇಷ್ಟು ಜನರ ಸಂಪಾದಿಸಿದ್ದ ಕಾರ್ತಿಕ್ ಬಗ್ಗೆ ಅವನ ಶತ್ರುಗಳಿಗೂ ಹೊಟ್ಟೆಕಿಚ್ಚಾಗಿರಬೇಕು! ಹಾಗೆ ನೋಡಿದರೆ, ಇವನೇನು ದೊಡ್ಡ ಗ್ಯಾಂಗ್‌ಸ್ಟರ್ ಅಲ್ಲವೇ ಅಲ್ಲ. ಕ್ಯಾತ ಮಾರನಹಳ್ಳಿ ಹಿರಿಯರು ಹೇಳುವಂತೆ ಕಾರ್ತಿಕ್ ಕುಟುಂಬ ತಮಿಳು ಮೂಲದ್ದು. ಬಹಳ ವರ್ಷಗಳ ಹಿಂದೆ ಮೈಸೂರಿಗೆ ಬಂದವರು. ಕಾರ್ತಿಕ್ ತಂದೆ ದೈವ ಸಂಕಲ್ಪ, ತಾಯಿ ಶಾಂತಕುಮಾರಿ ಅಂತರ್ಜಾತಿ ವಿವಾಹವಾದವರು. ಅಪ್ಪ ನಾಯಕ, ಅಮ್ಮ ದಲಿತ ಮಹಿಳೆ.

ಅಪ್ಪ ದೈವ ಸಂಕಲ್ಪ ನಾಯಕರ ಪೈಕಿ ಎಂಬ ಕಾರಣಕ್ಕೆ ಹಾಗೂ ಅಮ್ಮ ದಲಿತೆ ಎಂಬ ಕಾರಣಕ್ಕೆ ಕ್ಯಾತ ಮಾರನಹಳ್ಳಿಯಲ್ಲಿರುವ ಬಹು ಸಂಖ್ಯಾತ ನಾಯಕರು ಹಾಗೂ ದಲಿತರು ಕಾರ್ತಿಕ್‌ಗೆ ತಮ್ಮ ಪ್ರೀತ್ಯಾದಾರ ತೋರಿಸುತ್ತಿದ್ದರುಎನ್ನಲಾಗಿದೆ. ಕಾರ್ತಿಕ್ ಇಲ್ಲೇ ಹುಟ್ಟಿ ಇಲ್ಲೇ ಬೆಳೆದ ಹುಡುಗ. ಮೊದಲು ಆಟೋ ಓಡಿಸುತ್ತಿದ್ದ. ಆಮೇಲೆ ನಿಧಾನವಾಗಿ ಬಡ್ಡಿ ವ್ಯವಹಾರ ಶುರುವಿಟ್ಟುಕೊಂಡ. ಸ್ವಲ್ಪ ದುಡ್ಡು ಸೇರುತ್ತಿದ್ದಂಗೆ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಕೈ ಹಾಕಿದ. ಇವೆಲ್ಲಾ ಶುರುವಾದ ಬಳಿಕ

☞ 4



ಕಾರ್ತಿಕ್ ಕೊಲೆ ಆರೋಪಿಗಳು







3 ☜

ರೌಡಿಸಂ ಅನ್ನೋದು ತಾನೇ ತಾನಾಗಿ ಮೈಗೆ ಸುತ್ತಿಕೊಳ್ಳುತ್ತದೆ ಅನ್ನೋದು ಓಪನ್ ಸೀಕ್ರೆಟ್!

ಮೈಸೂರಿನ ಕ್ಯಾತ ಮಾರನಹಳ್ಳಿ ಬೆನ್ನಿನಲ್ಲೇ ಉದಯಗಿರಿ ಇದೆ. ಅಲ್ಲಿ ಮುಸ್ಲಿಂ ಹುಡುಗರ ಹಾವಳಿ ಮಾಮೂಲಿ. ಅಂತಾ ಪ್ರದೇಶದಲ್ಲಿ ಕಾರ್ತಿಕ್ 'ಹಿಂದೂ'ಯಿಸಂ ಬಾವುಟ ಹಾರಿಸಿದ್ದ! ಕೆಲವು ಗಲಾಟೆಗಳಲ್ಲಿ ಭಾಗಿಯಾಗಿ ಹೊಡದಾಟ ನಡೆಸಿದ್ದರಿಂದ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು.



ಇದೇ ಹೋಟೆಲ್ ಮುಂದೆ ಕಾರ್ತಿಕ್ ಕೊಲೆ ನಡೆದದ್ದು

ಕೆಲ ಮಾಸಗಳ ಹಿಂದೆ ಉದಯಗಿರಿ ಪೊಲೀಸ್ ಸ್ಟೇಷನ್ ಗೆ ಬೆಂಕಿ ಬಿದ್ದಾಗ, ಹಿಂದೂ ಮುಸ್ಲಿಂ ಕೋಮು ಗಲಭೆ ತಪ್ಪಿಸುವ ಸಲುವಾಗಿ ಉದಯಗಿರಿ ಪೊಲೀಸರು ಆ ಭಾಗದ ರೌಡಿ ಎಲಿಮೆಂಟ್ ಗಳನ್ನೆಲ್ಲ ಏರಿಯಾ ಬಿಟ್ಟು ಓಡಿಸಿದ್ದರು. ಅರ್ಥಾತ್ ಗಡಿಪಾರು ಮಾಡಲಾಗಿತ್ತು.

ಕಾರ್ತಿಕ್ ವಿರುದ್ಧ ವರುಣ ಪೊಲೀಸ್ ಠಾಣೆಯಲ್ಲಿ ರೌಡಿಶೀಟ್ ಓಪನ್ ಮಾಡಲಾಗಿತ್ತು.ಸಮೀಪದ ಚಿಕ್ಕಹಳ್ಳಿ ಯಲ್ಲಿ ರಿಯಲ್ ಎಸ್ಟೇಟ್ ವ್ಯಾಜ್ಯದ ನಿಮಿತ್ತ ಒಬ್ಬನಿಗೆ ಹಾಫ್ ಮಾಡಿ ಮೈಸೂರು ತುಂಬಾ ಕುಖ್ಯಾತಿ ಸಂಪಾದಿಸಿದ್ದ! ಮೈಸೂರು ಸಿಟಿ ಹಾಗೂ ಹೊರಗಿನ ಹೆಸರಾಂತ ರೌಡಿಗಳ ಸಂಪರ್ಕವಿತ್ತು. ಇವತ್ತು ಇವನಿಗೆ ಮೂರ್ತ ಇಟ್ಟು ಕತೆ ಮುಗಿಸಿದ್ದಾರಲ್ಲ, ಇವರೆಲ್ಲ ಒಂದು ಕಾಲದ ಗೆಳೆಯರೇ!

**ಕುದುರೆ ರೇಸ್...**
**ಇಸ್ಪೀಟ್...**

ಒಬ್ಬ ಮಾಮೂಲಿ ಆಟೋ ಡ್ರೈವರ್ ಆಗಿ ಬದುಕು ಆರಂಭಿಸಿದ್ದ ಕಾರ್ತಿಕ್‌ಗೆ ಇಷ್ಟು ಜನರನ್ನ ಸಂಪಾದನೆ ಮಾಡಲು ಹೇಗೆ ಸಾಧ್ಯವಾಯಿತು? ಎಂದರೆ, ಆತನಲ್ಲಿ ಪರೋಪಕಾರದ ಗುಣ ಜಾಸ್ತಿ ಇತ್ತು. ದಾನ ಧರ್ಮದಲ್ಲಿ ಎತ್ತಿದ ಕೈ. ಅವನಿಗೆ ಜಾತಿ ಧರ್ಮಗಳ ಮೀರಿ ಎಲ್ಲರೊಂದಿಗೂ ಬೆರೆಯುವ ಗುಣವಿತ್ತು. ಯಾರೇ ಕಷ್ಟ ಅಂತ ಬಂದರೂ ಅವರಿಗೆ ಕೈಲಾದಷ್ಟು ಹಣ ಕೊಟ್ಟು ಕಳುಹಿಸುತ್ತಿದ್ದ. ಅವನ ಸಂಪಾದನೆಯಲ್ಲಿ ಮುಕ್ಕಾಲು ಬಾಗ ಜನರಿಗೆ ಹೋಗುತ್ತಿತ್ತು ಅನ್ನುತ್ತಾರೆ ಮೈಸೂರಿನ ಜನ!


ಖತರ್ನಾಕ್ ಆಂಟಿ!

ಬಡ್ಡಿ ವ್ಯವಹಾರ, ರಿಯಲ್ ಎಸ್ಟೇಟ್ ಚೆನ್ನಾಗಿ ಆಗುತ್ತಿತ್ತು. ಜೊತೆಗೆ, ಕುದುರೆ ರೇಸ್ ಕೂಡ ಆಡುತ್ತಿದ್ದನಂತೆ. ಅಲ್ಲದೆ ಇಸ್ಪೀಟ್ ಆಟದಲ್ಲಿ ಕಿಂಗ್ ಅಂತೇ. ಗೆದ್ದ ಹಣವೆಲ್ಲ ಹುಡುಗರಿಗೆ ಪಾರ್ಟಿ ಕೊಡುವುದಕ್ಕೆ ವಿನಿಯೋಗ! ಈಗಿರುವಾಗ ಇಷ್ಟು ಸಂಖ್ಯೆಯ ಅಭಿಮಾನಿ ಬಳಗ ಸೃಷ್ಟಿಯಾಗದಿರಲು ಸಾಧ್ಯವೇ?

ಒಟ್ಟಾರೆ, ಕಾರ್ತಿಕ್ ಎಂಬ ಈ ಹುಡುಗ ಪೊಲೀಸ್ ದೃಷ್ಟಿಯಲ್ಲಿ ರೌಡಿಯಾದರೂ ಪಬ್ಲಿಕ್ ದೃಷ್ಟಿಯಲ್ಲಿ ಹೀರೋ ಆಗಿಯೇ ಬಿಂಬಿಸಲ್ಪಟ್ಟಿದ್ದ! ಮೈಸೂರಿನಲ್ಲಿ ಅವನಿಗಿರುವಷ್ಟು ಹುಡುಗರು ಇನ್ನೊಬ್ಬ ರೌಡಿಗಿರಲಿಲ್ಲ. ಅದನ್ನು ನೋಡಿ ಇತರೆ ರೌಡಿಗಳು ವಿಸ್ಮಯ ಪಡುತ್ತಿದ್ದರು. ಕೆಲವರಿಗೆ ಹೊಟ್ಟೆ ಕಿಚ್ಚು! ಅಂತಿಮವಾಗಿ, ಕಾರ್ತಿಕ್ ತನ್ನ 32ನೇ ವಯಸ್ಸಿನಲ್ಲೇ ಕೊಲೆಯಾಗಿದ್ದಾನೆ! ಇವನ ಕೊಲೆಗೆ ಹೆಣ್ಣಿನ ವ್ಯಾಮೋಹ ಒಂದೇ ಕಾರಣವಲ್ಲ, ಹೆಣ್ಣು ಹೊನ್ನು ಮಣ್ಣು ಜೊತೆಗೆ 'ಕುಖ್ಯಾತಿ' ಹೊಟ್ಟೆ ಕಿಚ್ಚು ಎಲ್ಲಾ ಕಾರಣ... ಹೋಗ್ಲಿ ಬಿಡಿ, ಸತ್ತವನೇನು ಮಹಾತ್ಮ ಗಾಂಧಿಯಲ್ಲ ಅಥವಾ ಸಂವಿಧಾನ ಶಿಲ್ಪಿ ಅಂಬೇಡ್ಕರ್‌ರೂ ಅಲ್ಲ.... ರೌಡಿ ಶೀಟರ್...ದುಷ್ಕರ್ಮಿ! ☯

## ನಾಲ್ಕು ಸಾವಿರ ಜನರಿಗೆ ಊಟ ಹಾಕಿಸಿದ್ದ ಭೂಪ!

ಉದಯಗಿರಿ ಪೊಲೀಸ್ ಕಾರ್ತಿಕ್‌ನನ್ನು ಬಡಾವಣೆಯಿಂದ ಗಡಿಪಾರು ಮಾಡಿದ್ದರಿಂದ ಆತ ಕ್ಯಾತ ಮಾರನಹಳ್ಳಿ ಹಾಗೂ ಸುತ್ತಮುತ್ತಲಿನ ಏರಿಯಾಗಳತ್ತ ಸುಳಿಯುವಂತಿರಲಿಲ್ಲ. ಆದರೆ ಕದ್ದುಮುಚ್ಚಿ ಮನೆಗೆ ಬಂದು ಹೋಗ್ತಿದ್ದ. ಏರಿಯಾ ಹುಡುಗರಿಗೆ ಹೊರಗಡೆ ಹೋಟೆಲ್‌ಗಳಲ್ಲಿ ಸಂಪರ್ಕಿಸಿ ಎಣ್ಣೆ ಹೊಡೆಸುತ್ತಿದ್ದ. ತಿಂಗಳ ಹಿಂದೆ ಮುನೇಶ್ವರನ ಪೂಜೆ ಮಾಡಿಸಿ ಬರೋಬ್ಬರಿ 25 ಟಗರು ಹೊಡೆಸಿ ಸರಿ ಸುಮಾರು 4000 ಜನರಿಗೆ ಬಾಡೂಟ ಹಾಕಿಸಿದ್ದ!

ಇಂಥ ಹುಡುಗ ಕಾರ್ತಿಕ್ ಹೋಗಿ ಹೋಗಿ ಒಬ್ಬಳು ಕಿತ್ತೋದ ಆಂಟಿ ಸಹವಾಸ ಮಾಡಿ ಕಗ್ಗೊಲೆಯಾಗಿದ್ದಾನೆ ನೋಡ್ರಿ!! ಆ ಮುಸುಡಿಗಾಗಿ ಒಬ್ಬ ಸ್ನೇಹಿತನ ಕಳ್ಕೋಬೇಕಿತ್ತಾ? ಅವಳು ನೆಟ್ಟಗಿದ್ರೆ ಈ ಸ್ನೇಹಿತನೇಕೆ ಅವಳಿಗೆ ಕಣ್ಣು ಹಾಕ್ತಿದ್ದ? ಕಿತ್ತೋದ ಹೆಂಗಸಿಗಾಗಿ ಜೊತೆಗಿದ್ದ ಸ್ನೇಹಿತರ ಕಳೆದುಕೊಂಡ ಕಾರ್ತಿಕ್, ಕಡೆಗೆ ಅವಳಿಂದಲೇ, ಆ ಸ್ನೇಹಿತರಿಂದಲೇ ಹೆಣವಾದ!!! ☯

# ಪಾಕಿಸ್ತಾನ್ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ ಹೆಚ್‌ಐವಿ ಪಾಸಿಟಿವ್!
# ಜೈಲಿನಲ್ಲಿ ಸೇನಾ ಮೇಜರ್‌ನಿಂದಲೇ ಅತ್ಯಾಚಾರ!!



ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮೇಲೆ ಪಾಕ್ ಸೇನಾ ಮೇಜರ್ ಜೈಲಿನಲ್ಲಿ ಅತ್ಯಾಚಾರ ಎಸಗಿದ ಸುದ್ದಿ ವೈರಲ್ ಆಗಿದೆ! ಈ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿದೆ. ಇಮ್ರಾನ್ ಖಾನ್ ಹೆಚ್‌ಐವಿ ಪಾಸಿಟಿವ್ ಎಂದು ವರದಿಯಾಗಿದೆ!!

ಕಳೆದ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಹೆಚ್ಚುತ್ತಿದೆ. ಇದರ ಪರಿಣಾಮವಾಗಿಯೇ, ಮೇ 7 ರಿಂದ ನಮ್ಮ ಸೇನೆಯಿಂದ ಜಮ್ಮು ಕಾಶ್ಮೀರದಾದ್ಯಂತ ಉಗ್ರರ ಧಮನ ಕಾರ್ಯ (ಮಾಕ್ ಡ್ರಿಲ್) ಶುರುವಾಗಿದೆ. ಈ ಮಧ್ಯೆ, ಸಾಮಾಜಿಕ ಜಾಲತಾಣದಲ್ಲಿ ಹಾಗೂ ವಿವಿಧ ಮಾಧ್ಯಮ ಗಳಲ್ಲಿ ಒಂದು ಸುದ್ದಿ ಬಹಳ ವೇಗವಾಗಿ ವೈರಲ್ ಆಗುತ್ತಿದೆ... ಹಾಗೂ ಈ ಸುದ್ದಿ ಸಂಚಲನ ಸೃಷ್ಟಿಸಿದೆ. ಹೌದು, ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮೇಲೆ ಅತ್ಯಾಚಾರ ನಡೆದಿದೆಯಂತೆ!

ಇಮ್ರಾನ್ ಖಾನ್ ಕರಾಚಿ ಜೈಲಿನಲ್ಲಿದ್ದ ಸಮಯದಲ್ಲಿ ಪಾಕಿಸ್ತಾನಿ ಸೇನಾ ಮೇಜರ್ ಅವರ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು **JIX5A** ಖಾತೆಯಿಂದ ಬ್ರೇಕಿಂಗ್ ನ್ಯೂಸ್ ಹಂಚಿಕೊಳ್ಳಲಾಗಿದೆ! ಇದನ್ನು ಕೆಲವು ಪಾಕಿಸ್ತಾನಿ ಸಾಮಾಜಿಕ ಮಾಧ್ಯಮ ಖಾತೆಗಳು ದೃಢಪಡಿಸುತ್ತಿವೆ ಮತ್ತು ಕೆಲವು ತನಿಖಾ ವರದಿಗಳು ಸಹ ಇದನ್ನು ಬಹಿರಂಗಪಡಿಸುತ್ತಿವೆ.

**ಪಾಕ್ X ಖಾತೆಯಲ್ಲಿ...**

ಸಾಮಾಜಿಕ ಮಾಧ್ಯಮ ವೇದಿಕೆ X ನಲ್ಲಿ ಇಮ್ರಾನ್ ಖಾನ್ ಮೇಲಿನ ಅತ್ಯಾಚಾರದ ಸುದ್ದಿ ನಿಜವೆಂದು ಹೇಳಲಾಗುತ್ತಿದೆ. ಇಮ್ರಾನ್ ಖಾನ್ ಅವರನ್ನು ಪಾಕಿಸ್ತಾನಿ ಸೇನಾ ಮೇಜರ್ ಒಬ್ಬರು ಅತ್ಯಾಚಾರ ಮಾಡಿದ್ದಾರೆ. ಪಾಕಿಸ್ತಾನಿ ಕೈದಿಗಳಲ್ಲಿ ಪುರುಷರ ಮೇಲಿನ ಲೈಂಗಿಕ ದೌರ್ಜನ್ಯ ಸಾಮಾನ್ಯವಾಗಿದೆ. ಅವರು ವ್ಯಕ್ತಿಯ ಹೆಮ್ಮೆ ಮತ್ತು ಘನತೆಯನ್ನು ಕಸಿದುಕೊಳ್ಳಲು ಇದನ್ನು ಮಾಡುತ್ತಾರೆ ಎಂದು ಮಾಜಿ ಹ್ಯಾಂಡಲ್ ಒಬ್ಬರು ಬರೆದಿದ್ದಾರೆ.

**ಅಧಿಕೃತ ದೃಢೀಕರಣವಿಲ್ಲ!**

ಈ ಎಲ್ಲಾ ಹಕ್ಕುಗಳನ್ನು ಅಧಿಕೃತವಾಗಿ ದೃಢೀಕರಿಸಲಾಗಿಲ್ಲ, ಮಾಧ್ಯಮ ವರದಿಗಳ ಪ್ರಕಾರ, ಮಾರ್ಚ್‌ನಲ್ಲಿ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆರೋಗ್ಯದ ಬಗ್ಗೆ ವರದಿಗಳು ಬಂದ ನಂತರ, ಪಾಕಿಸ್ತಾನಿ ವೈದ್ಯರ ತಂಡವು ಅವರ ವೈದ್ಯಕೀಯ ತಪಾಸಣೆ ನಡೆಸಲು ಅಡಿಯಾಲ ಜೈಲಿಗೆ ಹೋಗಿತ್ತು.ಅವಾಗ ಇಮ್ರಾನ್ ಖಾನ್‌ಗೆ ಏಡ್ಸ್ ಇರುವುದು ಪತ್ತೆ ಯಾಗಿದೆ ಎನ್ನಲಾಗಿದೆ.

**ಕುಟುಂಬಸ್ಥರನ್ನು ಬಿಡುತ್ತಿಲ್ಲ!**

'ಡಾನ್' ವರದಿಯ ಪ್ರಕಾರ ತಪಾಸಣೆ 30 ನಿಮಿಷಗಳ ಕಾಲ ನಡೆಯಿತು. ವರದಿಯನ್ನು ತಕ್ಷಣ ಬಿಡುಗಡೆ ಮಾಡಲಾಗಿಲ್ಲ, ಇಮ್ರಾನ್ ಖಾನ್ ಅವರ ಪಕ್ಷದ ಪಿಟಿಐನ ಮತ್ತೊಬ್ಬ ನಾಯಕರು, ಖಾನ್ ಅವರ ಸಹೋದರಿಯರು ಅಥವಾ ಇತರ ಸಂಬಂಧಿಕರನ್ನು ಭೇಟಿಯಾಗಲು ಸಹ ಅವಕಾಶ ನೀಡುತ್ತಿಲ್ಲ ಎಂದು ಹೇಳಿದ್ದರು. ಖಾನ್ ಅವರ ಕುಟುಂಬ ವೈದ್ಯರಿಗೆ ಅವರನ್ನು ಭೇಟಿ ಮಾಡಲು ಅವಕಾಶ ನೀಡುತ್ತಿಲ್ಲ, ಇದು ಅವರ ಆರೋಗ್ಯದ ಬಗ್ಗೆ ಕಳವಳವನ್ನುಂಟುಮಾಡಿದೆ.

ಅಂದಹಾಗೆ, ಇಮ್ರಾನ್ ಅವರ ವೈದ್ಯಕೀಯ ಪರೀಕ್ಷೆಯನ್ನು ರಾವಲ್ಪಿಂಡಿಯಲ್ಲಿರುವ ಪಾಕ್

☞ 11

# ಲೌಡ್ ಸ್ಪೀಕರ್ ವಿಚಾರಕ್ಕೆ ಪತ್ನಿಯ ಕತ್ತು ಹಿಸುಕಿ ಕೊಂದ ಪತಿರಾಯ!

ಮೊಬೈಲ್ ಲೌಡ್ ಸ್ಪೀಕರ್ ಹಾಕುವ ವಿಚಾರಕ್ಕೆ ದಂಪತಿ ನಡುವೆ ನಡೆದ ಜಗಳದ ವೇಳೆ ಪತ್ನಿಯ ಮೇಲೆ ಹಲ್ಲೆಗೈದು ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ ಪತಿಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಕೊಲೆಯಾದ ನಮಿತಾ ಸಾಹುವಿನೊಂದಿಗೆ ಆರೋಪಿ ಲೋಕೇಶ್‌ಕುಮಾರ್


ಮೊಬೈಲ್ ಲೌಡ್ ಸ್ಪೀಕರ್ ಹಾಕುವ ವಿಚಾರಕ್ಕೆ ದಂಪತಿ ನಡುವೆ ನಡೆದ ಜಗಳದ ವೇಳೆ ಪತ್ನಿಯ ಮೇಲೆ ಹಲ್ಲೆಗೈದು ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ ಪತಿಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹಾಗಣಪತಿನಗರ ನಿವಾಸಿ ಲೋಕೇಶ್ ಕುಮಾರ್ ಗೆಹಲೋಟ್ (43) ಬಂಧಿತ. ಈತ ಏ.24ರಂದು ಸಂಜೆ ಸುಮಾರು 6 ಗಂಟೆಗೆ ಪತ್ನಿ ನಮಿತಾ ಸಾಹು (43) ಜತೆಗೆ ಜಗಳ ತೆಗೆದು ಕೊಲೆ ಮಾಡಿ ಪರಾರಿಯಾಗಿದ್ದ. ಈ ಸಂಬಂಧ ನೀಡಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

**ಏನಿದು ಘಟನೆ?**

ಏಪ್ರಿಲ್ 24ರಂದು ಮಹಾಗಣಪತಿ ನಗರದ ಮನೆಯಲ್ಲಿ ನಮಿತಾ ಸಾಹು ಅವರನ್ನು ಹತ್ಯೆ ಮಾಡಲಾಗಿತ್ತು. ಮನೆ ಮಾಲೀಕ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಲೋಕೇಶ್ ಕುಮಾರ್‌ನನ್ನು ಬಂಧಿಸಿರುವ ಪೊಲೀಸರು ಆತನನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ರಾಜಸ್ಥಾನ ಮೂಲದ ಲೋಕೇಶ್ ಕಬ್ಬನ್ ಪೇಟೆಯಲ್ಲಿ ಫೋಟೋ ಸ್ಟುಡಿಯೋ ನಡೆಸುತ್ತಿದ್ದ. ಐದು ವರ್ಷಗಳ ಹಿಂದೆ ಮ್ಯಾಟ್ರಿಮೊನಿ ಮುಖಾಂತರ ಪರಿಚಿತವಾಗಿದ್ದ ನಮಿತಾ ಸಾಹುರನ್ನು ಮದುವೆ ಆಗಿದ್ದ. ದಂಪತಿಗೆ 3 ವರ್ಷದ ಹೆಣ್ಣು ಮಗುವಿದ್ದು, ಬಸವೇಶ್ವರ ನಗರದ ಮಹಾಗಣಪತಿ ನಗರದ ಬಾಡಿಗೆ ಮನೆಯಲ್ಲಿ ನೆಲೆಸಿದ್ದ ಆರೋಪಿ ಲೋಕೇಶ್ ಏ.24ರಂದು ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ. ಈ ವೇಳೆ ಪತ್ನಿಯ ಅಣ್ಣ ಸತ್ಯಂ, ಲೋಕೇಶ್ ಮೊಬೈಲ್‌ಗೆ ಕರೆ ಮಾಡಿದ್ದರಿಂದ ಆತನೊಂದಿಗೆ ಮಾತನಾಡುತ್ತಿದ್ದ. ಆಗ ಪತ್ನಿ ನಮಿತಾ ಯಾರು ಕರೆ ಮಾಡಿರುವುದು ಎಂದು ಕೇಳಿದ್ದಾರೆ.

ಅದಕ್ಕೆ ನಿಮ್ಮ ಅಣ್ಣ ಎಂದು ಲೋಕೇಶ್ ಹೇಳಿದ್ದಾನೆ. ಹಾಗಾದರೆ, ಲೌಡ್ ಸ್ಪೀಕರ್ ಹಾಕಿಕೊಂಡು ಮಾತನಾಡಿ ಎಂದು ನಮಿತಾ ಹೇಳಿದ್ದಾಳೆ. ಅಷ್ಟಕ್ಕೆ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿದೆ. ಜಗಳ ವಿಕೋಪಕ್ಕೆ ತಿರುಗಿ ಲೋಕೇಶ್ ರೊಚ್ಚಿಗೆದ್ದು ಪತ್ನಿ ಮೇಲೆ ಹಲ್ಲೆ ಮಾಡಿದ್ದಾನೆ. ಬಳಿಕ ಆಕೆಯನ್ನು ನೆಲಕ್ಕೆ ಕೆಡವಿ ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ. ಬಳಿಕ ಮನೆಯ ಮಾಲೀಕ ಭೂಪೇಂದರ್ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.


ಡಿಸಿಪಿ ಎಸ್. ಗಿರೀಶ್


ಆರೋಪಿ ಲೋಕೇಶ್‌ಕುಮಾರ್

**ಡಿಸಿಪಿ ಪ್ರತಿಕ್ರಿಯೆ**

''ಆರೋಪಿ ಪತಿ ಲೋಕೇಶ್ ರಾಜಸ್ಥಾನ ಮೂಲದವ, ನಗರದಲ್ಲಿ ಫೋಟೋ ಸ್ಟುಡಿಯೋ ಇಟ್ಟುಕೊಂಡಿದ್ದ, ಪತ್ನಿ ನಮಿತಾ ಗೃಹಿಣಿಯಾಗಿದ್ದು ಬಸವೇಶ್ವರ ನಗರದಲ್ಲಿ ಇಬ್ಬರೂ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಇವರಿಬ್ಬರ ನಡುವೆ ಪದೇ ಪದೆ ಜಗಳವಾಗುತ್ತಿತ್ತು. ಅಲ್ಲದೆ, ಪತ್ನಿ ಹಾಗೂ ಆಕೆಯ ಸಹೋದರನ ನಡುವೆಯೂ ಆಗಾಗ ಜಗಳ ನಡೆಯುತ್ತಿತ್ತು. ಏಪ್ರಿಲ್ 24ರಂದು ಸಂಜೆ ಕೆಲಸದಿಂದ ಮನೆಗೆ ಬಂದ ಲೋಕೇಶ್, ತನ್ನ ಪತ್ನಿಯ ಅಣ್ಣನೊಂದಿಗೆ ಮಾತನಾಡುತ್ತಿದ್ದ. ಈ ವೇಳೆ ತಾನೂ ಕೇಳಿಸಿಕೊಳ್ಳಬೇಕೆಂದು ಲೌಡ್ ಸ್ಪೀಕರ್ ಹಾಕುವಂತೆ ಪತ್ನಿಯು ಒತ್ತಾಯಿಸಿದ್ದಾಳೆ. ಆದರೆ ಪತಿಯು ಲೌಡ್ ಸ್ಪೀಕರ್ ಆನ್ ಮಾಡುವುದಿಲ್ಲ, ಅಲ್ಲದೆ, ಕಳೆದ 15 ದಿನಗಳಿಂದಲೂ ಜಗಳ ನಡೆಯುತ್ತಿದ್ದ ಮಾಹಿತಿ ಇದ್ದು, ಅದೇ ಸಿಟ್ಟಿನಲ್ಲಿ ಪತ್ನಿಗೆ ಹೊಡೆದು, ಕತ್ತು ಹಿಸುಕಿ ಕೊಲೆ ಮಾಡಿರುವುದು ಗೊತ್ತಾಗಿದೆ. ಈ ಬಗ್ಗೆ ತನಿಖೆ ಕೈಗೊಂಡು, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ'' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಮಾಹಿತಿ ನೀಡಿದ್ದಾರೆ.

# ತನಗಿಂತ ಎರಡು ವರ್ಷ ದೊಡ್ಡವಳೊಂದಿಗೆ ಲವ್ ಮಾಡುತ್ತಿದ್ದ ಯುವಕನ ಹತ್ಯೆ!

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ನೀರುಗುಂಟೆಪಾಳ್ಯದಲ್ಲಿ ಯುವಕನನ್ನು ಕಿಡ್ನಾಪ್ ಮಾಡಿ ಹತ್ಯೆ ಮಾಡಲಾಗಿದೆ. ತನಗಿಂತ ಎರಡು ವರ್ಷ ದೊಡ್ಡವಳಾದ ಯುವತಿಯನ್ನು ಪ್ರೀತಿಸುತ್ತಿದ್ದನು. ಈ ಪ್ರೀತಿಯ ವಿಷಯ ತಿಳಿದು ಯುವತಿಯ ಸಂಬಂಧಿಕರು ಎಚ್ಚರಿಕೆ ನೀಡಿದ್ದರೂ, ಪ್ರೀತಿ ಮುಂದುವರೆಸಿದ್ದರಿಂದ ಕೊಲೆ ಮಾಡಲಾಗಿದೆ ಎಂದು ಆರೋಪ ಕೇಳಿಬಂದಿದೆ.


ಕೊಲೆಯಾದ ಪ್ರೀತಂ

ಯುವಕನನ್ನು ಕಾರಿನಲ್ಲಿ ಕಿಡ್ನ್ಯಾಪ್ ಮಾಡಿ ದುಷ್ಕರ್ಮಿಗಳು ಹತ್ಯೆ ಮಾಡಿರುವಂತಹ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಗ್ರಾಮದಲ್ಲಿ ನಡೆದಿದೆ. ನೀರುಗುಂಟೆಪಾಳ್ಯ ಗ್ರಾಮದ ಪ್ರೀತಂ (19) ಕೊಲೆಯಾದ ಯುವಕ. ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಪೊಲೀಸ್ ಠಾಣೆಯ ಮುಂದೆ ಯುವಕನ ತಾಯಿ ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

**ತನಗಿಂತ 2 ವರ್ಷ ದೊಡ್ಡವಳೊಂದಿಗೆ ಪ್ರೀತಿ**

ಮೃತ ಯುವಕ ಪ್ರೀತಂ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ತನಗಿಂತ 2 ವರ್ಷ ದೊಡ್ಡವಳಾದ ಯುವತಿಯನ್ನು ಪ್ರೀತಿ ಮಾಡುತ್ತಿದ್ದ. ಯುವತಿ ಎಂಬಿಬಿಎಸ್ ಓದುತ್ತಿದ್ದಳು. ಪ್ರೀತಿ ವಿಚಾರ ತಿಳಿದು ಯುವಕನಿಗೆ ಯುವತಿ ಸಂಬಂಧಿಕರು ವಾರ್ನ್ ಮಾಡಿದ್ದರು.

ವಾರ್ನಿಂಗ್ ಮಾಡಿದರೂ ಯುವತಿಯನ್ನು ಪ್ರೀತಂ ಪ್ರೀತಿ ಮಾಡುತ್ತಿದ್ದ. ಈ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿ ಪ್ರೀತಂ ನನ್ನು ಕಿಡ್ನ್ಯಾಪ್ ಮಾಡಿ ಹತ್ಯೆ ಮಾಡಲಾಗಿದೆ. ಯುವತಿ ಚಿಕ್ಕಮ್ಮನ ಮಗ ಶ್ರೀಕಾಂತ್ ಮತ್ತು ಸಹಚರರಿಂದ ಕಿಡ್ನ್ಯಾಪ್ ಮಾಡಲಾಗಿದ್ದು, ಕಂಠಪೂರ್ತಿ ಕುಡಿದು 4-5 ಜನರು ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಈ ವೇಳೆ ಪ್ರೀತಂ ಸಾವು ಹಿನ್ನೆಲೆ ಶವ ಬಿಸಾಕಿ ಆರೋಪಿಗಳು ಎಸ್ಕೇಪ್ ಆಗಿರುವ ಆರೋಪ ಕೇಳಿಬಂದಿದೆ.

ಇತ್ತ ಬೆಳೆದು ನಿಂತಿದ್ದ ಮಗನನ್ನ ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಪೊಲೀಸ್ ಠಾಣೆ ಮುಂದೆ ತಾಯಿ ಮತ್ತು ಸಂಬಂಧಿಕರು ಕಣ್ಣೀರು ಹಾಕಿದ್ದಾರೆ. ಯುವಕನ ಸಾವಿಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಲಾಗಿದೆ.

**ಯುವತಿ ತಂದೆ ಶ್ರೀನಿವಾಸ್ ಹೇಳಿದ್ದಿಷ್ಟು**

ಯುವಕನ ಕೊಲೆ ಸಂಬಂಧ ಯುವತಿ ತಂದೆ ಶ್ರೀನಿವಾಸ್ ಪ್ರತಿಕ್ರಿಯಿಸಿದ್ದು, ನನ್ನ ಮಗಳು ಪಲ್ಲವಿ ಚಿತ್ರದುರ್ಗದಲ್ಲಿ ಎಂಬಿಬಿಎಸ್ ಓದುತ್ತಿದ್ದಾಳೆ. ಈ ಹುಡುಗ ಪತ್ರ ಬರೆದುಕೊಂಡು ನನ್ನ ಮಗಳಿಗೆ ಲವ್ ಮಾಡುತ್ತಿದ್ದು ಇಲ್ಲಾಂದ್ರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದನಂತೆ. ಮಗಳು ಇತ್ತೀಚೆಗೆ ನನ್ನ ಬಳಿ ಹೆಚ್ಚಿನ ಹಣ ಕೇಳುತ್ತಿದ್ದಳು. ಏಕೆ ಎಂದು ಕೇಳಿದ್ದೆ. ಮನೆಗೆ ಬಂದಾಗ ಅವಳ ಫೋನ್ ಚೆಕ್ ಮಾಡಿದಾಗ ಫ್ರೆಂಡ್ ಮೂಲಕ ಕೊಲೆಯಾದ ಪ್ರೀತಂಗೆ ಹಣ ಹಾಕಿಸಿದ್ದಳು. ಕೇಳಿದಕ್ಕೆ ನನ್ನ ಫೋಟೋ ಇಟ್ಕೊಂಡು ಬೆದರಿಸುತ್ತಿದ್ದ, ಅದಕ್ಕೆ ಹಣ ಹಾಕಿದ್ದೆ ಅಂತ ಹೇಳಿದ್ದಳು. ಹೀಗಾಗಿ ನನ್ನ ಮಗಳಿಗೆ ನಾನು ಬೈದು ಬುದ್ಧಿವಾದ ಹೇಳಿದ್ದೆ. ಬಳಿಕ ಸಿಮ್ ಚೇಂಜ್ ಮಾಡಿ ಫೋನ್ ಪೇ ಎಲ್ಲಾ ಡಿಲೀಟ್ ಮಾಡಿಸಿದ್ದೆ. ಆದರೂ ಅವನು ಅವಳನ್ನ ಹುಡುಕಿಕೊಂಡು ಚಿತ್ರದುರ್ಗಕ್ಕೆ ಹೋಗಿ ಕಿರುಕುಳ ನೀಡಿದ್ದ ಎಂದಿದ್ದಾರೆ.



**ನಮ್ಮ ಪತ್ನಿಯ ಅಕ್ಕನ ಮಗ ಈ ರೀತಿ ಮಾಡಿದ್ದಾನೆ: ಶ್ರೀನಿವಾಸ್**

ನಮ್ಮ ಪತ್ನಿಯ ಅಕ್ಕನ ಮಗ ವಿಚಾರ ತಿಳಿದುಕೊಂಡು ಬಂದು ಈ ರೀತಿ ಮಾಡಿದ್ದಾನೆ. ನಮ್ಮ ಮನೆಯಲ್ಲಿ ಸಂಬಂಧಿಕರ ಮದುವೆ ಇತ್ತು. ಮದುವೆಗೆ ಅಂತ ಕಾರು ರೆಡಿ ಮಾಡಿಕೊಂಡು ಬಂದವನು ಈ ರೀತಿ ಮಾಡಿದ್ದಾನೆ. ನಮಗೆ ಪೊಲೀಸರು ಮನೆ ಬಳಿಗೆ ಬಂದ ಮೇಲೆ ಕೊಲೆಯಾಗಿದೆ ಅನ್ನೋ ವಿಚಾರ ಗೊತ್ತಾಗಿದೆ. ಈ ಕೊಲೆ ಕೇಸ್‌ನಲ್ಲಿ ನಮ್ಮದು, ನಮ್ಮ ಮಗಳದ್ದು ಯಾವುದೇ ಪಾತ್ರವಿಲ್ಲ, ನಾನು ಆ ಹುಡುಗನಿಗೆ ಯಾವುದೇ ವಾರ್ನಿಂಗ್ ನೀಡಿಲ್ಲ ಅವನ ಮುಖ ಸಹ ನಾನು ನೋಡಿಲ್ಲ ನಮಗೆ ಮಾಹಿತಿನೇ ಇಲ್ಲದೆ ಬಂದು ಈ ರೀತಿ ಮಾಡಿದ್ದಾನೆ. ನನ್ನ ಪತ್ನಿ ಸಹ ಈ ರೀತಿ ಮಾಡು ಅಂತ ಹೇಳಿಲ್ಲ, ಸಾಲ ಮಾಡಿ ನನ್ನ ಮಗಳನ್ನ ಓದಿಸುತ್ತಿದ್ದೀನಿ, ಕೊಲೆ ಬಗ್ಗೆ ನಮಗೆ ಮಾಹಿತಿ ಇಲ್ಲ, ನಾವೆಲ್ಲ ಮದುವೆಯಲ್ಲಿ ಬ್ಯುಸಿಯಾಗಿದ್ದೆವು ಎಂದು ಹೇಳಿದ್ದಾರೆ.


ಆರೋಪಿ ಶ್ರೀಕಾಂತ್

## ಕ್ರೈಂ ಪ್ರಪಂಚ

# ಅತ್ಯಾಚಾರಿಯ ಶೋಧನೆ

ಅವಳು ಎರಡು ದಿನಗಳಿಗಿಂತ ಜಾಸ್ತಿ ಅಂದರೆ ಸುಮಾರು ಐವತ್ತಾರು ಗಂಟೆಗಳ ಕಾಲ ಮನೆಯಲ್ಲಿ ಇರಲಿಲ್ಲ. ಆತ್ಮೀಯ ಗೆಳತಿಯೊಬ್ಬಳ ಮದುವೆಗೆ ಹೋಗುವುದಾಗಿ ಮನೆಯಲ್ಲಿ ಹೇಳಿದ್ದಳು. ಮನೆಯವರು ಅವಳ ಬಗ್ಗೆ ಯಾವತ್ತೂ ಯಾವ ರೀತಿಯಲ್ಲಿಯೂ ಸಂಶಯ ಪಡುತ್ತಿರಲಿಲ್ಲ.

ಕಾರಣ ಏನು?

ಆಕೆಯ ಗುಣ-ಸ್ವಭಾವ.

ಅವಳೇ ಶ್ರೀಕಲಾ.

ಅವಳು ಧೈರ್ಯವಂತೆ, ಗುಣವಂತೆ. ಅವಳು ರತಿವರ್ಚಸ್ಸಿನ ಆಕರ್ಷಕ ರೂಪವತಿ. ಅವಳನ್ನು ಒಲಿಸಿಕೊಳ್ಳಲು ಕಾಲೇಜಿನ ಪಡ್ಡೆ ಯುವಕರು ಸರ್ಕಸ್ ಮಾಡಿದ್ದರು.

ಅವಳು ತುಂಬಾ ಬೋಲ್ಡ್. ತನ್ನನ್ನು ಕಾಡಿಸುವವರ ಮುಖದ ನೀರಿಳಿಸುತ್ತಿದ್ದಳು. ಹಾಗಾಗಿ ಅವಳ ತಂಟೆಗೆ ಹೋಗಲು ಹೆದರುತ್ತಿದ್ದರು.

ಅವಳ ತಂದೆ ಪ್ರಭುಶಂಕರ್.

ತಾಯಿ ಮಂಗಳಾದೇವಿ.

ಶ್ರೀಕಲಾ ಎರಡೂವರೆ ದಿನಗಳಿಂದ ಫೋನ್ ಮಾಡಿರಲಿಲ್ಲ. ಹಾಗಾಗಿ ಮನೆಯವರು ಗಾಬರಿ ಆಗಿದ್ದರು. ನಂತರ ಅವಳೇ ಫೋನ್ ಮಾಡಿ ಗೆಳತಿಯ ಜೊತೆ ಹಳ್ಳಿಗೆ ಹೋಗಿದ್ದೆ. ಅಲ್ಲಿ ಫೋನ್ ನೆಟ್‌ವರ್ಕ್ ಇರಲಿಲ್ಲ. ಅದೂ ಅಲ್ಲದೆ ನನ್ನ ಮೊಬೈಲ್ ನೀರಿನ ತೊಟ್ಟಿಯಲ್ಲಿ ಬಿದ್ದು ಹಾಳಾಗಿತ್ತು ಎಂದು ಹೇಳಿದ್ದಳು.

ಮಗಳ ಗುಣ ಮತ್ತು ಸ್ವಭಾವ ಗೊತ್ತಿದ್ದರಿಂದ ಅನುಮಾನ ಬರಲಿಲ್ಲ. ಮನೆಗೆ ಬಂದ ಮೇಲೆ ಅವಳು ರೂಮಿನಲ್ಲೇ ಹೆಚ್ಚಿನ ಸಮಯ ಕಳೆದಳು. ಆದರೆ ಮನೆಯವರಿಗೆ ಅನುಮಾನ ಬರಬಾರದು ಅಂತ ಸಹಜವಾಗಿರಲು ಪ್ರಯತ್ನಿಸಿದ್ದಳು.

ಅಕ್ಕ ಭವಾನಿ ಸಹ ಫೋನ್ ಮಾಡಿ ವಿಚಾರಿಸಿಕೊಂಡಿದ್ದಳು. ಅವಳನ್ನು ಅದೇ ಊರಿನ ಗಂಡಿಗೆ ಕೊಟ್ಟು ಮದುವೆ ಮಾಡಿದ್ದರು.

ಶ್ರೀಕಲಾಳ ಭಾವ ರಾಜೇಂದ್ರ!

ಅವನೊಬ್ಬ ಸಾಹಿತಿ.

ಬ್ಯಾಂಕ್ ಉದ್ಯೋಗಿ.

ಅವನು ಆಗಾಗ ಮಾವನ ಮನೆಗೆ ಹೆಂಡತಿಯ ಜತೆ, ಕೆಲವೊಮ್ಮೆ ಒಬ್ಬನೇ ಬರುತ್ತಿದ್ದನು ಎಂಬುದು ನಿಜ.

ಶ್ರೀಕಲಾಳ ಜೊತೆ ತುಂಬಾ ಕ್ಲೋಸ್ ಆಗಿ, ಫ್ರೀಯಾಗಿ ಇರುತ್ತಿದ್ದನು. ಅಕ್ಕನ ಗಂಡನ ಬಗ್ಗೆ ಪ್ರಾರಂಭದಲ್ಲಿ ಸಂಶಯ ಇರಲಿಲ್ಲ. ಆದರೆ ಅವನ ನೋಟದಲ್ಲಿದ್ದ ಸೌಂದರ್ಯ ಆರಾಧನೆ ಮತ್ತು ಸುಪ್ತವಾಗಿ ಹೆಪ್ಪುಗಟ್ಟಿದ್ದ ಬಯಕೆಯ ಛಾಯೆಯನ್ನು ಗುರುತಿಸಿದ್ದಳು. ಅಂದಿನಿಂದ ಅವಳು ಭಾವನ ಜೊತೆ ಬಿಗಿಯಾಗಿರುತ್ತಿದ್ದಾಳೆ.

ಅವಳು ರೂಮಲ್ಲಿರುವ ಕಿಟಕಿಯ ಹತ್ತಿರ ನಿಂತುಕೊಂಡು ಚಿಂತಿಸುತ್ತಿದ್ದಾಳೆ.

ಗಾಳಿ ಬೀಸುತ್ತಿದೆ.

ಮುಂಗುರುಳು ಕೆದರಿ ಅವಳ ಮುಖದ ಮೇಲೆ ಲಾಸ್ಯ ಆಡುತ್ತಿದೆ. ಅವಳ ಮುದ್ದಾದ ಮುಖದಲ್ಲಿ ವ್ಯಗ್ರತೆ ಕಂಡು ಬರುತ್ತಿದೆ. ಕೋಪದಿಂದ ಬಿರುಸಾಗುತ್ತಿದ್ದಾಳೆ.

ಬೆರಳುಗಳು ಪರಸ್ಪರ ಬಿಗಿಯುತ್ತಾ ಹಿಡಿ ಮುಷ್ಠಿ ಆಗುತ್ತಿದೆ.

ಕಣ್ಣುಗಳು ಕೆಂಪಾಗಿವೆ.

ಹಲ್ಲುಕಡಿಯುತ್ತಿದ್ದಾಳೆ.

ಮೊಬೈಲ್ ಮ್ಯೂಸಿಕಲ್ ಸೌಂಡ್ ಕೇಳಿದ್ದರಿಂದ ಅವಳು ಬದಲಾದಳು. ಜೋರಾಗಿ ಉಸಿರು ಬಿಡುತ್ತಾ ಮೊಬೈಲ್ ಎತ್ತಿಕೊಂಡಳು.

ಶ್ರೀವತ್ಸ ಕಾಲಿಂಗ್...!

ಅವಳು ಅಟೆಂಡ್ ಮಾಡಿದ ಕೂಡಲೇ ''ಏ... ಮಹಾಕಾಳಿ, ದುರ್ಗಿ... ಎರಡು ದಿನಗಳಿಗಿಂತ ಜಾಸ್ತಿ ಆಗಿದೆ ನಿನ್ನ ಧ್ವನಿ ಕೇಳಿ. ಮುಖದರ್ಶನ ಅಂತು ಇಲ್ಲವೇ ಇಲ್ಲ. ಎಲ್ಲಿ ಹಾಳಾಗಿ ಹೋಗಿದ್ದೆ? ನಿನ್ನ ಮೊಬೈಲ್‌ಗೆ ಅದ್ಯಾವ ವೈರಸ್ ಬಡಿದಿತ್ತು? ಅಲ್ಲಾ... ನನಗೆ ಫೋನ್ ಮಾಡ್ಬೇಕು ಅಂತ ಅನಿಸಲಿಲ್ವ? ಛೇ... ಛೇ... ನೀನು... ನೀನು...'' ಎನ್ನುತ್ತಿರುವಾಗಲೇ ಅವಳು ಗಂಭೀರವಾಗಿ ''ಏ ಶ್ರೀವತ್ಸ... ಈ ಕೂಡಲೇ ನಿನ್ನನ್ನು ಪರ್ಸನಲ್ ಆಗಿ ಮೀಟ್ ಮಾಡ್ಬೇಕು. ಎಲ್ಲಿ ಸಿಗುತ್ತೀಯ?''

''ಯಾಕೆ... ಏನಾಯ್ತು? ಯಾಕೋ ತುಂಬಾ ಟೆನ್ಷನ್ ಮಾಡಿಕೊಂಡಿರೋ ಹಾಗಿದೆ.''

ಅವಳು ರೇಗಿದಳು.

''ಕೇಳಿದ ಪ್ರಶ್ನೆಗೆ ಉತ್ತರ ಕೊಡು. ನಿನ್ನ ಜೊತೆ ಮಾತಾಡ್ಬೇಕು.''

''ಎನಿ ಥಿಂಗ್ ಸೀರಿಯಸ್?''

''ಹೌದು ಶ್ರೀವತ್ಸ.''

''ಹಾಗಾದರೆ ನಾನೇ ನಿನ್ನ ಮನೆಗೆ ಬರ್ತೀನಿ ಬಿಡು.''

''ಇಲ್ಲಿ ಅಪ್ಪ-ಅಮ್ಮ ಇದ್ದಾರೆ. ಅಕ್ಕ ಮತ್ತು ಭಾವ ಬರ್ತಾರೆ ಅಂತ ಅಮ್ಮ ಹೇಳಿದ್ರು.''

''ನನ್ನ ಮನೆಗೆ ಬಾ.''

''ಅಲ್ಲಿ ನಿನ್ನ ಡ್ಯಾಡಿ-ಮಮ್ಮಿ...''

''ಅವರಿಬ್ಬರು ಡ್ಯೂಟಿಗೆ ಹೋಗಿರೋದು ಗೊತ್ತಿಲ್ವ? ಬರೋದು ಸಂಜೆ ಆಗುತ್ತೆ.''

''ಹಾಗಾದರೆ ಈಗಲೇ ಬರ್ತೀನಿ.''

●●●

ಶ್ರೀವತ್ಸ ಯಾರು?

ಈ ಕುಟುಂಬದಲ್ಲಿ ತುಂಬಾ ಮುಖ್ಯವಾಗಿರುವ ವ್ಯಕ್ತಿ. ಶ್ರೀಕಲಾ ಇವನಿಗೆ ಕೆಲವು ಸಲ ಕೆಮಿಸ್ಟ್ರಿ, ಫಿಜಿಕ್ಸ್ ಪಾಠ ಹೇಳಿಕೊಟ್ಟಿದ್ದಾಳೆ. ಇವನು ಮನೆಯ ಮಗನ ರೀತಿ ಇದ್ದಾನೆ. ಎರಡು ಕುಟುಂಬಗಳ ನಡುವೆ ಆತ್ಮೀಯ ಸಂಬಂಧ ಮತ್ತು ಒಡನಾಟ ಇದೆ. ಎಷ್ಟೋ ರಾತ್ರಿ ಶ್ರೀವತ್ಸ ಇವರ ಮನೇಲಿ ಉಳಿದಿದ್ದಾನೆ. ಅವಳೂ ಸಹ ಅವನ ಮನೆಯವರ ಜೊತೆ ಟೂರ್‌ಗೆ ಸಹ ಹೋಗಿದ್ದಾಳೆ.

ಶ್ರೀಕಲಾ ನಂಬಿರೋದು ಇವನನ್ನು ಮಾತ್ರ. ಕಾಲೇಜಿಗೆ ಅಥವಾ ಬೇರೆ ಎಲ್ಲಿಗೆ ಹೋಗಬೇಕಾದರೂ ಸಹ ಇವಳನ್ನು ತನ್ನ ಬೈಕಲ್ಲಿ ಕರೆದುಕೊಂಡು ಹೋಗುತ್ತಾನೆ. ಅಗತ್ಯ ಬಂದಾಗಲೆಲ್ಲಾ ಅವಳೇ ಫೋನ್ ಮಾಡುತ್ತಾಳೆ.

''ಏ ಶ್ರೀವತ್ಸ... ಬೈಕ್ ತಗೊಂಡು ಮನೆ ಹತ್ತಿರ ಬಾ.''

''ಮಹಾರಾಣಿಯ ಸವಾರಿ ಯಾವ ಕಡೆಗೆ?''

''ಪರ್ಚೇಸಿಂಗ್ ಮಾಡ್ಬೇಕಾ?''

''ನಾಳೆ ಡಿಸೆಂಬರ್ ಮೂವತ್ತೊಂದು. ನನ್ನ ಗೆಳತಿ ರಾಧಿಕಾಳ ಮನೇಲಿ ನ್ಯೂ ಈಯರ್ ಡೇ ಸೆಲಬರೇಷನ್ ಫಂಕ್ಷನ್ ಮತ್ತು ಅವಳ ಬರ್ತ್‌ಡೇ ಕಾರ್ಯಕ್ರಮ ಇದೆ. ಅವಳಿಗೆ ಗಿಫ್ಟ್ ಆರ್ಟಿಕಲ್ ತರಬೇಕು.''

''ನ್ಯೂ ಈಯರ್ ಡೇ ಪಾರ್ಟಿನಾ? ಏ... ರಾಧಿಕ ಶ್ರೀಮಂತರ ಕುಟುಂಬದವಳು. ಗುಂಡು-ತುಂಡಿನ ಪಾರ್ಟಿ ಇರುತ್ತೆ. ನೀನು ಗುಂಡು ಹಾಕಿ ಡ್ಯಾನ್ಸ್ ಮಾಡ್ತೀಯ?''

''ಏ ತರ್ಲೆ... ಏನೇನೋ ಮಾತಾಡ್ಬೇಡ. ನನ್ನ ಹವ್ಯಾಸಗಳ ಬಗ್ಗೆ ನಿಂಗೆ ಗೊತ್ತಿಲ್ವ?''

''ಸಾರಿ ಮೇಡಂ.''

''ಬೈಕ್ ತಗೊಂಡು ಬೇಗ ಬಾ.''

ನಂತರ ನಡೆದದ್ದು ಏನು?

ಅವಳು ಡಿಸೆಂಬರ್ 31ರ ರಾತ್ರಿ ಫೋನ್ ಮಾಡಿದ್ದಳು ''ಏ ಶ್ರೀವತ್ಸ... ನಾನು ರಾಧಿಕಾಳ ಮನೆ ಫಂಕ್ಷನ್‌ಗೆ ಹೋಗ್ಬೇಕು. ಬೇಗ ಬೈಕ್ ತಗೊಂಡು ಬಾ.''

''ನೀನು ಪಾರ್ಟಿ ಎಂಜಾಯ್ ಮಾಡ್ತೀಯ. ನಾನು ಬಂಗಲೆ ಹೊರಗೆ ನಿಂತಿರಬೇಕ?''

''ಏ ಪಾರ್ಟಿ ಮುಗಿಯೋದು ತಡ ಆಗುತ್ತೆ. ನನ್ನ ಆ ಮನೆ ಹತ್ತಿರ ಬಿಟ್ಟು ನೀನು ಹೋಗು. ಫಂಕ್ಷನ್ ಮುಗಿದ ಮೇಲೆ ಫೋನ್ ಮಾಡ್ತೀನಿ'' ಎಂದು ಕರೆದುಕೊಂಡು ಹೋಗು.''

''ಅಂದರೆ ರಾತ್ರಿ ಒಂದು ಗಂಟೆತನಕ ಎಚ್ಚರವಾಗಿರಬೇಕು.''

''ನನಗೋಸ್ಕರ ಪ್ಲೀಸ್...''

''ಓಕೆ ಮೇಡಂ.''

ಅವಳು ಹೇಳಿದಂತೆ ರಾತ್ರಿ ಒಂಭತ್ತು ಗಂಟೆಗೆ ಬೈಕಲ್ಲಿ ಅವಳನ್ನು ಕರೆದುಕೊಂಡು ಹೋಗಿ ಬಿಟ್ಟು ಬಂದಿದ್ದನು.

ಈಗ ಅವರಿಬ್ಬರು ಎದುರು ಬದರಾಗಿ ನಿಂತಿದ್ದಾರೆ.

ಅದು ಶ್ರೀವತ್ಸನ ಮನೆ.

ಅಲ್ಲಿ ಬೇರೆ ಯಾರೂ ಇರಲಿಲ್ಲ.

ಶ್ರೀವತ್ಸ ''ಅವತ್ತು ರಾತ್ರಿ ನಾನು ಮನೆಗೆ ಬಂದು ಟಿವಿ ನೋಡುತ್ತಾ ಮಲಗಿದ್ದೆ. ನಿನ್ನ ಫೋನ್ ಕಾಲ್‌ಗಾಗಿ ಕಾಯುತ್ತಿದ್ದೆ. ನಂಗೆ ನಿದ್ದೆ ಬಂದುಬಿಡ್ತು. ನಾನು ಮೊಬೈಲ್ ಅನ್ನು ಫುಲ್ ರಿಂಗಿಂಗ್ ಟ್ಯೂನ್‌ನಲ್ಲಿ ಇಟ್ಟಿದ್ದೆ. ನಿನ್ನಿಂದ ಫೋನ್ ಕಾಲ್ ಬರಲಿಲ್ಲ'' ಎಂದನು.

ಅವಳ ಮುಖ ಬಿರುಸಾಗುತ್ತಿದೆ.

ಕಣ್ಣುಗಳು ಹನಿಗೂಡುತ್ತಿದೆ.

ವಿಶೇಷತೆ ಏನು?

ಕಂಬನಿಯ ಕಣ್ಣುಗಳಲ್ಲಿ ಕಂಡು ಬರುತ್ತಿದೆ ಕೋಪದ ಕೆಂಪು ಛಾಯೆ.

ಅವನು ಗಾಬರಿಯಿಂದ ''ಶ್ರೀಕಲಾ... ಯಾಕೆ... ಏನಾಯ್ತು? ನೀನು ಮನೇಲಿ ಸುಳ್ಳು ಹೇಳಿದ್ದೀಯ. ನನಗೆ ಗೊತ್ತಿದ್ದರೂ ನಿನ್ನ ತಂದೆಗೆ ನಿಜ ಹೇಳಲಿಲ್ಲ.''

ಅವಳು ಶೀತಲ ಧ್ವನಿಯಲ್ಲಿ ''ನಾನು ಫೋನ್ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ.''

ಅವನು ಗಾಬರಿಯಿಂದ ''ಯಾಕೆ?''

''ಆ ಪಾರ್ಟಿಯಲ್ಲಿ ಕಾಲೇಜಿನ ಗೆಳತಿಯರು ತಂಪು ಪಾನೀಯದಲ್ಲಿ ವಿಸ್ಕಿ ಬೆರೆಸಿ ಕುಡಿಸಿದ್ದರು. ವಾಸನೆಯಿಂದ ಅನುಮಾನ ಬಂದು ವಿರೋಧಿಸಿದೆ. ಇವತ್ತೊಂದು ದಿವಸ ಎಂಜಾಯ್ ಮಾಡು ಅಂತ ಬಲವಂತವಾಗಿ ಕುಡಿಸಿದರು. ನಾನು ಅಮಲಿನಿಂದ ತೂರಾಡುತ್ತಿದ್ದೆ. ನಂತರ ಏನಾಯಿತು ಅಂತ ಗೊತ್ತಾಗಲಿಲ್ಲ.''

''ಅಂದರೆ... ಅಂದರೆ...''

''ನಿನಗೊಂದು ಸತ್ಯ ಹೇಳ್ತೀನಿ. ಅದನ್ನು ನೀನು ಕೇಳಿದರೂ ಕೆರಳಬಾರದು. ರಂಪ-ರಾದ್ಧಾಂತ ಮಾಡಬಾರದು.''

ಅವನು ಬದಲಾದನು.

ಮುಖ ಬಿರುಸಾಗುತ್ತಿದೆ.

''ಅಂತಾದ್ದು ಏನು ನಡೆಯಿತು?''

ತುಂಬಾ ಮೆಲ್ಲಗೆ ಹೇಳಿದಳು.

''ಅತ್ಯಾಚಾರ... ರೇಪ್...''

ಅವನು ಬೆಚ್ಚಿಬಿದ್ದನು.

''ಏನು... ಏನಂದೆ?''

''ಎರಡು ದಿನಗಳ ಕಾಲ ಹಗಲು-ರಾತ್ರಿ ನನ್ನ ಮೇಲೆ ಅತ್ಯಾಚಾರ ನಡೆಯಿತು.

ಕೆರಳಿಬಿಟ್ಟನು ಶ್ರೀವತ್ಸ.

''ಯಾರು... ಯಾರವರು... ಅವನ್ಯಾರೇ ಆಗಿದ್ದರೂ ಮೈ ಮೂಳೆಗಳನ್ನು ಅಲ್ಲಾಡಿಸಿಬಿಡ್ತೀನಿ. ಇನ್ಯಾವತ್ತೂ ಹೆಂಗಸರ ಹತ್ತಿರ ಹೋಗದಂತೆ ಮಾಡ್ತೀನಿ.''

ಅವಳು ಅವನ ಕೈ ಮೇಲೆ ಕೈ ಹಾಕಿ ಅದುಮುತ್ತಾ ''ನಾನಾಗಲೇ ಹೇಳಿದ್ದೇನೆ. ನೀನು ಎಗ್ಸೈಟ್ ಆಗಬಾರದು ಅಂತ'' ಎಂದಳು.

''ಆ ರೇಪಿಸ್ಟ್ ಯಾರು?''

''ಗೊತ್ತಿಲ್ಲ ಶ್ರೀವತ್ಸ.''

ಅವನು ಕೋಪದಿಂದ ''ಎರಡು ದಿನಗಳ ಕಾಲ ನಿನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ. ಹಾಗಿದ್ದರೂ ನಿನಗೆ ಅವನು ಗೊತ್ತಿಲ್ವ'' ಎಂದು ಕೇಳಿದನು.

ಅವಳು ನಿಟ್ಟುಸಿರುಬಿಟ್ಟಳು.

''ಡಿಸೆಂಬರ್ 31ರ ರಾತ್ರಿ ಗೆಳತಿಯರೆಲ್ಲಾ ಸೇರಿ ಪಾರ್ಟಿ ಮಾಡಿದ್ದರು. ನನಗೆ ವಿಸ್ಕಿ ಕುಡಿಸಿದ್ದರು. ಆಗ ನಾನು ಅಮಲಿನಲ್ಲಿದ್ದೆ. ನನ್ನ ಅಲ್ಲಿಂದ ಯಾರು ಕರೆದುಕೊಂಡು ಹೋದ್ರು? ಎಲ್ಲಿಗೆ ಕರೆದುಕೊಂಡು ಹೋದ್ರು ಅಂತ ಗೊತ್ತಿಲ್ಲ. ಆಮೇಲೆ ನನಗೆ ಆಗಾಗ ಅಮಲೇರುವ ವಿಸ್ಕಿ, ರಮ್ ಏನೇನೋ ಕುಡಿಸಿ ಬಲವಂತವಾಗಿ ತಿನ್ನಿಸುತ್ತಿದ್ದರು. ನಾನು ಪೂರ್ತಿ ಅಮಲಿನಲ್ಲಿ ಇರಲಿಲ್ಲ. ಆ ಕಾಮುಕ ನನ್ನ ದೇಹದ ಅಂಗ, ಅಂಗಗಳಲ್ಲಿ ಬಯಕೆಗಳು ಕೆರಳುವ ರೀತಿ ಶೃಂಗಾರದಾಟ ಆಡುತ್ತಿದ್ದ. ನಾನು ಪ್ರಾಯದ ಯುವತಿ. ಅಮಲು ಮತ್ತು ಈ ಶೃಂಗಾರ ಪ್ರಚೋದನೆಯ ಕಾರಣದಿಂದ ಸ್ಪಂದಿಸಿದೆ. ಎರಡು ದಿನಗಳ ಕಾಲ ನಿರಂತರವಾಗಿ ರತಿ ಸುಖದ ಅನುಭವ ಮಾಡಿಕೊಂಡೆ. ನನ್ನ ಮೈಮೇಲೆ ಎಲ್ಲಿಯೂ ಗಾಯ ಆಗಿರಲಿಲ್ಲ.''

ನೀನು ಮನೆಗೆ ಹೇಗೆ ಬಂದೆ?''

''ನಾನು ಮನೆಗೆ ಹೋಗಲಿಲ್ಲ. ಎಚ್ಚರವಾದಾಗ ಆ ಅಮಲಿನ ಮತ್ತು ಕಾಮಸುಖದ ಗುಂಗಿನಲ್ಲಿದ್ದೆ. ತುಂಬಾ ಹೊತ್ತಿನ ನಂತರ ವಾಸ್ತವ ಸಂಗತಿ ತಿಳಿಯಿತು. ಗಾಬರಿಯಿಂದ ಎದ್ದು ಕುಳಿತು ಎಲ್ಲಾ ಕಡೆ ನೋಡಿದ್ದೆ. ಅಲ್ಲಿ ಯಾರೂ ಇರಲಿಲ್ಲ. ಆಗ ಬೆಳಗಿನ ಹತ್ತು ಗಂಟೆ ಆಗುತ್ತಾ, ದೂರದಲ್ಲಿದ್ದ ಟೀಪಾಯಿಯ ಮೇಲೆ ನನ್ನ ಮೊಬೈಲ್ ಇತ್ತು. ಅದನ್ನು ಸ್ವಿಚ್ ಆಫ್ ಮಾಡಲಾಗಿತ್ತು. ಓಪನ್ ಮಾಡಿ ನೋಡಿದೆ. ಅವತ್ತಿನ ದಿನಾಂಕ ಜನವರಿ ಮೂರನೇ ತಾರೀಖು ಆಗಿತ್ತು. ಅಂದರೆ ಎರಡೂವರೆ ದಿನಗಳಿಗಿಂತ ಜಾಸ್ತಿ ಬೇರೊಂದು ಲೋಕದಲ್ಲಿದ್ದೆ ಎಂದು ತಿಳಿಯಿತು. ಪುಣ್ಯಕ್ಕೆ ಆ ಮನೇಲಿ ಎಲ್ಲಾ ಅನುಕೂಲ ಇತ್ತು. ಸ್ನಾನ ಮಾಡಿ ತಲೆ ಬಾಚಿಕೊಂಡೆ. ಮಂಚದ ಮೂಲೆಯಲ್ಲಿ ನನ್ನ ಎಲ್ಲಾ ಉಡುಪುಗಳು ಬಿದ್ದಿದ್ದವು. ನಾನು ಡ್ರೆಸ್ ಮಾಡಿಕೊಂಡೆ. ಈ ಸ್ಥಿತಿಯಲ್ಲಿ ಮನೆಗೆ ಹೋಗಬಾರದು ಅಂತ ನನ್ನ ಕ್ಲೋಸ್ ಫ್ರೆಂಡ್ ಮನೆಗೆ ಹೋಗಿದ್ದೆ. ಆಮೇಲೆ ಮನೆಗೆ ಬಂದು ಅಪ್ಪ-ಅಮ್ಮನಿಗೆ ನಂಬಿಕೆ ಬರುವಂತ ಸುಳ್ಳು ಹೇಳಿದೆ'' ಎಂದು ಹೇಳಿ ಜೋರಾಗಿ ಉಸಿರು ಬಿಡುತ್ತಾ ''ಇಂತಹ ಕೆಟ್ಟ ಘಟನೆ ನನ್ನ ಬದುಕಲ್ಲಿ ನಡೆಯುತ್ತದೆ ಅಂತ ತಿಳಿದಿರಲಿಲ್ಲ.''

ಶ್ರೀವತ್ಸ ''ಆ ಮನೆ ಎಲ್ಲಿದೆ? ಅದು ಯಾರ ಮನೆ?''

''ಶಂಕರಪುರಂ ಬಡಾವಣೆ. ಆ ಮನೆ ಯಾರದ್ದು ಸರಿಯಾದ ವಿಳಾಸ ಏನು ಎಂಬುದನ್ನು ಗಮನಿಸುವ ಸ್ಥಿತಿಯಲ್ಲಿ ಇರಲಿಲ್ಲ. ಆಟೋ ಹತ್ತಿ ಫ್ರೆಂಡ್ ಮನೆಗೆ ಬಂದೆ.''

ಶ್ರೀವತ್ಸ ಕೋಪದಿಂದ ''ಆ ರೇಪಿಸ್ಟ್ ಯಾರು ಅಂತ ಪತ್ತೆ ಮಾಡ್ತೀನಿ. ಆಮೇಲೆ ನಾನು ರಾಕ್ಷಸ ಆಗ್ತೀನಿ. ವನನ್ನು ಕೊಲೆ ಮಾಡಲ್ಲ. ಬದುಕಿರುವತನಕ ಎದ್ದು ತಿರುಗಾಡಬಾರದು ಆ ರೀತಿ ಮಾಡ್ತೀನಿ'' ಎಂದು ಹಲ್ಲು ಕಡಿದನು.

ಅವಳು ''ಶ್ರೀವತ್ಸ... ನೀನು ಕೋಪ, ಆವೇಶದಿಂದ ದುಡುಕಿದರೆ ಇದು ಬಹಿರಂಗ ಆಗುತ್ತದೆ. ನಾನು ಶೀಲ ಕಳೆದುಕೊಂಡಿರುವ ಹೆಣ್ಣು ಅಂತ ಪ್ರಚಾರ ಆಗುತ್ತೆ. ಈ ವಿಚಾರದಲ್ಲಿ ನೀನು ತುಂಬಾ ಸಹನೆಯಿಂದ ನಾನು ಹೇಳಿದಂತೆ ತನಿಖೆ ಮಾಡಬೇಕು.''

ಅವನು ನಿಟ್ಟುಸಿರುಬಿಡುತ್ತಾ ''ಸಾರಿ ಶ್ರೀಕಲಾ... ನಿನಗೆ ಈ ರೀತಿ ಅನ್ಯಾಯ ಆಗಿರೋದನ್ನ ಸಹಿಸಲು ಆಗಲಿಲ್ಲ. ಓಕೆ. ಮೊದಲು ಆ ರೇಪಿಸ್ಟ್ ಯಾರು ಅಂತ ಪತ್ತೆ ಮಾಡೋಣ. ನಿನ್ನನ್ನು ಫ್ರೆಂಡ್ ರಾಧಿಕಾಳ ಮನೆಯಿಂದ ಯಾರು ಕರೆದುಕೊಂಡು ಹೋದ್ರು.''

☞10


# ಮನೆಯೊಳಗೆ ಲವ್ವರ್ ಜೊತೆ ಪತ್ನಿ ಚಕ್ಕಂದ; ಕಣ್ಣಾರೆ ಕಂಡ ಪತಿ ಇಬ್ಬರನ್ನೂ ಹತ್ಯೆಗೈದ!



ಆರೋಪಿ ಶ್ರೀಮಂತ

**ಆತ ಲೈಬ್ರರಿಯಲ್ಲಿ ಅಟೆಂಡರ್ ಕೆಲಸದ ಜೊತೆ ರೇಷನ್ ಅಂಗಡಿಯಲ್ಲಿ ಕಂಪ್ಯೂಟರ್ ಡಾಟಾ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ. ನಿತ್ಯ ಹತ್ತಾರು ಜನರು ಬರುವಂತೆ ಆಧಾರ್ ಕಾರ್ಡ್‌ಗೆ ಮೊಬೈಲ್ ನಂಬರ್ ಲಿಂಕ್ ಮಾಡಿಸಲು ಆರು ತಿಂಗಳ ಹಿಂದೆ ಮಹಿಳೆಯೊಬ್ಬಳು ಬಂದಿದ್ದಳು. ಆದರೆ ಆಧಾರ್ ಕಾರ್ಡ್‌ಗೆ ಮೊಬೈಲ್ ನಂಬರ್ ಲಿಂಕ್ ಮಾಡಿಸುವುದರ ಜೊತೆ ಸ್ವತಃ ಆ ಮಹಿಳೆಯೇ ಆತನಿಗೆ ಲಿಂಕ್ ಆಗಿಬಿಟ್ಟಳು. ಐದಾರು ತಿಂಗಳಿಂದ ನಡೆಯುತ್ತಿದ್ದ ಇವರ ಲವ್ವಿಡವ್ವಿಯನ್ನು ಪತಿ ಕಣ್ಣಾರೆ ಕಂಡಿದ್ದಾನೆ. ಬಳಿಕ ಆಗಿದ್ದೇ ಘನ ಘೋರ...**

ಮನೆಯಲ್ಲಿ ಯಾರೂ ಇಲ್ಲದ ವೇಳೆ ಪತ್ನಿ ಪರ ಪುರುಷನೊಂದಿಗೆ ಚಕ್ಕಂದವಾಡುತ್ತಿರುವುದನ್ನು ಪತಿ ಕಣ್ಣಾರೆ ಕಂಡಿದ್ದಾನೆ. ಇದರಿಂದ ರೊಚ್ಚಿಗೆದ್ದ ಪತಿ ಶ್ರೀಮಂತ, ಕೊಡಲಿಯಿಂದ ಪತ್ನಿ ಸೃಷ್ಟಿ ಹಾಗೂ ಆಕೆಯ ಪ್ರಿಯಕರ ಖಾಜಪ್ಪನನ್ನು ಕೊಚ್ಚಿ ಕೊಂದು ಪರಾರಿಯಾಗಿದ್ದಾನೆ. ಈ ಘಟನೆ ಕಲಬುರಗಿಯ ಆಳಂದ ತಾಲೂಕಿನ ಮಾದನಹಿಪ್ಪರಗಾ ಗ್ರಾಮದಲ್ಲಿ ನಡೆದಿದೆ. ಗಂಡ ಮನೆಯಲ್ಲಿ ಇಲ್ಲದಿದ್ದಾಗ ಸೃಷ್ಟಿ, ಪ್ರಿಯಕರನ್ನು ಬರಲು ಹೇಳಿದ್ದಾಳೆ. ಆದರೆ, ಪ್ರಿಯಕರ ಖಾಜಪ್ಪ, ಯಾರಾದರು ನೋಡಿದ್ರೆ ಹೇಗೆ ಎಂದು ಜೆಸ್ಕಾಂಗೆ ಒಂದು ಸುಳ್ಳು ಹೇಳಿ ಕರೆಂಟ್ ತೆಗೆಸಿದ್ದಾನೆ. ಬಳಿಕ ಕತ್ತಲಲ್ಲಿ ಸೃಷ್ಟಿ ಮನೆಯೊಳಗೆ ನುಗ್ಗಿದ್ದಾನೆ. ಈ ವಿಚಾರ ಪತಿ ಶ್ರೀಮಂತನಿಗೆ ಗೊತ್ತಾಗಿ ಮನೆಗೆ ಬಂದು ನೋಡಿದಾಗ ಪತ್ನಿ ತನ್ನ ಪ್ರಿಯಕರನ ಜೊತೆ ಇರುವುದು ಕಣ್ಣಾರೆ ಕಂಡು ಇಬ್ಬರನ್ನ ಹತ್ಯೆಗೈದಿದ್ದಾನೆ.



ಕೊಲೆಯಾದ ಸೃಷ್ಟಿ ಹಾಗೂ ಖಾಜಪ್ಪ

ಕಳೆದ ಮೂರು ವರ್ಷಗಳ ಹಿಂದೆ ಮಾದನಹಿಪ್ಪರಗಾ ಗ್ರಾಮದ ಶ್ರೀಮಂತನ ಜೊತೆ 22 ವರ್ಷದ ಸೃಷ್ಟಿ ಸಪ್ತಪದಿ ತುಳಿದಿದ್ದಳು. ಕೃಷಿ ಕೂಲಿ ಕೆಲಸ ಮಾಡುತ್ತಿದ್ದ ಶ್ರೀಮಂತ ದಿನದಲ್ಲಿ ಬಹುತೇಕ ಸಮಯ ಬೇರೆಯವರ ಜಮೀನಿನಲ್ಲಿ ಕಳೆಯುತ್ತಿದ್ದ. ಇತ್ತ ಪತ್ನಿ ಸೃಷ್ಟಿ ಇದನ್ನೇ ಬಂಡವಾಳ ಮಾಡಿಕೊಂಡು ಗ್ರಾಮದ ಲೈಬ್ರರಿಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ ಖಾಜಪ್ಪ ಎಂಬಾತನ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಳು. ಅದರಂತೆ ಮೇ 1ರಂದು ಶ್ರೀಮಂತ ಕೆಲಸದ ಮೇಲೆ ಬೇರೆ ಊರಿಗೆ ತೆರಳಿದ್ದ ವೇಳೆ ಇತ್ತ ಸೃಷ್ಟಿ, ರಾತ್ರಿ ಪ್ರಿಯಕರ ಖಾಜಪ್ಪನಿಗೆ ಕರೆ ಮಾಡಿ ಮನೆಗೆ ಆಹ್ವಾನಿಸಿದ್ದಾಳೆ. ಆದರೆ, ಸೃಷ್ಟಿ ಮನೆಗೆ ದಿಢೀರ್ ಅಂತಾ ಹೋದರೆ ಯಾರಾದರೂ ನೋಡಿದ್ರೆ ಕಷ್ಟ ಎಂದು... ಜೆಸ್ಕಾಂ ಸಿಬ್ಬಂದಿಗೆ ಕರೆ ಮಾಡಿ ಟ್ರಾನ್ಸ್‌ಫಾರಂಗೆ ಬೆಂಕಿ ಬಿದ್ದಿದೆ ಕರೆಂಟ್ ತೆಗೆಯಿರಿ ಎಂದು ಹೇಳಿದ್ದಾನೆ. ಕೂಡಲೇ ಜೆಸ್ಕಾಂ ಸಿಬ್ಬಂದಿ ಕರೆಂಟ್ ತೆಗೆಯುತ್ತಿದ್ದಂತೆಯೇ ಖಾಜಪ್ಪ ಕತ್ತಲಲ್ಲಿ ಓಡಿ ಹೋಗಿ ಸೃಷ್ಟಿ ಮನೆ ಸೇರಿಕೊಂಡಿದ್ದಾನೆ.

ಆದರೆ, ಮನೆ ಮುಂದೆ ಬೈಕ್ ನಿಂತಿರುವುದನ್ನು ಕಂಡು ಅಕ್ಕಪಕ್ಕದವರು ಶ್ರೀಮಂತನಿಗೆ ಕಾಲ್ ಮಾಡಿ ವಿಷಯ ತಿಳಿಸಿದ್ದಾರೆ. ತಕ್ಷಣ ಶ್ರೀಮಂತ ಮನೆ ಹತ್ತಿರ ಬಂದು ಹೊರಗಡೆಯಿಂದ ಮನೆ ಲಾಕ್ ಮಾಡಿದ್ದಾನೆ. ಸ್ವಲ್ಪ ಸಮಯದ ಬಳಿಕ ಲಾಕ್ ತೆಗೆಯುತ್ತಿದ್ದಂತೆಯೇ ಪರಾರಿಯಾಲು ಯತ್ನಿಸಿದ ಖಾಜಪ್ಪನನ್ನು ಶ್ರೀಮಂತ ಬೆನ್ನಟ್ಟಿ ದೊಣ್ಣೆಯಿಂದ ತಲೆ ಹೊಡೆದಿದ್ದಾನೆ.

ಏಟು ಬೀಳುತ್ತಿದ್ದಂತೆಯೇ ಕೆಳಗೆ ಬಿದ್ದಿದ್ದ ಖಾಜಪ್ಪನನ್ನು ಶ್ರೀಮಂತ ಭುಜದ ಮೇಲೆ ಹೊತ್ತುಕೊಂಡು ಬಂದು ಪತ್ನಿಯನ್ನ ನಡಿ ಪೊಲೀಸ್ ಠಾಣೆಗೆ ಹೋಗಿ ಇವನ ವಿರುದ್ಧ ಕಂಪ್ಲೇಂಟ್ ಕೊಡೋಣ ಎಂದಿದ್ದಾನೆ. ಆಗ ಸೃಷ್ಟಿ ಹೋಗಲು ಒಪ್ಪದಿದ್ದಕ್ಕೆ ಮತ್ತಷ್ಟು ಆಕ್ರೋಶಗೊಂಡ ಶ್ರೀಮಂತ, ಮನೆಯಲ್ಲಿದ್ದ ಕೊಡಲಿಯಿಂದ ಕೊಚ್ಚಿ ಇಬ್ಬರನ್ನ ಮನೆಯಂಗಳದಲ್ಲಿ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಇನ್ನೂ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಎಸ್ಪಿ ಅಡ್ಡೂರು ಶ್ರೀನಿವಾಸುಲು, ಎಫ್‌ಎಸ್‌ಎಲ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಎಸ್ಪಿ ಶ್ರೀನಿವಾಸುಲು, ಪ್ರಾಥಮಿಕ ಮಾಹಿತಿ ಪ್ರಕಾರ ಅನೈತಿಕ ಸಂಬಂಧ ಹಿನ್ನಲೆಯಲ್ಲಿ ಪತ್ನಿ ಸೃಷ್ಟಿ ಹಾಗೂ ಖಾಜಪ್ಪನನ್ನ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಜೋಡಿ ಕೊಲೆ ಮಾಡಿ ಪರಾರಿಯಾಗಿರೋ ಶ್ರೀಮಂತನ ಬಂಧನಕ್ಕೆ ಬಲೆ ಬೀಸಲಾಗಿದೆಂದು ಎಂದರು.

ಇನ್ನೂ ಭೀಕರ ಜೋಡಿ ಕೊಲೆಯಿಂದ ಇಡೀ ಗ್ರಾಮವೇ ಅಕ್ಷರಶಃ ಬೆಚ್ಚಿಬಿದ್ದಿದ್ದು, ಈ ಬಗ್ಗೆ ಮಾದನಹಿಪ್ಪರಗಾ ಪೊಲೀಸ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.. ಒಟ್ಟಿನಲ್ಲಿ ಗಂಡನ ಜೊತೆ ಸುಖವಾಗಿ ಸಂಸಾರ ಮಾಡುವುದನ್ನ ಬಿಟ್ಟು ಪರ ಪುರುಷನ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಮಸಣ ಸೇರಿದ್ದು ಮಾತ್ರ ದುರಂತವೇ ಸರಿ. ☯

# ಪಲ್ಯ, ಸಾಂಬಾರ್ ಸರಿ ಮಾಡಲ್ಲ ಎಂದು ಪ್ರೀತಿಸಿ ಮದ್ವೆಯಾದ ಹೆಂಡ್ತಿಯನ್ನೇ ಕೊಂದ!



ಆರೋಪಿ ಬೀರಪ್ಪ

ಅವರಿಬ್ಬರ ಮಧ್ಯೆ ಅಪ್ರಾಪ್ತ ವಯಸ್ಸಿನಿಂದಲೇ ಪ್ರೀತಿ ಚಿಗುರೊಡೆದಿತ್ತು. ಯುವಕ ಯುವತಿ ಒಂದೇ ಸಮುದಾಯದವರಾಗಿದ್ದರಿಂದ ಎರಡೂ ಕುಟುಂಬಗಳ ಹಿರಿಯರು ಇಬ್ಬರಿಗೂ ಮದುವೆ ಮಾಡಿಸಿದರು. ಒಂದು ವರ್ಷ ಇಬ್ಬರು ಅನ್ಯೋನ್ಯತೆಯಿಂದ ಜೀವನ ನಡೆಸಿದರು. ಹೀಗಿರುವಾಗಲೇ ಪಲ್ಯ, ಸಾಂಬಾರ್ ಸರಿಯಾಗಿ



ಕೊಲೆಯಾದ ಸಾಕ್ಷಿತಾ

ಮಾಡಲ್ಲ ಎನ್ನುವ ನೆಪದಲ್ಲಿ ಜಗಳ ಶುರುವಾಗಿ, ಜಗಳದಲ್ಲಿ ಪ್ರೀತಿಸಿ ಮದುವೆಯಾದ ಪತ್ನಿಯನ್ನೇ ಪತಿ ಕೊಲೆ ಮಾಡಿದ್ದಾನೆ.

ಕ್ಷುಲ್ಲಕ ಕಾರಣಕ್ಕೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಪತಿ, ಪತ್ನಿಯನ್ನು ಕೊಲೆ ಮಾಡಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದಲ್ಲಿ ನಡೆದಿದೆ. ಸಾಕ್ಷಿತಾ ವಾಳಕೆ (19) ಮೃತ ದುರ್ದೈವಿ. ಬೀರಪ್ಪ ಪೂಜಾರಿ (21) ಕೊಲೆ ಮಾಡಿದ ಆರೋಪಿ. ಸಾಕ್ಷಿತಾ ವಾಳಕೆ ಮೂಲತಃ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ವಡಗೋಲ ಗ್ರಾಮದವಳು. ಬೀರಪ್ಪ ಪೂಜಾರಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದವನು. ಇವರಿಬ್ಬರ ನಡುವೆ ಅಪ್ರಾಪ್ತ ವಯಸ್ಸಿನಲ್ಲೇ ಪ್ರೀತಿ ಶುರುವಾಗಿತ್ತು. ಮಾವನ ಊರು ವಡಗೋಲದಲ್ಲಿ ಹೈಸ್ಕೂಲ್ ಓದುವಾಗಲೇ ಬೀರಪ್ಪ ಹಾಗೂ ಸಾಕ್ಷಿತಾ ಮಧ್ಯೆ ಪ್ರೀತಿ ಶುರುವಾಗಿತ್ತು.

ಇಬ್ಬರ ಪ್ರೀತಿ ತಿಳಿದು ಹೇಗಿದ್ದರೂ ಒಂದೇ ಸಮುದಾಯ ಅಂತ ಪೋಷಕರು ಇವರ ಪ್ರೀತಿಗೆ ಒಪ್ಪಿ ಎರಡೂ ಕುಟುಂಬದ ಹಿರಿಯರು ಕಳೆದ ವರ್ಷ ಮದುವೆ ಮಾಡಿದ್ದರು. ಮದುವೆ ಬಳಿಕ ದಂಪತಿ ಮುಗಳಖೋಡ ಗ್ರಾಮದಲ್ಲಿ ವಾಸಿಸುತ್ತಿದ್ದರು. ಪ್ರೀತಿಸಿದ ಜೀವಗಳು ಒಂದಾಗಿ ಇರುತ್ತವೆ ಅಂತ ಹಿರಿಯರು ಮದುವೆ ಮಾಡಿದ್ರೆ, ಪಲ್ಯ, ಸಾಂಬಾರ್ ಸರಿಯಾಗಿ ಮಾಡಲ್ಲ

☞14



# ಪ್ರತೀಕಾರಕ್ಕೆ ಬಲಿಯಾದ ಹಿಂದೂ ಕಾರ್ಯಕರ್ತ!

**ಮಂಗಳೂರು**

✍ ಮೋಹನ್ ಬೋಳಂಗಡಿ

ಕಡಲನಗರಿ ಮಂಗಳೂರು ಮತ್ತೊಮ್ಮೆ ರಕ್ತದೋಕುಳಿಗೆ ಸಾಕ್ಷಿಯಾಗಿದೆ. ಮೇ 1ರಂದು ರಾತ್ರಿ 8.30ರ ವೇಳೆಗೆ ಮಂಗಳೂರಿನ ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯ ಬಜ್ಪೆ ಪೊಲೀಸ್ ಠಾಣಾ ಸರಹದ್ದಿನ ಬಜ್ಪೆ ಹಳೆ ವಿಮಾನ ನಿಲ್ದಾಣಕ್ಕೆ ಹೋಗುವ ಕವಲು ರಸ್ತೆಯಲ್ಲಿ ಹಿಂದು ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ, ಈ ಹಿಂದೆ ಎರಡು ಕೊಲೆ ಪ್ರಕರಣಗಳೂ ಸೇರಿದಂತೆ ಐದು ಪ್ರಕರಣಗಳಲ್ಲಿ ಆರೋಪಿಯಾಗಿದ್ದ 32ರ ಹರೆಯದ ಯುವಕನೊಬ್ಬನನ್ನು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಪಿಕ್‌ಅಪ್ ವಾಹನವೊಂದರಲ್ಲಿ ಅಡ್ಡಕಟ್ಟಿ ಶಿಫ್ಟ್ ಕಾರಿನಲ್ಲಿದ್ದಂತಹ ಐದಾರು ಮಂದಿಯ ಹಂತಕ ತಂಡವು ಸಾರ್ವಜನಿಕರು ನೋಡು ನೋಡುತ್ತಿದ್ದಂತೆಯೇ ಬರ್ಬರ ರೀತಿಯಲ್ಲಿ ಹತ್ಯೆಗೈದಿದೆ. ಘಟನೆಯ ಹಿನ್ನಲೆಯಲ್ಲಿ ಸ್ಥಳೀಯವಾಗಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣಗೊಂಡಿತ್ತು. ಪೊಲೀಸರು ತಕ್ಷಣ ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಿ ಘಟನೆ ನಡೆದ 24 ಗಂಟೆಗಳ ಒಳಗೆ ಆರೋಪಿಗಳನ್ನು ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಮೂರು ವರ್ಷಗಳ ಹಿಂದೆ ನಡೆದಿದ್ದಂತಹ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯಾಗಿದ್ದಂತಹ ಯುವಕನನ್ನು ಅದೇ ಕೊಲೆಗೆ ಪ್ರತೀಕಾರವಾಗಿ ಹತ್ಯೆಗೈಯ್ಯಲಾಗಿದೆ ಎಂಬುದು ಸ್ಪಷ್ಟವಾಗಿದೆ. ಈ ಮಧ್ಯೆ ಸಾಮಾಜಿಕ ಜಾಲತಾಣದಲ್ಲಿ ಮತ್ತಿಬ್ಬರು ಹಿಂದೂ ಸಂಘಟನೆಯ ಮುಖಂಡರಿಗೆ ಜೀವ ಬೆದರಿಕೆ ಹಾಕಲಾಗಿದ್ದು ಒಟ್ಟಾರೆಯಾಗಿ ಮಂಗಳೂರು ಪರಿಸರದ ಪರಿಸ್ಥಿತಿ ಬೂದಿಮುಚ್ಚಿದ ಕೆಂಡದಂತಿದೆ.



ರಕ್ತದ ಮಡುವಿನಲ್ಲಿ ಬಿದ್ದಿರುವ ಸುಹಾಸ್

### ಯಾರೀತ ಸುಹಾಸ್?

ಮೇ 1ರಂದು ರಾತ್ರಿ ಬಜ್ಪೆ ಸಮೀಪದ ಕಿನ್ನಿಪದವು ಎಂಬಲ್ಲಿ ದುಷ್ಕರ್ಮಿಗಳಿಂದ ಅಮಾನುಷವಾಗಿ ಹತ್ಯೆಗೀಡಾದ ಯುವಕನ ಹೆಸರು ಸುಹಾಸ್ ಶೆಟ್ಟಿ, 32ರ ಹರೆಯದ ಯುವಕ. ಪಿಯುಸಿವರೆಗೆ ವ್ಯಾಸಂಗ ಮಾಡಿದ್ದ, ಸುರತ್ಕಲ್ ಸಮೀಪದ ಎಂಆರ್‌ಪಿಎಲ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ, ಕ್ರಿಮಿನಲ್ ಪ್ರಕರಣವೊಂದರಲ್ಲಿ ಭಾಗಿಯಾದ ಹಿನ್ನೆಲೆಯಲ್ಲಿ ಕೆಲಸ ಕಳಕೊಂಡಿದ್ದ. ಮೂಲತಃ ಬಂಟ್ವಾಳ ತಾಲೂಕಿನ ಕಾರಿಂಜ ಸಮೀಪದ ಪುಳಿಮಜಲು ಎಂಬಲ್ಲಿ ವಾಸ ಇದ್ದ, ಆತನ ತಂದೆಯ ಹೆಸರು ಮೋಹನ್ ಶೆಟ್ಟಿ, ತಾಯಿ ಸುಲೋಚನ ಶೆಟ್ಟಿ. ಆತನಿಗೆ ಸಹೋದರನೊಬ್ಬನಿದ್ದು ಡಿಗ್ರಿ ವ್ಯಾಸಂಗ ಮಾಡುತ್ತಿದ್ದ.

ಆತನ ತಂದೆ ಮೋಹನ್ ಶೆಟ್ಟಿ ಹಲವು ವರ್ಷಗಳಿಂದ ಮೈಸೂರು ಜಿಲ್ಲೆಯ ಕೆ.ಆರ್. ನಗರದಲ್ಲಿ ಹೊಟೇಲ್ ಉದ್ಯಮ ನಡೆಸುತ್ತಿದ್ದರು. ಸುಮಾರು 10 ವರ್ಷಗಳ ಹಿಂದೆ ಆ ಉದ್ಯಮದಲ್ಲಿ ನಷ್ಟ ಅನುಭವಿಸಿ ಬಜ್ಪೆಗೆ ಬಂದಿದ್ದರು. ಅಲ್ಲಿ ಹೋಟೆಲ್ ನಡೆಸುತ್ತಿದ್ದರು. ಸುರತ್ಕಲ್ ಸಮೀಪದ ಕಳವಾರು ಎಂಬಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರು. ಈ ವೇಳೆಗೆ ಸುಹಾಸ್ ಶೆಟ್ಟಿ ಎಂಆರ್‌ಪಿಎಲ್‌ನಲ್ಲಿ ಕೆಲಸಕ್ಕೆ ಸೇರಿದ್ದ. ಆದರೆ ಕೆಲವೇ ಸಮಯಗಳಲ್ಲಿ ಕ್ರಿಮಿನಲ್ ಪ್ರಕರಣವೊಂದರಲ್ಲಿ ಆರೋಪಿಯಾಗಿ ಕೆಲಸ ಕಳಕೊಂಡ. ತದನಂತರ ಮೋಹನ್ ಶೆಟ್ಟಿ ಅವರು ತನ್ನ ಪತ್ನಿ ಸುಲೋಚನಾ ಶೆಟ್ಟಿ ಅವರ ಮೂಲ ಮನೆಯಾದ ಬಂಟ್ವಾಳ ತಾಲೂಕಿನ ಪುಳಿಮಜಲಿಗೆ ಹೋಗಿ ನೆಲೆಸಿದ್ದರೆ ಸುಹಾಸ್ ಶೆಟ್ಟಿ ಕಳವಾರಿನ ಬಾಡಿಗೆ ಮನೆಯಲ್ಲೇ ಉಳಕೊಂಡಿದ್ದರು. ಟಿಪ್ಪರ್ ಲಾರಿಯೊಂದನ್ನು ಖರೀದಿಸಿ ಮಣ್ಣು, ಕಲ್ಲು, ಹೊೖಗೆ ಸಾಗಾಟ ನಡೆಸುತ್ತಿದ್ದ. ಅದರಿಂದಲೇ ಜೀವನ ಸಾಗಿಸುತ್ತಿದ್ದ ಮತ್ತು ತನ್ನ ವೃದ್ಧ ತಂದೆ ತಾಯಿಯನ್ನು ಸಲಹುತ್ತಿದ್ದ. ಸಹೋದರನ ವಿದ್ಯಾಭ್ಯಾಸದ ಖರ್ಚನ್ನೂ ನೋಡಿಕೊಳ್ಳುತ್ತಿದ್ದ. ಇಂತಹ ಹಿನ್ನಲೆಯ ಸುಹಾಸ್ ಶೆಟ್ಟಿ ಹಲವಾರು ಗೆಳೆಯರನ್ನು ಹೊಂದಿದ್ದ, ಆ ಗೆಳೆಯರ ದೆಸೆಯಿಂದಲೇ 2020ರಲ್ಲಿ ಬಡಗ ಎಕ್ಕಾರು ಎಂಬಲ್ಲಿ ಗಲಾಟೆಯೊಂದರಲ್ಲಿ ಭಾಗಿಯಾಗಿದ್ದ. ಆ ಸಂದರ್ಭದಲ್ಲಿ ಕೀರ್ತಿ ಶೆಟ್ಟಿ ಎಂಬ 20ರ ಹರೆಯದ ಯುವಕನ ಹತ್ಯೆಯಾಯಿತು. ಯಾವುದೋ ಕಾರಣಕ್ಕೆ ಗಲಾಟೆ ಮಾಡಿ ಕೀರ್ತಿ ಶೆಟ್ಟಿಗೆ ದೊಣ್ಣೆಯಿಂದ ಹಲ್ಲೆ ಮಾಡಲಾಗಿತ್ತು. ಗಂಭೀರ ಗಾಯಗೊಂಡ ಆತ ಕೊನೆಯುಸಿರೆಳೆದಿದ್ದ. ಪರಿಣಾಮವಾಗಿ ಸುಹಾಸ್ ಶೆಟ್ಟಿ ಮತ್ತು ಇತರರು ಜೈಲಿಗೆ ಹೋಗಿದ್ದರು. ಬಜ್ಪೆ ಪೊಲೀಸ್ ಠಾಣೆಯಲ್ಲಿ ಆತನ ಮೇಲೆ ರೌಡಿ ಶೀಟ್ ತೆರೆಯಲಾಗಿತ್ತು.

ಈ ಪ್ರಕರಣದ ನಂತರ ಹಿಂದೂಪರ ಸಂಘಟನೆಯಲ್ಲಿ ಗುರುತಿಸಿಕೊಂಡಂತಹ ಸುಹಾಸ್ ಶೆಟ್ಟಿ ಬಜರಂಗ ದಳದ ಗೋರಕ್ಷ ದಳದ ಕಾರ್ಯಕರ್ತನಾಗಿದ್ದ. ಈ ವೇಳೆಯಲ್ಲಿಯೇ ಆತನ ಮೇಲೆ ದಲಿತ ದೌರ್ಜನ್ಯ ತಡೆ ಕಾಯಿದೆಯೂ ಸೇರಿದಂತೆ ಮತ್ತೆ ನಾಲ್ಕು ಪ್ರಕರಣಗಳು ದಾಖಲಾಗಿತ್ತು. ಅದರಲ್ಲಿ ಪ್ರಮುಖವಾದದ್ದೇ ಸುರತ್ಕಲ್ ಮಾರ್ಕೆಟ್‌ನ ಎದುರಲ್ಲಿ ನಡೆದಿದ್ದಂತಹ ಫಾಝಿಲ್ ಹತ್ಯೆ.

### ಏನಿದು ಫಾಝಿಲ್ ಹತ್ಯೆ?

2023ರಲ್ಲಿ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಬಿಜೆಪಿಯ ಯುವಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯನಾಗಿದ್ದ ಪ್ರವೀಣ್ ನೆಟ್ಟಾರು ಎಂಬ ಯುವಕನನ್ನು ಆತನ ಕೋಳಿ ಮಾರಾಟದ ಅಂಗಡಿಯ ಎದುರಲ್ಲೇ ಹಂತಕ ತಂಡ ಕೊಚ್ಚಿ ಕೊಲೆಗೈದಿತ್ತು. ಸ್ಥಳೀಯ ಎಸ್‌ಡಿಪಿಐ ಮುಖಂಡ ಶಾಫಿ ಬೆಳ್ಳಾರೆ ಈ ಹತ್ಯೆಯ ರೂವಾರಿಯಾಗಿದ್ದ. ಈ ಪ್ರಕರಣವನ್ನು ರಾಜ್ಯಸರಕಾರ ರಾಷ್ಟ್ರೀಯ ತನಿಖಾ ದಳಕ್ಕೆ ಒಪ್ಪಿಸಿದೆ. ಎನ್‌ಐಎ ಈ ಪ್ರಕರಣದಲ್ಲಿ ಈವರೆಗೆ 27 ಮಂದಿ ಆರೋಪಿಗಳನ್ನು ಗುರುತಿಸಿ ಬಂಧಿಸಿ ಜೈಲಿಗಟ್ಟಿದೆ. ಈ ಘಟನೆ ನಡೆದ ಮರುದಿನ ಮುಸ್ಸಂಜೆಯ ವೇಳೆಯಲ್ಲಿ ಸುಹಾಸ್ ಶೆಟ್ಟಿ ಸೇರಿದಂತೆ ಒಟ್ಟು 6 ಮಂದಿ ಸೇರಿಕೊಂಡು ಸುರತ್ಕಲ್ ಮಾರ್ಕೆಟ್‌ನ ಮೊಬೈಲ್ ಶಾಪ್‌ವೊಂದರಲ್ಲಿ ನಿಂತಿದ್ದಂತಹ ಕೃಷ್ಣಾಪುರ ಮಂಗಳಪೇಟೆಯ ಫಾಝಿಲ್ ಎಂಬಾತನಿಗೆ ಯದ್ವಾತದ್ವ ಹಲ್ಲೆ ನಡೆಸಿತ್ತು. ಫಾಝಿಲ್‌ನನ್ನು ಆಸ್ಪತ್ರೆಗೆ ಸಾಗಿಸಲಾಗಿದ್ದರೂ ಆತ ಬದುಕುಳಿಯಲಿಲ್ಲ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದಂತಹ ಸುರತ್ಕಲ್ ಪೊಲೀಸರು ಸುಹಾಸ್ ಶೆಟ್ಟಿ ಸೇರಿದಂತೆ ಒಟ್ಟು 6 ಮಂದಿಯನ್ನು ಬಂಧಿಸಿ ಜೈಲಿಗೆ ಅಟ್ಟಿದ್ದರು. ಸುಮಾರು ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದ ಸುಹಾಸ್ ಶೆಟ್ಟಿ ಒಂದು ವರ್ಷದ ಹಿಂದೆ ರಾಜ್ಯ ಹೈಕೋರ್ಟಿನಿಂದ ಜಾಮೀನು ಪಡೆದು ಬಿಡುಗಡೆಗೊಂಡಿದ್ದ. ಹಾಗೆ ಹೊರಬಂದಂತಹ ಸುಹಾಸ್ ಶೆಟ್ಟಿ ಸುರತ್ಕಲ್‌ನ ಕೋಡಿಕೆರೆಯ ಲೋಕಿ ಯಾನೆ ಲೋಕೇಶ್ ಎಂಬಾತನ ತಂಡದೊಂದಿಗೆ ಗುರುತಿಸಿಕೊಂಡಿದ್ದ. ಸುರತ್ಕಲ್ ಪರಿಸರದಲ್ಲಿ ಹಿಂದೂ ಸಂಘಟನೆಯ ಪ್ರಭಾವಿ ತಂಡವಾಗಿ ಲೋಕೀ ತಂಡ ಗುರುತಿಸಲ್ಪಟ್ಟಿತ್ತು.




ಹಂತಕರು ಬಂದಿದ್ದ ಕಾರು



## ಸರಣಿ ಹತ್ಯೆಗಳ ಹಿನ್ನಲೆ ಏನು?

ದಕ್ಷಿಣ ಕನ್ನಡ ಜಿಲ್ಲೆ ಅಂದರೆ ಹಿಂದುತ್ವದ ತವರೂರು. ಇಲ್ಲಿ ಹಿಂದೂ ಸಂಘಟನೆಗಳು ಪ್ರಬಲವಾಗಿದೆ. ಅಕ್ರಮ ಗೋ ಸಾಗಾಟವನ್ನು ಪತ್ತೆಹಚ್ಚುವ ಹಿನ್ನಲೆಯಲ್ಲಿ ಈ ಸಂಘಟನೆಗಳು ಸಕ್ರಿಯವಾಗಿದ್ದವು. ಈ ಸಂದರ್ಭದಲ್ಲಿ ಉಂಟಾದ ವೈಮನಸ್ಸಿನಿಂದಾಗಿ ಪರಸ್ಪರ ಹಲ್ಲೆ, ಹತ್ಯೆ ನಡೆಸುವಷ್ಟರ ಮಟ್ಟಿಗೆ ಈ ಬೆಳವಣಿಗೆಗಳು ನಡೆದಿದ್ದವು. ಈ ಹಿನ್ನಲೆಯಲ್ಲಿ ಹಲವಾರು ಹತ್ಯಾ ಪ್ರಕರಣಗಳು ನಡೆದಿದೆ. ಮುಸ್ಲಿಂ ಯುವಕರು ಜೀವ ಕಳೆದುಕೊಂಡಿದ್ದಾರೆ. ಹಿಂದೂ ಯುವಕರೂ ಜೀವ ತೆತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಮಸೂದ್ ಎಂಬ ಯುವಕನ ಮೇಲೆ ಆತನ ಮನೆಯ ಬಳಿಯೇ ಹಿಂದೂ ಸಂಘಟನೆಯ ಕಾರ್ಯಕರ್ತರು ಹಲ್ಲೆ ಮಾಡಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಆತನನ್ನು ಸುಳ್ಯದ ಕೆವಿಜಿ ಆಸ್ಪತ್ರೆಗೆ ದಾಖಲಿಸಲಾಯಿತು. ತದನಂತರ ಮಂಗಳೂರಿನ ಹೊರವಲಯದ ಕಣ್ಣೂರಿನ ಫಸ್ಟ್ ನ್ಯೂರೋ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿತ್ತು. ಈ ಸಂಬಂಧ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಸ್ಥಳೀಯ ಯುವಕರ ಮೇಲೆ ಕೊಲೆ ಯತ್ನ ಪ್ರಕರಣ ದಾಖಲಾಯಿತು. ಈ ಆರೋಪಿಗಳನ್ನು ಸ್ಥಳೀಯ ಮುಂದಾಳು, ಬಿಜೆಪಿ ಯುವಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಪೊಲೀಸ್ ಠಾಣೆಗೆ ಹಾಜರು ಪಡಿಸಿ, ನ್ಯಾಯಾಲಯದಿಂದ ಜಾಮೀನಿನ ಮೇರೆಗೆ ಬಿಡಿಸುವಲ್ಲಿ ಯಶಸ್ವಿಯಾಗಿದ್ದರು. ಸುಮಾರು 7 ದಿವಸ ಆಸ್ಪತ್ರೆಯಲ್ಲಿದ್ದ ಮಸೂದ್ ತದನಂತರ ಮೃತಪಟ್ಟ ಹಿನ್ನೆಲೆಯಲ್ಲಿ ಕೊಲೆಯತ್ನ ಪ್ರಕರಣ ಕೊಲೆ ಪ್ರಕರಣವಾಗಿ ಮಾರ್ಪಾಡಾಗಿ ಮತ್ತೆ ಆರೋಪಿಗಳು ಬಂಧಿಸಲ್ಪಟ್ಟಿದ್ದರು. ಈ ಘಟನೆಗೆ ಪ್ರತೀಕಾರವಾಗಿ ಸ್ಥಳೀಯ ಎಸ್‌ಡಿಪಿಐ ಮುಖಂಡರಾಗಿದ್ದ ಶಾಫಿ ಬೆಳ್ಳಾರೆ ತನ್ನ ಸಂಘಟನೆಯ ಯುವಕರನ್ನು ಒಟ್ಟುಗೂಡಿಸಿ ಪ್ರವೀಣ್ ನೆಟ್ಟಾರು ಮೇಲೆ ಧಾಳಿ ನಡೆಸಿದ್ದರು. ಈ ಪ್ರಕರಣದಲ್ಲಿ ಒಟ್ಟು 27 ಮಂದಿ ಜೈಲು ಸೇರಿದ್ದಾರೆ.

ಈ ಘಟನೆಗಿಂತ ಮೊದಲು ಬಿ.ಸಿ.ರೋಡಿನಲ್ಲಿ ಆರೆಸ್ಸೆಸ್ ಕಾರ್ಯಕರ್ತನಾಗಿದ್ದಂತಹ ಶರತ್ ಮಡಿವಾಳ ಎಂಬ ಯುವಕನನ್ನು ಆತನ ಉದಯ ಲಾಂಡ್ರಿ ಎಂಬ ಅಂಗಡಿಯಲ್ಲಿಯೇ ಕಡಿದು ಹಾಕಲಾಗಿತ್ತು. ಪಕ್ಕದ ಅಂಗಡಿಯ ಮುಸ್ಲಿಂ ಯುವಕ ಆತನನ್ನು ಕಾರೊಂದರಲ್ಲಿ ಹಾಕಿಕೊಂಡು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ದಾಖಲಿಸಿದ್ದ. ಆದರೂ ಚಿಕಿತ್ಸೆ ಫಲಕಾರಿಯಾಗದೆ ಆತ ಮೃತಪಟ್ಟಿದ್ದ. ಈ ಪ್ರಕರಣದ ಆರೋಪಿಗಳು ಜೈಲಿನಲ್ಲಿದ್ದಾರೆ. ಈ ಹತ್ಯೆಗೆ ಪ್ರತೀಕಾರವಾಗಿ ಬಂಟ್ವಾಳ ತಾಲೂಕಿನ ಬೆಂಜನಪದವು ಕರಾವಳಿ ಸೈಟಿನಲ್ಲಿ ಎಸ್‌ಡಿಪಿಐ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಕಲಾಯಿಯ ರಿಕ್ಷಾ ಚಾಲಕ ಅಶ್ರಫ್ ಎಂಬಾತನನ್ನು 2017 ಜೂನ್ 21ರಂದು ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಫರಂಗಿಪೇಟೆ ಸಮೀಪದ ಮಾರಿಪಳ್ಳದ ಕುಮ್ಡೇಲುವಿನ ಭರತ್ ಮತ್ತು ಇತರರರನ್ನು ಬಂಧಿಸಲಾಗಿತ್ತು. ಅವರೆಲ್ಲರೂ ಜಾಮೀನಿನ ಮೇರೆಗೆ ಬಿಡುಗಡೆಗೊಂಡಿದ್ದಾರೆ. ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿ ಫಾಝಿಲ್ ಹತ್ಯೆ ನಡೆದಿತ್ತು. ಅದಕ್ಕೆ ರಿವೇಂಜಾಗಿ ಇದೀಗ ಸುಹಾಸ್ ಶೆಟ್ಟಿ ಹತ್ಯೆಯಾಗಿದೆ. ಈ ಸರಣಿ ಮುಂದುವರಿಯುವ ಲಕ್ಷಣಗಳಿವೆ.




ಸುಹಾಸ್‌ನ ಹಂತಕರಾದ ಅಬ್ದುಲ್ ಸಫ್ವಾನ್, ನಿಯಾಜ್ ಮೊಹಮ್ಮದ್ ಮುಸಮ್ಮೀರ್



ಆದಿಲ್ ಮೆಹರೂಫ್, ನಾಗರಾಜ್ ಮೊಹಮ್ಮದ್ ರಿಜ್ವಾನ್ ಹಾಗೂ ರಂಜಿತ್

ಇತ್ತೀಚೆಗೆ ಆ ತಂಡ ತುಳುನಾಡ ಬಿರುವೆರ್ ಎಂಬ ಸಂಘಟನೆಯನ್ನು ಕಟ್ಟಿಕೊಂಡು ವಿವಿಧ ಮೂಲಗಳಿಂದ ಧನ ಸಂಗ್ರಹ ಮಾಡಿ ಅಶಕ್ತರಿಗೆ ಸಹಾಯ ಮಾಡುತ್ತಿತ್ತು. ಈ ಸಂಘಟನೆಯಲ್ಲಿ ಸುಹಾಸ್ ಶೆಟ್ಟಿ ಸಕ್ರಿಯನಾಗಿದ್ದಾಗಲೇ ಆತನ ಮೇಲೆ ದುಷ್ಕರ್ಮಿಗಳ ಕಣ್ಣು ಬಿದ್ದಿತ್ತು. ಅದಕ್ಕೆ ಕಾರಣವೂ ಇತ್ತು. ಕೆಲವು ಸಮಯಗಳ ಹಿಂದೆ ಸುಹಾಸ್ ಶೆಟ್ಟಿಯ ಗೆಳೆಯರಾಗಿದ್ದ ಪ್ರಶಾಂತ್, ಧನ್‌ರಾಜ್, ಪುನೀತ್, ಗಣೇಶ್, ಯಜ್ಞೇಶ್, ಮತ್ತಿತರರು ಸೇರಿ ಬಜ್ಪೆ ಶಾಂತಿಗುಡ್ಡೆಯ ಅಬ್ದುಲ್ ಸಫ್ವಾನ್ ಎಂಬಾತನಿಗೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದರು. ಈ ಎಲ್ಲಾ ಆರೋಪಿಗಳು ಆ ಪ್ರಕರಣದಲ್ಲಿ ಜೈಲು ಸೇರಿದ್ದರು ಮತ್ತು ಜಾಮೀನಿನ ಮೇರೆಗೆ ಬಿಡುಗಡೆಗೊಂಡಿದ್ದರು. ಇದರಿಂದ ರೊಚ್ಚಿಗೆದ್ದಿದ್ದಂತಹ ಸಫ್ವಾನ್ ಪ್ರಶಾಂತನ ಮೇಲೆ ಹಲ್ಲೆ ನಡೆಸಲು ಎರಡು ಬಾರಿ ಪ್ರಯತ್ನಿಸಿದ್ದ. ಆದರೆ ಆ ಸಂದರ್ಭದಲ್ಲಿ ಸುಹಾಸ್ ಶೆಟ್ಟಿ ಆತನ ಜೊತೆಗೆ ಇದ್ದುದರಿಂದ ಸಾಧ್ಯವಾಗಲಿಲ್ಲ. ಇದರಿಂದಾಗಿ ಪ್ರಶಾಂತನ ಮೇಲಿದ್ದ ಕೋಪ ಸುಹಾಸನತ್ತ ತಿರುಗಿತ್ತು. ಸಫ್ವಾನ್ ಸುಹಾಸನನ್ನೇ ಗುರಿಯಾಗಿಸಿ ಕೊಲೆ ಮಾಡಬೇಕೆಂದು ನಿರ್ಧರಿಸಿದ್ದ.



ಸುಹಾಸ್‌ನ ಮೃತದೇಹ

ಕಳೆದ ಜನವರಿಯಲ್ಲಿ ಸಫ್ವಾನ್ ತನ್ನ ಯೋಜನೆಯನ್ನು ಈ ಹಿಂದೆ ಸುಹಾಸ್ ಶೆಟ್ಟಿ ಮತ್ತು ಇತರರಿಂದ ಕೊಲೆಯಾಗಿದ್ದಂತಹ ಕೃಷ್ಣಾಪುರ ಮಂಗಳಪೇಟೆಯ ಫಾಝಿಲ್‌ನ ಸಹೋದರ, ಲಾರಿ ಚಾಲಕ ಆದಿಲ್‌ಗೆ ವಿವರಿಸಿದ್ದ. ಈ ಹತ್ಯೆ ಮಾಡುವುದಾದರೆ ಹಣಕಾಸಿನ ವ್ಯವಸ್ಥೆ ಬೇಕು ಎಂದು ಕೇಳಿದಾಗ ಆದಿಲ್ 3 ಲಕ್ಷ ರೂ. ಗಳನ್ನು ಸಫ್ವಾನ್‌ಗೆ ನೀಡಿದ್ದ, ಮತ್ತೆ 2 ಲಕ್ಷ ರೂ. ಗಳನ್ನು ಹತ್ಯೆಯಾದ ನಂತರ ನೀಡುವುದಾಗಿ ವಾಗ್ದಾನ ನೀಡಿದ್ದ. ಸಫ್ವಾನ್ ಆದಿಲ್‌ನಿಂದ ಹಣ ಪಡೆದುಕೊಂಡ ನಂತರ ತನ್ನೊಂದಿಗೆ ಈ ಹಿಂದೆ ಹಲವು ಪ್ರಕರಣಗಳಲ್ಲಿ ಒಳಗೊಂಡಿದ್ದಂತಹ ಸ್ನೇಹಿತರನ್ನು ಒಟ್ಟುಗೂಡಿಸಿಕೊಂಡ. ಅವರೆಂದರೆ ನಿಯಾಝ್, ಮಹಮ್ಮದ್ ಮುಝಂಬಿಲ್, ಬಾಳ ಕಳವಾರು ಕುರ್ಸುಗುಡ್ಡೆಯ ಕಲಂಧರ್ ಶಾಫಿ ಜೋಕಟ್ಟೆಯ ಮಹಮ್ಮದ್ ರಿಝ್ವಾನ್, ಮತ್ತು ಕಳಸ ತಾಲೂಕಿನ ರುದ್ರಪಾದೆಯ ರಂಜಿತ್ ಚಿಕ್ಕಮಗಳೂರಿನ ಮಾವಿನ ಕೆರೆ ಗ್ರಾಮದ ಕೋಟೆ ಹೊಳೆಯ ನಾಗರಾಜ್, ರವರನ್ನು ಸುಹಾಸ್ ಶೆಟ್ಟಿಯ ಹತ್ಯೆಗಾಗಿ ಸಜ್ಜುಗೊಳಿಸಿದ್ದ.



ಫಾಝಿಲ್



ಫಾಝಿಲ್ ಹಂತಕರಾದ ಅಜಿತ್ ಕ್ರಾಸ್ತಾ, ಸುಹಾಸ್, ದೀಕ್ಷಿತ್, ಶ್ರೀನಿವಾಸ್, ಅಭಿಷೇಕ್, ಮೋಹನ್ ಹಾಗೂ ಗಿರಿಧರ್

ಆತನನ್ನು ಬೆನ್ನಟ್ಟಿ ಹೊಡೆಯಲೇಬೇಕು ಎಂಬಂತಹ ಇರಾದೆ ಹೊಂದಿದ್ದರಿಂದ ಮೀನು ಸಾಗಾಟದ ಟೆಂಪೋ ಮತ್ತು ಶಿಫ್ಟ್ ಕಾರನ್ನು ಬಾಡಿಗೆಗೆ ಪಡೆದುಕೊಂಡಿದ್ದ.

ಚಿಕ್ಕಮಗಳೂರಿನಿಂದ ಕರೆಸಿಕೊಂಡಿದ್ದಂತಹ ನಾಗರಾಜ್ ಮತ್ತು ರಂಜಿತ್‌ರವರನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡಿದ್ದಂತಹ ಸಫ್ವಾನ್ ಸುಹಾಸ್ ಶೆಟ್ಟಿಯ ಚಲನವಲನಗಳನ್ನು ಅಭ್ಯಸಿಸುವಂತೆ ಸೂಚನೆ ನೀಡಿದ್ದ, ಅದರಂತೆ ಅವರು ಯಾವುದೇ ಸಂಶಯ ಬಾರದ ರೀತಿಯಲ್ಲಿ ಸುಹಾಸ್ ಶೆಟ್ಟಿ ಯಾವ ಯಾವ ಕಡೆಗಳಿಗೆ ಹೋಗುತ್ತಾರೆ. ಮತ್ತೆ ಯಾವ ವಾಹನದಲ್ಲಿ ಹೋಗುತ್ತಾರೆ. ಯಾರೆಲ್ಲ ಜೊತೆಗಿರುತ್ತಾರೆ ಎಂಬುದನ್ನು ತಿಳಿದುಕೊಂಡು ಕರಾರುವಕ್ಕಾಗಿ ಸಫ್ವಾನ್‌ಗೆ ತಿಳಿಸುತ್ತಿದ್ದರು. ಅದರಂತೆ ಆತ ಯೋಜನೆ ರೂಪಿಸಿ ಮೇ 1ರಂದು ಸಂಜೆಯ ವೇಳೆಗೆ ಸುಹಾಸ್ ಶೆಟ್ಟಿ ತನ್ನ ಐವರು ಗೆಳೆಯರೊಂದಿಗೆ ಬಜ್ಪೆಗೆ ಹೋಗುತ್ತಿದ್ದಾರೆ ಎಂಬ ಮಾಹಿತಿಯನ್ನು ಪಡೆದುಕೊಂಡಿದ್ದರು. ಆ ಸಂದರ್ಭದಲ್ಲಿ ಸುಹಾಸ್ ಶೆಟ್ಟಿ ಮತ್ತು ಆತನ ಸ್ನೇಹಿತರು ಪ್ರಯಾಣಿಸುತ್ತಿದ್ದ ಇನ್ನೋವಾ ಕಾರನ್ನು ಶಿಫ್ಟ್ ಕಾರಿನಲ್ಲಿ ಹಿಂಬಾಲಿಸಿಕೊಂಡು ಹೋಗಿದ್ದರು. ಸುಹಾಸ್ ಶೆಟ್ಟಿ ಬಜ್ಪೆಗೆ ಹೋಗಿ ಅಲ್ಲಿನ ಚರ್ಚ್‌ನ ಎದುರಿನ ಅಂಗಡಿಯೊಂದಕ್ಕೆ ಹೋಗಿದ್ದ. ಹಂತಕ ತಂಡ ಅಲ್ಲಿಯೇ ಹೊಂಚು ಹಾಕಿತ್ತು. ಅವರ ಯೋಜನೆಯ ಪ್ರಕಾರ ಸುಹಾಸ್ ವಾಪಾಸು ಕಳವಾರಿಗೆ ಬರಬೇಕು. ಆ ಸಂದರ್ಭದಲ್ಲಿ ಆತನ ಕಾರನ್ನು ಅಡ್ಡಗಟ್ಟಬೇಕು ಎಂದು ಬಾಡಿಗೆಗೆ ಪಡೆದುಕೊಂಡಿದ್ದ ಮೀನು ಸಾಗಾಟದ ಟೆಂಪೋವೊಂದನ್ನು ಕಿನ್ನಿ ಪದವು ಬಳಿ ನಿಲ್ಲಿಸಿದ್ದರು. ಸುಹಾಸ್ ತನ್ನ ಕಾರಿನಲ್ಲಿ ಬರುತ್ತಿದ್ದಂತೆಯೇ ಕಿನ್ನಿ ಪದವು ಬಳಿ ನಿಂತಿದ್ದಂತಹ ಟೆಂಪೋ ನೇರವಾಗಿ ಎದುರಿಗೇ ಹೋಗಿ ಸುಹಾಸನ ಕಾರಿಗೆ ಡಿಕ್ಕಿ ಹೊಡೆದಿತ್ತು. ಅದನ್ನು ತಪ್ಪಿಸುವ ಭರದಲ್ಲಿ ಇನ್ನೋವಾ ಕಾರು ಪಕ್ಕದ ಸೆಲೂನಿಗೆ ನುಗ್ಗಿತ್ತು. ಏನಾಗುತ್ತದೆ ಎನ್ನುವುದು ಅರಿವಾಗುವಷ್ಟರಲ್ಲಿ ಕಾರಿನಲ್ಲಿದ್ದ ಐವರು ಹೊರಗೆ ಬರುವಾಗ ಹಂತಕ ತಂಡ ತಲವಾರುಗಳೊಂದಿಗೆ ಸುತ್ತವರಿದಿತ್ತು ಅಲ್ಲದೆ ಏಕಾಏಕಿ ದಾಳಿ ನಡೆಸಿತ್ತು. ಈ ಸಂದರ್ಭದಲ್ಲಿ ಸುಹಾಸ್‌ನೊಟ್ಟಿಗಿದ್ದ ಯುವಕನೊಬ್ಬನಿಗೆ ಸಣ್ಣ ಪ್ರಮಾಣದ ಗಾಯವಾಗಿತ್ತು. ಉಳಿದವರು ಅಲ್ಲಿಂದ ಎಸ್ಕೇಪ್ ಆದರು. ಸುಹಾಸ್ ಹಂತಕ ತಂಡದ ಕೈಗೆ ಸಿಕ್ಕಿ ಅಲ್ಲಿಯೇ ಜೀವ ಕಳೆದುಕೊಂಡಿದ್ದ. ಈ ಘಟನೆಯನ್ನು ಸ್ಥಳೀಯರೊಬ್ಬರು ತನ್ನ ಮೊಬೈಲ್‌ನಲ್ಲಿ ವೀಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟರು. ಹತ್ಯೆ ನಡೆಸಿದ ನಂತರ ಹಂತಕರು ಪರಾರಿಯಾಗುವ ವೇಳೆ ಕಪ್ಪು ಬಣ್ಣದ ಅಂಗಿ ಧರಿಸಿದ್ದ ವ್ಯಕ್ತಿ ಮತ್ತು ಅವರೊಂದಿಗಿದ್ದ ಇಬ್ಬರು ಬುರ್ಖಾಧಾರಿ ಮಹಿಳೆಯರು ಆರೋಪಿಗಳಿಗೆ ಸಹಾಯ ಮಾಡಿದ್ದರು. ಇದೂ ಸಹ ವೀಡಿಯೋ ಚಿತ್ರೀಕರಣದಲ್ಲಿ ದಾಖಲಾಗಿತ್ತು.



ಕಮೀಷನರ್ ಅನೂಪ್ ಅಗರ್‌ವಾಲ್

ಮಾಹಿತಿ ತಿಳಿದ ತಕ್ಷಣ ಬಜ್ಪೆ ಸುರತ್ಕಲ್, ಪಣಂಬೂರು ಹಾಗೂ ಕಾವೂರು ಪೊಲೀಸರು ಬಜ್ಪೆಯಿಂದ ಹೊರಬರುವಂತಹ ಎಲ್ಲಾ ದಾರಿಗಳಲ್ಲಿ ನಾಕಾಬಂದಿ ಹಾಕಿದ್ದರು. ಈ ಸಂದರ್ಭದಲ್ಲಿ ಘಟನೆಯ ನಡೆದ ಸ್ಥಳದಿಂದ ಕೇವಲ 2 ಕಿಲೋ ಮೀ. ದೂರದಲ್ಲಿ ಹಂತಕರು ಬಂದಿದ್ದ ಮತ್ತು ಪರಾರಿಯಾಗಿದ್ದ ಮಾರುತಿ ಶಿಫ್ಟ್ ಹಾಗೂ ಬೊಲೆರೊ ಪಿಕ್‌ಅಪ್ ವಾಹನ ಪೊಲೀಸರ ಕಣ್ಣಿಗೆ ಬಿದ್ದಿತ್ತು. ಅದನ್ನು ಪರಿಶೀಲನೆ ಮಾಡಿದಾಗ ಹತ್ಯೆಗೆ ಬಳಸಿದಂತಹ ಆಯುಧಗಳು ಮತ್ತು ಬಳಸಿರದ ತಲವಾರುಗಳು ಪತ್ತೆಯಾಯಿತು. ಪೊಲೀಸರಿಗೆ ಆರಂಭದಲ್ಲಿಯೇ ಬಜ್ಪೆ ಶಾಂತಿಗುಡ್ಡೆಯ ಸಫ್ವಾನ್‌ನ ಬಗ್ಗೆ ಸಂಶಯ ಇತ್ತು. ಈ ಕೃತ್ಯವನ್ನು ಆತನೇ ಮಾಡಿರಬೇಕೆಂದು ಆಲೋಚಿಸಿ ಆತನ ಮನೆಗೆ ದಾಳಿ ನಡೆಸಿದರು. ಆ ಸಂದರ್ಭದಲ್ಲಿ ಆತನ ಮನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮಾವಿನಕೆರೆ ಗ್ರಾಮದ ಕೋಟೆಹೊಳೆ ನಿವಾಸಿ ನಾಗರಾಜ ಮತ್ತು ಕಳಸದ ರುದ್ರ ಪಾದೆಯ ರಂಜಿತ್ ಸಿಕ್ಕಿಬಿದ್ದರು. ಅವರನ್ನು ಪ್ರಶ್ನಿಸಿದ ಸಂದರ್ಭದಲ್ಲಿ ಉಳಿದ ಆರೋಪಿಗಳಾದ ಸಫ್ವಾನ್, ನಿಯಾರಝ್, ಮುಝಮಿಲ್, ಕಳಂದರ ಶಾಫಿ, ಮಹಮ್ಮದ್ ರಿಝ್ವಾನ್ ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಗುರಿಪಡಿಸಿದಾಗ ಪ್ರತೀಕಾರದ ಹತ್ಯೆಯ ಹಿನ್ನಲೆ ಬಯಲಾಯಿತು. ಫಾಝಿಲ್ ಹತ್ಯೆಗೆ ಪ್ರತೀಕಾರ ತೀರಿಸಬೇಕು ಮತ್ತು ತನ್ನ ಮೇಲೆ ನಡೆದ ಹಲ್ಲೆಯ ಆರೋಪಿಗಳಿಗೆ ಸಹಕರಿಸಿದ ಹಿನ್ನೆಲೆಯಲ್ಲಿ ಸುಹಾಸ್‌ಶೆಟ್ಟಿಯನ್ನು ಹತ್ಯೆಗೈಯಲು ರೋಜನೆ ರೂಪಿಸಿದಾಗ ಫಾಝಿಲ್‌ನ ಸಹೋದರ ಆದಿಲ್ 5 ಲಕ್ಷ ರೂ.ಗಳನ್ನು ನೀಡುವುದಾಗಿ ತಿಳಿಸಿದ್ದು ಕಳೆದ ಜನವರಿಯಲ್ಲೇ 3 ಲಕ್ಷ ರೂ. ಎಡ್ವಾನ್ಸ್ ನೀಡಿದ್ದ ಎನ್ನುವುದು ಸ್ಪಷ್ಟವಾಯಿತು. ಆದ್ದರಿಂದ ಎಲ್ಲಾ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು ಇದೀಗ ನ್ಯಾಯಾಲಯಕ್ಕೆ ಹಾಜರು ಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿದ್ದಾರೆ.



ಏಟು ತಿಂದಿದ್ದ ಸುಹಾಸ್ ಗೆಳೆಯ



ಸುಹಾಸ್ ತಂದೆ, ತಾಯಿ

## ಶರಣ್ ಪಂಪ್‌ವೆಲ್, ಭರತ್ ಕುಮ್ಡೇಲು ನೆಕ್ಸ್ಟ್ ಟಾರ್ಗೆಟ್!

ಸುಹಾಸ್ ಶೆಟ್ಟಿ ನೆಕ್ಸ್ಟ್ ಟಾರ್ಗೆಟ್ ಅಂತ ಹೇಳಿ ಮಾರ್ಚ್ 28ರಂದು ಇನ್ಸ್ಟಾಗ್ರಾಮಿನಲ್ಲಿ ಪೋಸ್ಟರ್ ಹರಿಯಬಿಡಲಾಗಿತ್ತು. ಇದು ಸುಹಾಸ್ ಶೆಟ್ಟಿಯ ಗಮನಕ್ಕೂ ಬಂದಿತ್ತು., ಪೊಲೀಸರೂ ಗಮನಿಸಿದ್ದರು. ಪೊಲೀಸರು ಈ ಬಗ್ಗೆ ಸೂಕ್ತ ತನಿಖೆ ನಡೆಸದೆ ಸುಹಾಸ್ ಶೆಟ್ಟಿಯನ್ನೇ ಠಾಣೆಗೆ ಕರೆಯಿಸಿ ವಿಚಾರಣೆ ನಡೆಸಿದ್ದರು. ಮತ್ತು ಆತನ ಇನ್ನೋವಾ ಕಾರಿನಲ್ಲಿದ್ದಂತಹ ಆತ್ಮ ರಕ್ಷಣೆಗೆಂದು ಇಟ್ಟುಕೊಂಡಿದ್ದ ಆಯುಧಗಳನ್ನು ವಶಪಡಿಸಿಕೊಂಡಿದ್ದರು. ಕಾರಿನಲ್ಲಿ ಯಾವುದೇ ರೀತಿಯ ಆಯುಧವನ್ನು ಇಟ್ಟುಕೊಂಡದ್ದೇ ಆದರೆ ಗೂಂಡಾ ಆಕ್ಟ್ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದರು. ಆದ್ದರಿಂದ ಸುಹಾಸ್ ಶೆಟ್ಟಿ ನಿರಾಯುಧನಾಗಿ ಹೋಗಿ ಹಂತಕ ತಂಡಕ್ಕೆ ಸುಲಭದಲ್ಲಿ ಬಲಿಯಾಗಿದ್ದ. ಇದೀಗ ಬಜರಂಗದಳದಲ್ಲಿ ಗುರುತಿಸಿಕೊಂಡಿರುವ ಭರತ್ ಕುಮ್ಡೇಲು ಎಂಬಾತನಿಗೂ ಬೆದರಿಕೆ ಬಂದಿದೆ. ಆತನ ಫೋಟೋವನ್ನು ಹಾಕಿ ನೆಕ್ಸ್ಟ್ ಟಾರ್ಗೆಟ್ ಎಂದು ಹೇಳಲಾಗಿದೆ. ಭರತ್ ಬಜರಂಗದಳದಲ್ಲಿ ಪ್ರಮುಖನಾಗಿದ್ದರು. ಅಶ್ರಫ್ ಕಲಾಯಿ ಕೊಲೆಪ್ರಕರಣದ ಆರೋಪಿ. ಕೆಲವು ವರ್ಷಗಳ ಹಿಂದೆ ಎಡಪಂಥೀಯ ವಿಚಾರಧಾರೆ ಹೊಂದಿದ್ದಂತಹ ಉಪನ್ಯಾಸಕರೊಬ್ಬರಿಗೆ ಪಂಪ್‌ವೆಲ್ ಸರ್ಕಲ್ ನಲ್ಲಿ ಸೆಗಣಿ ಸ್ನಾನ ಮಾಡಿದಂತಹ ಪ್ರಕರಣದಲ್ಲಿ ಗುರುತಿಸಿಕೊಂಡು ಹಿಂದೂಪರ ಸಂಘಟನೆಗಳಲ್ಲಿ ಮುಂಚೂಣಿಯ ನಾಯಕನಾಗಿ ಇರುವವರು. ಇದೀಗ ಅವರಿಗೆ ಬೆದರಿಕೆ ಕರೆ ಬಂದಿದೆ. ಪೊಲೀಸರು ಯಾವುದೇ ಕ್ರಮ ಸದ್ಯಕ್ಕೆ ಕೈಗೊಂಡಿಲ್ಲ, ವಿಶ್ವಹಿಂದೂ ಪರಿಷತ್ತಿನ ರಾಜ್ಯ ಮಟ್ಟದ ನಾಯಕರಾಗಿರುವವರು ಶರಣ್‌ಪಂಪ್‌ವೆಲ್. ಈ ಹಿಂದೆ ಇವರ ಮೇಲೆಯೂ ಬಂಟ್ವಾಳದ ಇಕ್ಬಾಲ್ ಎಂಬಾತನನ್ನು ಹತ್ಯೆ ಮಾಡಿದಂತಹ ಆರೋಪ ಇತ್ತು. ಸುಬಾಷ್ ಪಡೀಲ್ ಮತ್ತಿತರರು ಈ ಹತ್ಯೆ ಮಾಡಿದ್ದರು. ತದನಂತರ ಅವರಿಗೆ ಶರಣ್ ಪಂಪ್‌ವೆಲ್ ಸಹಕಾರ ನೀಡಿದ್ದರು ಎಂದು ಪೊಲೀಸರು ಕೇಸು ದಾಖಲಿಸಿಕೊಂಡಿದ್ದರು. ಇದೀಗ ಅವರೂ ಸಹ ಮುಸ್ಲಿಂ ಮೂಲಭೂತವಾದಿಗಳಿಗೆ ಟಾರ್ಗೆಟ್ ಆಗಿದ್ದಾರೆ. ಇದೇ ಸಂದರ್ಭದಲ್ಲಿ ಸುಹಾಸ್ ಶೆಟ್ಟಿ ಹತ್ಯೆಗೆ ಪ್ರತೀಕಾರ ತೀರಿಸಬೇಕು ಎಂಬ ನಿಟ್ಟಿನಲ್ಲಿ ಆತ ಈ ಹಿಂದೆ ಸಕ್ರಿಯನಾಗಿದ್ದಂತಹ ಸಂಘಟನೆಯ ಯುವಕರು ಮುಂದಾಗಿದ್ದಾರೆ ಎಂಬ ಮಾಹಿತಿಗಳೂ ಇವೆ.

**6** ☞

ಶ್ರೀಕಲಾ ''ಆಗಲೇ ಹೇಳಲಿಲ್ವ. ನನಗೇನೂ ಗೊತ್ತಿಲ್ಲ ಅಂತ'' ಎಂದಳು.

''ನಿನ್ನ ಫ್ರೆಂಡ್ ರಾಧಿಕಾಳನ್ನು ಮೀಟ್ ಮಾಡಿ ವಿಚಾರಿಸೋಣ.''

''ಪ್ರಶ್ನೆಮಾಡುವಾಗ ನೀನು ಸೈಲೆಂಟ್ ಆಗಿರಬೇಕು. ನಾನು ಪರೋಕ್ಷವಾಗಿ ಕೇಳಿ ತಿಳಿದುಕೊಳ್ತೀನಿ.''

''ಆಗಲಿ ಶ್ರೀಕಲಾ.''

●●●

ರಾಧಿಕ ಇವರಿಬ್ಬರನ್ನು ಸ್ವಾಗತಿಸಿದಳು. ಅವಳಿಗೆ ಶ್ರೀವತ್ಸನ ಪರಿಚಯ ಇತ್ತು. ಕಾಫಿ, ತಿಂಡಿಯ ಉಪಚಾರದ ನಂತರ ''ಏ ಕಲಾ... ಯಾಕೆ ನಾಲ್ಕು ದಿನಗಳಿಂದ ಕಾಲೇಜಿಗೆ ಬಂದಿಲ್ಲ'' ಎಂದಳು.

ಶ್ರೀಕಲಾ ಸುಳ್ಳು ಹೇಳಿದಳು.

''ರಾಧಿಕ... ಅವತ್ತು ಪಾರ್ಟಿಯಲ್ಲಿ ನೀವೆಲ್ಲಾ ಸೇರಿ ನನಗೆ ಬಲವಂತ ಮಾಡಿ ವಿಸ್ಕಿ ಕುಡಿಸಿಬಿಟ್ರಿ. ಮೊದಲ ಅಮಲಿನ ಅನುಭವ. ಅದು ಸರಿ... ಅವತ್ತು ರಾತ್ರಿ ನನ್ನನ್ನು ಯಾರು ಮನೆಗೆ ಕರೆದುಕೊಂಡು ಹೋದ್ರು.''

ರಾಧಿಕ ನಗುತ್ತಾ ''ಅದನ್ನ ಕೇಳಲು ನೀನು ಇಲ್ಲಿಯತನಕ ಬಂದ್ಯಾ? ನಿನ್ನನ್ನು ಆ ರಾತ್ರಿ ನನ್ನ ಮನೇಲಿ ಉಳಿಸಿಕೊಳ್ಳಬೇಕು ಅಂತ ಅಂದುಕೊಂಡಿದ್ದೆ. ಆದರೆ ಅವರು ಬಂದು ಕರೆದುಕೊಂಡು ಹೋದ್ರು'' ಎಂದಳು.

ಶ್ರೀವತ್ಸ ಕೋಪದಿಂದ ''ಅಲ್ಲಾ ಮೇಡಂ... ಅಮಲಿನಲ್ಲಿರುವ ಶ್ರೀಕಲಾಳನ್ನು ಯಾರೋ ಬಂದಿದ್ರು ಅಂತ ಕಳಿಸಿಬಿಡೋದು ಸರೀನಾ? ನಿಮ್ಮಂತ ವಿದ್ಯಾವಂತೆಗೆ ಇದು ಗೊತ್ತಾಗಲಿಲ್ವ?''

ಶ್ರೀಕಲಾ ಗಂಭೀರವಾಗಿ ''ಏ ವತ್ಸ... ನೀನು ಸುಮ್ನೆ ಇರು ಅಂತ ಹೇಳಿಲ್ವ'' ಎಂದು ಈಗ ಗೆಳತಿಯ ಕಡೆ ತಿರುಗಿ ''ಏ... ರಾಧಿಕ... ಯಾರೋ ಅಪರಿಚಿತನ ಜೊತೆ ನನ್ನನ್ನು ಕಳಿಸಿರೋಲ್ಲಿ ನಂಬಿಕೆ ಇದೆ. ಅವರ‍್ಯಾರು ಅಂತ ಗೊತ್ತಾ?''

ರಾಧಿಕ ''ಏ... ಅವರು ನಿನ್ನ ಭಾವ ರಾಜೇಂದ್ರ ಕಾರಲ್ಲಿ ಬಂದಿದ್ರು. ಹಾಗಾಗಿ ಅವರ ಜೊತೆ ನಿನ್ನನ್ನು ಕಳಿಸಿದೆ'' ಎಂದಳು.

ಶ್ರೀಕಲಾ ಬೆಚ್ಚಿಬಿದ್ದಳು.

ಆ ಕ್ಷಣಗಳಲ್ಲಿ ಬದಲಾದಳು.

ಭಾವನೆಗಳನ್ನು ನಿಯಂತ್ರಿಸಿದಳು.

ಗೆಳತಿಗೆ ಥ್ಯಾಂಕ್ಸ್ ಹೇಳಿ ಅಲ್ಲಿಂದ ಹೊರಟಳು.

ಕಾರು ಚಲಿಸುತ್ತಿದೆ.

ಶ್ರೀತವ್ಸನ ಕಡೆ ತಿರುಗಿದಳು. ಅವನ ಮುಖ ಬಿರುಸಾಗಿದೆ.

ಕಣ್ಣಾಲಿಗಳು ತಿರುಗುತ್ತಿವೆ.

ಶ್ರೀಕಲಾ ''ಭಾವನೆಗೆ ನನ್ನ ಮೇಲೆ ತುಂಬಾ ದಿನಗಳಿಂದ ಆಸೆ ಇತ್ತು. ಪರೋಕ್ಷವಾಗಿ ನನ್ನನ್ನು ಸುಖದ ಆಟ ಆಡಲು ಆಹ್ವಾನಿಸಿದ್ದರು. ನನಗೆ ಶ್ರೀಮಂತಿಕೆಯ ಐಷಾರಾಮಿ ಬದುಕಿನ ಆಸೆ ತೋರಿಸಿದ್ದರು. ನಾನು ಅವರಿಗೆ ಎಚ್ಚರಿಕೆ ನೀಡಿದ್ದೆ ಮತ್ತು ಅವರ ಜೊತೆಗಿನ ಒಡನಾಟ ಕಡಿಮೆ ಮಾಡಿಕೊಂಡೆ. ನಾನು ಪಾರ್ಟಿಗೆ ಹೋಗಿದ್ದ ಸಂಗತಿ ಹೇಗೋ ತಿಳಿದುಕೊಂಡಿದ್ದಾರೆ. ಪಾರ್ಟಿ ಅಂದ ಮೇಲೆ ಕುಡಿದಿರುತ್ತಾಳೆ. ಅಂತಹ ಅವಕಾಶ ಸಿಕ್ಕಿದರೆ ಬಿಡಬಾರದು ಅಂತ ಅವರು ಅಲ್ಲಿಗೆ ಬಂದು ಕರೆದುಕೊಂಡು ಹೋಗಿದ್ದಾರೆ.''

ಶ್ರೀವತ್ಸ ಮುಷ್ಠಿ ಬಿಗಿದು ಸೀಟಿನ ಮೇಲೆ ಗುದ್ದಿದನು. ''ಹೆಂಡತಿಯ ತಂಗಿಯ ಮೇಲೆ ಈ ರೀತಿ ಅತ್ಯಾಚಾರ ಮಾಡಿರುವ ಅವನನ್ನು ಉಳಿಸಲಾರೆ. ಅವನ ದೇಹದ ಎಲ್ಲಾ ಮೂಳೆಗಳನ್ನು ಅಲ್ಲಾಡಿಸಿ ಆಟ ಆಡಿಸಿಬಿಡ್ತೀನಿ'' ಎಂದು ಹಲ್ಲು ಕಡಿದನು.

ಅವಳು ರೇಗಿದಳು.

''ಏ... ರಾಜೇಂದ್ರ ಅಕ್ಕನ ಗಂಡ. ಅವನಿಂದ ಸತ್ಯ ಬಾಯಿ ಬಿಡಿಸಿ ಬುದ್ಧಿ ಕಲಿಸಬೇಕು. ಅವನಿಗೆ ಪ್ರಾಣಾಪಾಯ ಮಾಡಿದರೆ ಅಕ್ಕನ ಬದುಕನ್ನು ಹಾಳು ಮಾಡಿದಂತೆ ಆಗುತ್ತೆ.''

''ನಿನಗೆ ಅನ್ಯಾಯ ಮಾಡಿರೋ ಅವನನ್ನ ಸುಮ್ನೆ ಬಿಟ್ಟುಬಿಡು ಅಂತೀಯ?''

ಅವಳು ಗಂಭೀರವಾಗಿ ''ಈ ಪ್ರಕರಣ ಬಹಿರಂಗ ಆಗದಂತೆ ಸತ್ಯ ಬಾಯಿ ಬಿಡಿಸೋಣ. ಯಾವ ರೀತಿ ಬುದ್ಧಿ ಕಲಿಸಬೇಕು ಅಂತ ನಾನು ಹೇಳ್ತೀನಿ'' ಎಂದಳು.

●●●

ರಾಜೇಂದ್ರ ಆಫೀಸ್‌ನಿಂದ ಹೊರಗೆ ಬಂದು ಕಾರಿನ ಡೋರ್ ತೆಗೆದು ಕುಳಿತಿರುವಾಗಲೇ ಶ್ರೀವತ್ಸ ಗಾಳಿ ವೇಗದಲ್ಲಿ ಗೂಳಿಯ ರೀತಿ ನುಗ್ಗಿ ಅವನ ಎದೆಗೆ ಚಾಕು ಒತ್ತಿದನು. ರಾಜೇಂದ್ರ ಗಾಬರಿಯಿಂದ ''ಏ ಶ್ರೀವತ್ಸ... ನೀನಾ... ಏನೋ ಇದು ಗುಂಡಾಗಿರಿ'' ಎಂದನು.

ಶ್ರೀವತ್ಸ ಅವನ ಕೆನ್ನೆಗೆ ರಪ್ಪನೆ ಹೊಡೆದ ನಂತರ ''ಏ... ಪ್ರಶ್ನೆ ಮಾಡದೆ ನಾನು ಹೇಳಿದ ಕಡೆ ಕಾರು ಓಡಿಸು. ಇಲ್ಲಾ ಅಂದ್ರೆ, ಮಗನೆ ಬೋಟಿ... ಬೋಟಿ ನಿಕಾಲ್ ಮಾಡ್ತೀನಿ.''

ಕಾರು ಈಗ ಶ್ರೀವತ್ಸ ಹೇಳಿದ ರೂಟ್‌ನಲ್ಲಿ ಹೋಗುತ್ತಿದೆ.

●●●

ಅದು ಶ್ರೀವತ್ಸನ ಮನೆ.

ತಂದೆ-ತಾಯಿ ಯಾರೂ ಇರಲಿಲ್ಲ.

ಆ ರೂಮಲ್ಲಿ ಶ್ರೀವತ್ಸ, ರಾಜೇಂದ್ರ ಮತ್ತು ಶ್ರೀಕಲಾ ಇದ್ದಾರೆ.

ರಾಜೇಂದ್ರ ಗಾಬರಿಯಾಗಿದ್ದಾನೆ.

ಮುಖ ಬಿಳುಚಿಕೊಳ್ಳುತ್ತಿದೆ.

ಶ್ರೀಕಲಾ ''ನಿನ್ನ ಭಾವ ಅಂತ ಕರೆಯೋಲ್ಲ. ಏ ಲೋಫರ್ ರಾಜೇಂದ್ರ... ನನಗೆಲ್ಲಾ ತಿಳಿದಿದೆ. ಆ ರಾತ್ರಿ ರಾಧಿಕಾಳ ಮನೆಯಿಂದ ಅಮಲಿನಲ್ಲಿದ್ದ ನನ್ನನ್ನು ಕರ್ಕೊಂಡ್ ಬಂದಿದ್ದು ನೀವೇ ತಾನೇ'' ಎಂದು ಕೇಳಿದಳು.

ಉತ್ತರಿಸಲಾರದೆ ಚಡಪಡಿಸಿದಳು.

''ಏ ಮಗನೆ... ಬಾಯಿ ಬಿಡದಿದ್ದರೆ ಹಲ್ಲುಗಳನ್ನು ಉದುರಿಸಿ ಬಿಡ್ತೀನಿ'' ಎಂದು ಕೈ ಎತ್ತಿ ತೂರಿದನು.

ಶ್ರೀಕಲಾ ''ಏ ಶ್ರೀವತ್ಸ...'' ಎಂದು ಅವನ ಕೈ ಹಿಡಿದು ತಡೆಯುತ್ತಾ ''ನೀನು ಕಂಟ್ರೋಲ್ ಕಳ್ಕೋಬೇಡ ಅಂತ ಆಗಲೇ ಹೇಳಿಲ್ವ'' ಎಂದು ರೇಗಿದಳು.

ರಾಜೇಂದ್ರ ಭೀತನಾಗಿದ್ದಾನೆ.

''ಅಮಲಿನಲ್ಲಿದ್ದ ನನ್ನನ್ನು ಬನಶಂಕರಿ ಬಡಾವಣೆಯಲ್ಲಿರುವ ಮನೆಗೆ ಕರೆದುಕೊಂಡು ಹೋಗಿ ಎರಡು ದಿನಗಳ ಕಾಲ.''

ರಾಜೇಂದ್ರ ಗಾಬರಿಯಿಂದ ''ಇಲ್ಲ... ಇಲ್ಲ... ನಾನು ನಿನ್ನನ್ನು ನನ್ನ ಮನೆಗೆ ಕರ್ಕೊಂಡು ಬಂದೆ. ಯಾಕೆ ಅಂದರೆ ನಿನ್ನ ಅಕ್ಕ ಊರಲ್ಲಿ ಇರಲಿಲ್ಲ. ಫ್ರೆಂಡ್ ಮನೆ ಫಂಕ್ಷನ್ಗೆ ಹೋಗಿದ್ಲು'' ಎಂದನು.

ಶ್ರೀವತ್ಸ ''ಸುಳ್ಳು ಬೊಗಳಬೇಡ ಮನಗೆ'' ಎಂದು ಗಡುಸಾಗಿ ಹೇಳಿದನು.

ಶ್ರೀವತ್ಸ 'ಎದ್ದು ಟೇಬಲ್ ಲಾಕರ್‌ನಲ್ಲಿದ್ದ ಗೆಜ್ಜೆ ತೆಗೆದು ತೋರಿಸಿದನು.

ಅದು ಶ್ರೀಕಲಾಳ ಗೆಜ್ಜೆ...!

ಅವಳು ಅದನ್ನು ಎತ್ತಿಕೊಂಡಳು. ನಂತರ ''ಇಲ್ಲಿಗೆ ಕರೆದುಕೊಂಡು ಬಂದ ಮೇಲೆ ಹೆಂಡತಿಯ ಭಯದಿಂದ ನನ್ನನ್ನು ಬೇರೆ ಕಡೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದೀಯ'' ಎಂದಳು.

''ಇಲ್ಲ... ಇಲ್ಲ... ನಾನು ಅತ್ಯಾಚಾರ ಮಾಡಿಲ್ಲ. ನನಗೆ ಅಂತಹ ಅವಕಾಶವೇ ಸಿಗಲಿಲ್ಲ.''

ಶ್ರೀವತ್ಸ ''ಶ್ರೀಕಲಾ ಅಮಲಿನಲ್ಲಿದ್ದಳು. ಮನೇಲಿ ಯಾರೂ ಇರಲಿಲ್ಲ. ಇಂತಹ ಅವಕಾಶ ಸಿಕ್ಕಿರುವಾಗ, ಇವಳ ಸೌಂದರ್ಯದ ಮೇಲೆ ತುಂಬಾ ದಿನಗಳಿಂದ ಆಸೆ ಇಟ್ಟುಕೊಂಡಿದ್ದ ನೀನು ಅತ್ಯಾಚಾರ ಮಾಡದಿರಲು ಸಾಧ್ಯವೆ? ನಿನ್ನಂತ ಕೊಳಕು ಕಾಮುಕನಿಗೆ ತಕ್ಕ ಶಿಕ್ಷೆ ಆಗಲೇಬೇಕು'' ಎಂದನು.

ಶ್ರೀಕಲಾ ಗಂಭೀರವಾಗಿ ''ಶಿಕ್ಷೆ ಬಗ್ಗೆ ಈಗ ಚರ್ಚೆ ಬೇಡ'' ಎಂದು ರಾಜೇಂದ್ರನ ಕಡೆ ತಿರುಗಿ ''ನನಗೆ ಸತ್ಯ ತಿಳಿಯಬೇಕು'' ಎಂದಳು.

ರಾಜೇಂದ್ರ ಈಗ ಕತ್ತಿನ ಹಿಂಭಾಗ ತೋರಿಸಿದನು. ಆ ಜಾಗ ಊದಿಕೊಂಡು ಕಡಿಮೆ ಪ್ರಮಾಣದಲ್ಲಿ ರಕ್ತ ಕ್ಲಾಟ್ ಆಗಿದೆ.

ರಾಜೇಂದ್ರ ''ನಿನ್ನನ್ನು ಅನುಭವಿಸಲು ಈ ಮನೆಗೆ ಕರೆದುಕೊಂಡು ಬಂದಿದ್ದು ನಿಜ. ಆದರೆ ನಾನು ಆಗ ಫ್ರಂಟ್ ಡೋರ್ ಲಾಕ್ ಮಾಡುವುದನ್ನು ಮರೆತಿದ್ದೆ. ಯಾರೋ ಒಳಗೆ ನುಗ್ಗಿ ನನ್ನ ಕತ್ತಿನ ಭಾಗದಲ್ಲಿ, ಕಿವಿಯ ಕೆಳ ಭಾಗಕ್ಕೆ ಬಲವಾಗಿ ಹೊಡೆದು ಪ್ರಜ್ಞೆ ತಪ್ಪಿಸಿದರು'' ಎಂದನು.

''ಯಾರು... ಯಾರವರು?''

''ಗುರುತು ಸಿಗಬಾರದು ಅಂತ ಗೆಟಪ್ ಅನ್ನು ಬದಲಿಸಿಕೊಂಡಿದ್ದ. ಎಚ್ಚರವಾದಾಗ ನೀನು ಈ ಮನೇಲಿ ಇರಲಿಲ್ಲ.''

''ಶ್ರೀಕಲಾ ''ಸಧ್ಯಕ್ಕೆ ನಿನ್ನ ಹೇಳಿಕೆನ ನಂಬುತ್ತೇನೆ. ಆ ಅನಾಮಿಕ ಅತ್ಯಾಚಾರಿಯ ಬಗ್ಗೆ ಸುಳಿವು ಏನಾದರೂ ಸಿಕ್ಕಿರುವುದೆ?''

ಅವನು ಮೆಲ್ಲಗೆ ''ಇಲ್ಲ...'' ಎಂದು ಹೇಳುತ್ತಿರುವಾಗಲೇ ಶ್ರೀತವತ್ಸ ''ಈಗ ನಿನ್ನನ್ನು ಸುಮ್ಮನೆ ಬಿಡುತ್ತಿದ್ದೇನೆ. ನಿನ್ನ ಹೇಳಿಕೆ ಸುಳ್ಳಾದರೆ ನಿನಗೊಂದು ಗತಿ ಕಾಣಿಸುತ್ತೇನೆ'' ಎಂದು ಅವಳ ಕೈ ಹಿಡಿದು ಆ ಮನೆಯಿಂದ ಹೊರಗೆ ಬಂದನು.

●●●

ಶ್ರೀಕಲಾ ತಲೆಕೆಡಿಸಿಕೊಂಡಿದ್ದಾಳೆ. ಅತ್ಯಾಚಾರಿ ಯಾರು ಎಂಬುದು ತಿಳಿಯುತ್ತಿಲ್ಲ. ಇದರ ಬಗ್ಗೆ ಚಿಂತಿಸುತ್ತಿರುವಾಗ ಈ ಆಲೋಚನೆ ಬಂದಿತು.

ನನ್ನ ಮೇಲೆ ಅತ್ಯಾಚಾರ ಮಾಡಿರುವ ಮನೆಗೆ ಹೋಗಿ ಪರಿಶೀಲನೆ ಮಾಡಿದರೆ ಏನಾದರೂ ಸುಳಿವು ಸಿಗಬಹುದೆ ಎಂಬ ಆಲೋಚನೆ ಬಂದ ಕೂಡಲೇ ಅವಳು ಕಾರ್ಯತತ್ಪಳಾದಳು.

ಶ್ರೀವತ್ಸನಿಗೆ ಫೋನ್ ಮಾಡಿದಳು. ಅವನು ಫೋನ್ ಅಟೆಂಡ್ ಮಾಡಲಿಲ್ಲ. ನಾಲ್ಕಾರು ಸಲ ಮಾಡಿದ ನಂತರ ಅವನಿಂದ ಉತ್ತರ ಬಂದಿತು. ''ಶ್ರೀಕಲಾ... ನಾನು ಫ್ರೆಂಡ್ ಜೊತೆ ಸಕಲೇಶಪುರದ ಕಾಡಿನಲ್ಲಿ ಟ್ರಕ್ಕಿಂಗ್ ಮಾಡುತ್ತಿದ್ದೀನಿ. ನಾಳೆ ಊರಿಗೆ ಬರ್ತೀನಿ'' ಎಂದು ಹೇಳಿ ಲಿಂಕ್ ಕಟ್ ಮಾಡಿದನು.

ಶ್ರೀಕಲಾ ಅವನಿಗಾಗಿ ಕಾಯಲಿಲ್ಲ. ಆಟೋದಲ್ಲಿ ಬನಶಂಕರಿ ಬಡಾವಣೆಗೆ ಬಂದಳು. ಸುಮಾರು ಇಪ್ಪತ್ತು ನಿಮಿಷ ಹುಡುಕಾಡಿದ ನಂತರ ಆ ಮನೆ ಕಂಡಿತು.

ಆ ಮನೆಗೆ ಬೀಗ ಹಾಕಲಾಗಿದೆ.

ಅವಳು ಹತ್ತಿರದಲ್ಲೇ ಇದ್ದ ಅಂಗಡಿಯ ಮಾಲೀಕರನ್ನ ವಿಚಾರಿಸಿ ಆ ಮನೆ ಮಾಲೀಕರ ವಿಳಾಸ ತಿಳಿದು ಅಲ್ಲಿಗೆ ಹೋದಳು. ''ಆ ಮನೆಯನ್ನು ಯಾರು ಬಾಡಿಗೆಗೆ ಪಡೆದಿದ್ದಾರೆ. ನೀವು ಒಪ್ಪಿಕೊಂಡು ಸಹಕರಿಸಿ ಬೀಗ ತೆಗೆದರೆ ಐದು ನಿಮಿಷಗಳ ಕಾಲ ಆ ಮನೆಯನ್ನು ನಾನು ನೋಡ್ತೀನಿ.''

ಮಾಲೀಕರು ''ಆ ಮನೆಯನ್ನು ಒಂದು ವಾರದ ಹಿಂದೆ ಯುವಕನೊಬ್ಬ ಬಾಡಿಗೆಗೆ ಪಡೆದಿದ್ದ. ಅವನು ನನಗೆ ಹೇಳದೆ, ಬಾಗಿಲಿಗೆ ಬೀಗ ಹಾಕದೆ ಹೊರಟು ಹೋಗಿದ್ದಾನೆ.''

''ಅವರ‍್ಯಾರು ಅಂತ ಗೊತ್ತಾ?''

ಮಾಲೀಕರು ನೆನಪು ಮಾಡಿಕೊಂಡು ಅವನ ಚಹರೆ ಬಗ್ಗೆ ಹೇಳಿದರು.

ಶ್ರೀಕಲಾ ಬೆಚ್ಚಿಬಿದ್ದಳು.

ಮೊಬೈಲ್ ಓಪನ್ ಮಾಡಿ ಫೋಟೋ ತೋರಿಸಿದಳು. ಮಾಲೀಕರು ''ಹಾಂ... ಇವನೇ ಕಣಮ್ಮ... ಲೋಫರ್ ಬಾಡಿಗೆ ಹಣ ಪೂರ್ತಿ ಕೊಡದೆ ಬಾಗಿಲು ಹಾಕದೆ ಹೋಗಿದ್ದಾನೆ.''

●●●

ಕಾಲಿಂಗ್ ಬೆಲ್ ಶಬ್ದ ಮಾಡಿದ್ದರಿಂದ ಬಾಗಿಲು ತೆಗೆದನು ಶ್ರೀವತ್ಸ.

ಬಿರುಗಾಳಿಯಂತೆ ನುಗ್ಗಿದಳು. ಕಾಲಿನಿಂದ ಚಪ್ಪಲಿ ಕಳಚಿ ಅವನ ಮುಖ, ಎದೆ ತುಂಬಾ ರಪರಪನೆ ಹೊಡೆದಳು. ಬಾಯಿ ತುಂಬಾ ಉಗುಳು ತುಂಬಿಕೊಂಡು ಮುಖದ ಮೇಲೆ ಕ್ಯಾಕರಿಸಿ ಉಗಿದಳು. ಕಾಲಿನಿಂದ ಅವನ ಸೊಂಟದ ಕೆಳಭಾಗಕ್ಕೆ ಜಾಡಿಸಿ, ಮತ್ತೊಮ್ಮೆ ಉಗಿದು ಹೊರಗೆ ಬಂದಳು.

ಅತ್ಯಾಚಾರಿ ಶ್ರೀವತ್ಸ...!

ಇವಳಿಂದ ಪಾಠ ಹೇಳಿಸಿಕೊಳ್ಳುತ್ತಿದ್ದಾಗಲಿಂದ ಶ್ರೀಕಲಾಳ ಸೌಂದರ್ಯ ಆರಾಧಿಸುತ್ತಿದ್ದನು. ಅವಳನ್ನು ಅನುಭವಿಸಬೇಕೆಂಬ ಹುಚ್ಚು ಈ ಕಾಮದಾಟಕ್ಕೆ ಪ್ರಚೋದನೆ ನೀಡಿತು. ಭಾವ ರಾಜೇಂದ್ರನ ಮನೆಗೆ ನುಗ್ಗಿ ಅವನಿಗೆ ಪ್ರಜ್ಞೆ ತಪ್ಪಿಸಿ ಮೊದಲೇ ಬುಕ್ ಮಾಡಿದ್ದ ಬಾಡಿಗೆ ಮನೆಗೆ ಕರೆತಂದು ಚೆನ್ನಾಗಿ ಕುಡಿಸಿ ಆಸೆ ತೀರಿಸಿಕೊಂಡಿದ್ದನು.

☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಓಬಳಾಪುರಂ ಅಕ್ರಮ ಗಣಿಗಾರಿಕೆ ಕೇಸ್... ಜನಾರ್ಧನ ರೆಡ್ಡಿಗೆ 7 ವರ್ಷ ಜೈಲು!



**ಕ**ರ್ನಾಟಕ ಮತ್ತು ಆಂಧ್ರಪ್ರದೇಶಗಳೆರಡಕ್ಕೂ ಮೋಸ ಮಾಡಿ, ದಬ್ಬಾಳಿಕೆ, ದುರ್ವರ್ತನೆ ತೋರಿ, ನೈಸರ್ಗಿಕ ಸಂಪತ್ತನ್ನು ಹಾಡುಹಗಲಲ್ಲಿ ದರೋಡೆ



ಮಾಡಿ, ಎಲ್ಲವನ್ನೂ ದಕ್ಕಿಸಿಕೊಳ್ಳುತ್ತೇನೆ ಎಂದು ಮೆರೆದು, ತಿರುಪತಿ ತಿಮ್ಮಪ್ಪನಿಗೂ ನಲವತ್ತು ಕೋಟಿ ರೂಪಾಯಿಯ ಚಿನ್ನದ ಟೋಪಿ ಇಟ್ಟಿದ್ದ ಗಣಿ ಕಳ್ಳ ಜನಾರ್ಧನ ರೆಡ್ಡಿ ಕಡೆಗೂ ಅಪರಾಧಿ ಎಂದು ನ್ಯಾಯಾಲಯದಲ್ಲಿ ಸಾಬೀತಾಗಿದೆ! ಓಬಳಾಪುರ ಮೈನಿಂಗ್ ಕಂಪನಿ ಪ್ರಕರಣದಲ್ಲಿ ಹೈದರಾಬಾದಿನ ಸಿಬಿಐ ವಿಶೇಷ ನ್ಯಾಯಾಲಯವು ಜನಾರ್ಧನ ರೆಡ್ಡಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿದ್ದು ರೆಡ್ಡಿಗಾರು ಮತ್ತೆ ಜೈಲು ಪಾಲಾಗಿದ್ದಾರೆ!

ಅಂತರಗಂಗಮ್ಮಕೊಂಡದ (OMC 3) 68 ಎಕರೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವ ಪ್ರಕರಣವನ್ನು ಆಂಧ್ರ ಪ್ರದೇಶ ಸರ್ಕಾರವು ಹದಿನಾರು ವರ್ಷಗಳ ಹಿಂದೆಯೇ ಸಿಬಿಐಗೆ ವಹಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆಯೇ **Cash For Bail** ನಡೆದದ್ದು! ಅಂದರೆ ಜನಾರ್ಧನ ರೆಡ್ಡಿಯ ತಮ್ಮ ಸೋಮಶೇಖರ ರೆಡ್ಡಿಯು ತನ್ನ ಅಣ್ಣನಿಗೆ ಜಾಮೀನು ನೀಡಿ ಎಂದು ಸಿಬಿಐ ವಿಶೇಷ ನ್ಯಾಯಾಲಯದ ಆಗಿನ ನ್ಯಾಯಮೂರ್ತಿಗೆ ಮತ್ತೊಬ್ಬ ನ್ಯಾಯಮೂರ್ತಿಯ ಮೂಲಕ ಹತ್ತಾರು ಕೋಟಿ ಲಂಚ ಕೊಟ್ಟಿದ್ದ ಘಟನೆ ನಡೆದಿತ್ತು! ಸುದೈವಕ್ಕೆ ಖದೀಮರೆಲ್ಲರೂ ಸಿಕ್ಕಿಬಿದ್ದಿದ್ದರು. ಇನ್ನೂ ಆ ಪ್ರಕರಣ ವಿಚಾರಣೆ ಹಂತದಲ್ಲಿಯೇ ಇದೆ ಅನ್ನಿಸುತ್ತದೆ. (ಆ ಇಬ್ಬರೂ ಅಯೋಗ್ಯ ಮತ್ತು ಭ್ರಷ್ಟ ನ್ಯಾಯಮೂರ್ತಿಗಳು ಈಗಾಗಲೇ ಸತ್ತಿದ್ದಾರೆ ಎಂದು ಇತ್ತೀಚೆಗೆ ಎಲ್ಲೋ ಓದಿದ ನೆನಪು)

ಈಗ ಜೈಲುಪಾಲಾಗಿರುವ ಪ್ರಕರಣದಲ್ಲಿ ಜನಾರ್ಧನ ರೆಡ್ಡಿಯು ಆಂಧ್ರ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಪಡೆದು, ಅಂತರರಾಜ್ಯ ಗಡಿಯನ್ನು ಉಲ್ಲಂಘಿಸಿ, ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಉತ್ಕೃಷ್ಟ ಅದಿರನ್ನು ಅಕ್ರಮವಾಗಿ ಸಾಗಿಸಿರುತ್ತಾರೆ.

ಅಂತೂ ಇಂತೂ, ಪ್ರಕರಣ ದಾಖಲಾದ ಸುಮಾರು ಹದಿನಾರು ವರ್ಷಗಳ ನಂತರ (ಹದಿನಾಲ್ಕು ವರ್ಷಗಳ ಕಾಲ ವಿಚಾರಣೆ ನಡೆದು) ನಮ್ಮ ಘನ ನ್ಯಾಯಾಲಯ ಇಂದು ತೀರ್ಪು ಪ್ರಕಟಿಸಿದೆ. ಅಪರಾಧಿಗಳಿಗೆ ಕೊನೆಗೂ ಶಿಕ್ಷೆಯಾಗಿರುವ ಕಾರಣಕ್ಕೆ ಇದು ಒಂದು ರೀತಿಯಲ್ಲಿ ನಿರಾಳತೆ ತಂದರೂ, ಅಪರಾಧ ಪ್ರಕರಣಗಳ ವಿಲೇವಾರಿ ಇಷ್ಟೊಂದು ಸಮಯ ತೆಗೆದುಕೊಳ್ಳುವುದು ನ್ಯಾಯಾಂಗ ವ್ಯವಸ್ಥೆಗೇ ಅವಮಾನ ಎನ್ನಿಸುತ್ತದೆ!

ಈ ಪ್ರಕರಣ ವಿಚಾರಣೆ ಹಂತದಲ್ಲಿರುವಾಗಲೇ ಜನಾರ್ಧನ ರೆಡ್ಡಿಯು ರಾಜಕಾರಣವನ್ನೂ ಮುಂದುವರೆಸಿ ಶಾಸಕನಾಗಿಯೂ ಆಯ್ಕೆಯಾಗಲು ಆಡಿದ ಎಲ್ಲಾ ಆಟಗಳಿಗೆ ನ್ಯಾಯಾಂಗವೇ ನೇರ ಹೊಣೆಯಲ್ಲವೇ! ದೇಶದಲ್ಲಿ ಅಪರಾಧಿಗಳು ಜಾಮೀನು ಪಡೆದು ರಾಜಾರೋಷವಾಗಿ ಓಡಾಡಿಕೊಂಡು ಅಪರಾಧಗಳನ್ನು ಮುಂದುವರೆಸುವ ಎಲ್ಲಾ ಪ್ರಕರಣಗಳಲ್ಲಿ ನ್ಯಾಯಾಂಗದ ಪಾಲೇ ದೊಡ್ಡದು ಮತ್ತು ಈ ವಿಚಾರವಾಗಿ ದೇಶದ ನ್ಯಾಯಾಂಗವು ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಲೇಬೇಕು.

ಏಳು ವರ್ಷಗಳ ಶಿಕ್ಷೆ ಆಗಿರುವ ಕಾರಣಕ್ಕೆ ಜನಾರ್ಧನ ರೆಡ್ಡಿ ಈಗಾಗಲೇ ಜೈಲು ಸೇರಿಯಾಗಿದೆ ಎಂಬ ಸುದ್ದಿಯಿದೆ. ಆದರೆ, ಆತ ಜೈಲು ಸೇರಿದ ದೃಶ್ಯ ಇನ್ನೂ ಸೋ ಕಾಲ್ಡ್ ನೇರ ದಿಟ್ಟ ನಿರಂತರ ಚಾನಲ್‌ಗಳಲ್ಲಿ ಮೂಡಿ ಬಂದಿಲ್ಲ! ಇಂದಲ್ಲ ನಾಳೆ ಅರೆಸ್ಟ್ ಆಗಬಹುದು ಬಿಡಿ. ಹಾಗೆಯೇ ಆತನ ಶಾಸಕ ಸ್ಥಾನವೂ ರದ್ದಾಗಿ ಒಂದೆರಡು ದಿನಗಳಲ್ಲಿ ಆತ ಮಾಜಿ ಶಾಸಕನಾಗುತ್ತಾನೆ. ಗಂಗಾವತಿ ಕ್ಷೇತ್ರಕ್ಕೆ ಮತ್ತೆ ಉಪ ಚುನಾವಣೆಯೂ ಆಗಲಿದೆ.

ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ಜನರು ತಮ್ಮ ಪಾತ್ರದ ಬಗ್ಗೆ ಯೋಚಿಸಬೇಕು. ಅಪರಾಧಿಗಳ ಹಣಕ್ಕೆ ಬಾಯಿಬಿಡುತ್ತ, ಅವರ ದರ್ಪಕ್ಕೆ ಹೆದರಿ, ಜಾತಿ/ಕೋಮು ಕಾರಣಕ್ಕೆ ರಹಸ್ಯ ಮತದಾನ ಪದ್ಧತಿಯಲ್ಲಿಯೂ ದುಷ್ಟರಿಗೆ ಮತ್ತು ರಾಕ್ಷಸರಿಗೆ ತಮ್ಮ ಕೈಯಾರೆ ಓಟು ಹಾಕಿ ಬೆಂಬಲಿಸುವ ಮತದಾರರು ನಿಜಕ್ಕೂ ಎಂತಹವರು ಎನ್ನುವುದು ದೇಶದ ಆತ್ಮಸಾಕ್ಷಿಯನ್ನು ಚುಚ್ಚಬೇಕಾದ ವಿಷಯ. ಸಾತ್ವಿಕ ಆಕ್ರೋಶವನ್ನು ಬಳಸಿ ಕ್ರಾಂತಿ ಮಾಡಬೇಕಾದ ಸಂದರ್ಭ ಈಗಿನದು.



ಆದರೆ ಕುವ್ಯವಸ್ಥೆಯ ತುತ್ತತುದಿಯಲ್ಲಿ ಯಾವುದೇ ನ್ಯಾಯ/ನೀತಿ/ಧರ್ಮ ಇಲ್ಲದ ಕಾಲದಲ್ಲಿ ಸಮಾಜವನ್ನು ಬದಲಾಯಿಸಲು ಮನಸ್ಸು ಮಾಡದೇ ಇರುವುದು ದೇಶದ ಕೆಟ್ಟ ಸ್ಥಿತಿಯನ್ನು ಬಿಂಬಿಸುತ್ತದೆ. ಇಲ್ಲಿಯ ಅಸಮಾನತೆ, ಅಕ್ರಮ, ಭ್ರಷ್ಟಾಚಾರ, ಅನ್ಯಾಯ, ಬಡತನ, ನೋವು, ನಿರಾಸೆ, ಹತಾಶೆ, ಇತ್ಯಾದಿಗಳನ್ನು ಮುಂದುವರೆಸುತ್ತಲೇ ಇರುತ್ತದೆ.

ಬಂಧುಗಳೇ, ಇನ್ನಾದರೂ ಬದಲಾಗಿ.... ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ನಿಮ್ಮ ಸಮುದಾಯಕ್ಕಾಗಿ, ಈ ದೇಶಕ್ಕಾಗಿ...

---

4 ☞

ಎಮಿರೇಟ್ಸ್ ಮಿಲಿಟರಿ ಆಸ್ಪತ್ರೆ (PEMH) ನಡೆಸಿದೆ ಎಂದು ಹೇಳಲಾಗಿದೆ. ಆದರೆ, ಅಧಿಕಾರಿಗಳ ಪ್ರಕಾರ, ಖಾನ್ ಅವರ ವೈದ್ಯಕೀಯ ಪರೀಕ್ಷೆಯನ್ನು ಇಸ್ಲಾಮಾಬಾದ್ನಲ್ಲಿರುವ ಪಿಮ್ಸ್ - ಪಾಕಿಸ್ತಾನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರ ತಂಡ ನಡೆಸಿತ್ತು. ಆದ್ದರಿಂದ, ವೈರಲ್ ಆಗಿರುವ ವರದಿಯು ಅನುಮಾನವನ್ನು ಹುಟ್ಟುಹಾಕಿದೆ!

ಪ್ರಸಾರವಾದ ದಾಖಲೆಯ ಬಗ್ಗೆ ಇನ್ನೂ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ, ಅದು ನಿಜವೋ ಸುಳ್ಳೋ ಎನ್ನುವುದರ ಬಗ್ಗೆ ಇನ್ನೂ ಅನುಮಾನಗಳಿವೆ. ಆ ದಾಖಲೆಯಲ್ಲಿ ವೈದ್ಯಕೀಯ ಮೌಲ್ಯಮಾಪನ ಸಾರಾಂಶ ಮತ್ತು ಬಿಡುಗಡೆ ಅಧಿಕಾರ ಬಾಕಿ ಇದೆ - ಶಂಕಿತ ಲೈಂಗಿಕ ದೌರ್ಜನ್ಯ ಪ್ರಕರಣ ಎಂದು ಬರೆಯಲಾಗಿದೆ.

**ಬಿರುಕು ಬಿಟ್ಟ ಗುದ ನಾಳ!**

ದಾಖಲೆಯಲ್ಲಿ ರೋಗಿಯ ಹೆಸರು ಇಮ್ರಾನ್ ಅಹ್ಮದ್ ಖಾನ್ ನಿಯಾಜಿ ಎಂದು ಬರೆಯಲಾಗಿದೆ. ದೈಹಿಕ ಪರೀಕ್ಷಾ ವಿಭಾಗದಲ್ಲಿ; ಹೇಳಲಾದ ವರದಿಯು ಅಸ್ಥಿರ (ಹೈಪೊಟೆನ್ಷನ್, ಟಾಕಿಕಾರ್ಡಿಯಾ); ಇತ್ತೀಚಿನ ದೈಹಿಕ ಹಲ್ಲೆಯ ಪುರಾವೆ (ಎಕಿಮೋಸಸ್, ಸವೆತಗಳು) ಎಂದು ಹೇಳಿದೆ. ವರದಿಯಲ್ಲಿ ಜನನಾಂಗ ಪರೀಕ್ಷೆ ವಿಭಾಗವೂ ಇದ್ದು, ಅದು ಬಾಹ್ಯ ಪೆರಿನಿಯಲ್ ಎಕಿಮೊಸಿಸ್ ಮತ್ತು ಊತ ಎಂದು ಹೇಳಿದೆ.


ವರದಿಯಲ್ಲಿನ ಗುದನಾಳದ ಪರೀಕ್ಷಾ ವಿಭಾಗದ ಪ್ರಕಾರ, ರೋಗಿಯು ಗುದ ಸ್ಪಿಂಕ್ಟರ್ ಟೋನ್, ಬಹು ರೇಖೀಯ ಬಿರುಕುಗಳು, ಸ್ಪರ್ಶಿಸಬಹುದಾದ ಪೆರಿಯೆಕ್ಟಲ್ ಮಾಸಸ್ ಮತ್ತು ಸಕ್ರಿಯ ರಕ್ತಸ್ರಾವದೊಂದಿಗೆ ಪೆರಿಯಾನಲ್ ಸವೆತಗಳು ದಾಖಲಾಗುದೆ ಎಂದು ವಿವರಿಸಲಾಗಿದೆ.


ಈ ಸ್ಥಿತಿಗೆ ಸಂಭವನೀಯ ಕಾರಣಗಳು ಗುದದ ಬಿರುಕುಗಳು ಮತ್ತು ಮೂಲವ್ಯಾಧಿ ರಕ್ತಸ್ರಾವ ಎಂದು ವರದಿ ಹೇಳಿದೆ. ಈ ನಡುವೆ ಈ ಸ್ಥಿತಿಗೆ ಇತರ ಕಾರಣಗಳು ಕೊಲೊರೆಕ್ಟಲ್ ಪಾಲಿಪ್ಸ್, ಉರಿಯೂತದ ಕರುಳಿನ ಕಾಯಿಲೆ ಮತ್ತು ಕೊಲೊರೆಕ್ಟಲ್ ಕಾರ್ಸಿನೋಮ ಎಂದು ವರದಿ ಹೇಳಿಕೊಂಡಿದೆ. ದಾಖಲೆಯ ಕೊನೆಯಲ್ಲಿ ಒಂದು ಟಿಪ್ಪಣಿ ಹೀಗಿದ್ದು, ರಾವಲ್ಪಿಂಡಿಯಲ್ಲಿರುವ ಸೇನಾ ಮುಖ್ಯಸ್ಥರ ಕಚೇರಿಯಿಂದ (COAS) ಪ್ಲೇಸ್ಮೆಂಟ್ ಆರ್ಡರ್ ಮತ್ತು ಲಿಖಿತ ಬಿಡುಗಡೆ ಅಧಿಕಾರವನ್ನು ಪಡೆದ ನಂತರವೇ ಬಿಡುಗಡೆ ಪತ್ರಗಳನ್ನು ನೀಡಲಾಗುತ್ತದೆ.










**14 ವರ್ಷ ಜೈಲು ಶಿಕ್ಷೆ!**

ಪಾಕಿಸ್ತಾನದ ಪ್ರಮುಖ ವಿರೋಧ ಪಕ್ಷವಾದ ಪಾಕಿಸ್ತಾನ್ ತೆಹ್ರೀಕ್ -ಇ-ಇನ್ಸಾಫ್ ಪಕ್ಷದ ಸ್ಥಾಪಕರೂ ಆಗಿರುವ ಇಮ್ರಾನ್ ಖಾನ್ ಆಗಸ್ಟ್ 2023 ರಿಂದ ಜೈಲಿನಲ್ಲಿದ್ದಾರೆ. ಇದೇ ಜನವರಿಯಲ್ಲಿ ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಖಾನ್ ಅವರಿಗೆ 14 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

# ಮಗು ಬಯಸುವ ದಂಪತಿಗೆ ಬಂಜೆತನದ ಶಾಕ್!

**ಬದಲಾದ ಜೀವನ ಕ್ರಮಗಳು, ಸೇವಿಸುವ ಆಹಾರ, ಒತ್ತಡದ ಕೆಲಸಗಳು, ದುಶ್ಚಟಗಳು ಹೀಗೆ ಹತ್ತಾರು ಕಾರಣಗಳಿಂದಾಗಿ ದಂಪತಿಗಳು ಮಕ್ಕಳನ್ನು ಪಡೆಯುವಲ್ಲಿ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಅದರಲ್ಲೂ ವಯಸ್ಕ ಮಹಿಳೆಯಲ್ಲಿ ಸರಾಸರಿ ಫಲವಂತಿಕೆಯ ದರವು 1.6ಕ್ಕೆ ಇಳಿದಿರುವುದು ಆತಂಕಕ್ಕೆ ತಳ್ಳಿದೆ. ಈ ವರದಿಯು ಕರ್ನಾಟಕದ್ದಾಗಿದ್ದು, ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಮ್‌ನಿಂದ ಇದು ಬಯಲಾಗಿದೆ. ಫಲವಂತಿಕೆ ದರ ಇಳಿಕೆಗೆ ಮುಖ್ಯವಾಗಿ ಹಾರ್ಮೋನ್ ಅಸಮತೋಲನ, ಪರಿಸರದಲ್ಲಿರುವ ವಿಷಕಾರಕಗಳಿಗೆ ಒಡ್ಡಿಕೊಳ್ಳುವುದು ಮತ್ತು ಜೀವನಶೈಲಿ ಕಾರಣ ಎಂಬುದು ಕೂಡ ಅಷ್ಟೇ ಸತ್ಯ.**



✍ ಬಿ.ಎಂ. ಲವಕುಮಾರ್

ಇವತ್ತು ಮಕ್ಕಳನ್ನು ಬಯಸುವ ದಂಪತಿಗಳ ಪೈಕಿ ವಿಶ್ವದಲ್ಲಿ ಪ್ರತೀ 6 ದಂಪತಿಗಳಲ್ಲಿ ಒಂದು ದಂಪತಿ ಬಂಜೆತನ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬ ಕಟು ಸತ್ಯವನ್ನು ವಿಶ್ವ ಆರೋಗ್ಯ ಸಂಸ್ಥೆಯು ಹೊರ ಹಾಕಿದೆ. ಹೆಚ್ಚುತ್ತಿರುವ ಸಮಸ್ಯೆಗಳು ಆತಂಕ ತಂದಿದ್ದು, ಹೀಗಾಗಿಯೇ ದೇಶದಲ್ಲಿ ರಾಷ್ಟ್ರೀಯ ಬಂಜೆತನ ಜಾಗೃತಿ ಸಪ್ತಾಹ ಆಚರಿಸಿ ಫಲವಂತಿಕೆ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಉಂಟು ಮಾಡುವ ಕೆಲಸವನ್ನು ಮಾಡಲಾಗುತ್ತಿದೆ. ಈ ವರ್ಷ ಆಲ್ ಇನ್ ಫರ್ಟಿಲಿಟಿ ಎಂಬ ಥೀಮ್ ಇಡಲಾಗಿದ್ದು, ಬಂಜೆತನ ಸಮಸ್ಯೆ ವಿರುದ್ಧ ಹೋರಾಡುವಾಗ ವೈದ್ಯರು, ಮನಶಾಸ್ತ್ರಜ್ಞರು, ಕುಟುಂಬ ಮತ್ತು ಕಚೇರಿಯಲ್ಲಿ ಬೆಂಬಲ ಪಡೆಯುವ ಅಗತ್ಯದ ಕುರಿತು ಜಾಗೃತಿಯನ್ನು ಮಾಡಲಾಗುತ್ತಿದೆ.

ಇನ್ನು ಬಂಜೆತನದ ಬಗ್ಗೆ ಹೇಳಬೇಕೆಂದರೆ ಒಂದು ವರ್ಷದವರೆಗೆ ನಿಯಮಿತವಾಗಿ ಯಾವುದೇ ರಕ್ಷಣೆಯಿಲ್ಲದೆ ನಡೆಸುವ ದೈಹಿಕ ಸಂಪರ್ಕದ ನಂತರವೂ ಗರ್ಭಧಾರಣೆಯಾಗದೇ ಇದ್ದರೆ ಅದನ್ನು ಬಂಜೆತನ ಎಂದೇ ಪರಿಗಣಿಸಲಾಗುತ್ತಿದ್ದು, ಇಂತಹ ಸಂದರ್ಭಗಳಲ್ಲಿ ಫರ್ಟಿಲಿಟಿ ತಜ್ಞರ ಅಗತ್ಯತೆ ಹೆಚ್ಚಾಗಿರುತ್ತದೆ. ಮಹಿಳೆಯರಲ್ಲಿ ಬಂಜೆತನ ಕಂಡು ಬಂದರೆ ಕೂಡಲೇ ಹಾರ್ಮೋನ್ ಮಟ್ಟದ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ತಜ್ಞರು ಹೇಳುವ ಪ್ರಕಾರ ಮೊದಲಿಗೆ ಆಂಟಿ-ಮುಲ್ಲೇರಿಯನ್ ಹಾರ್ಮೋನ್ (ಎಎಂಎಚ್) ಪರೀಕ್ಷೆ ನಡೆಸಲಾಗುತ್ತದೆ.



ಈ ಪರೀಕ್ಷೆಯು ಅಂಡಾಶಯದ ಮೀಸಲು ಅಥವಾ ಓವೇರಿಯನ್ ರಿಸರ್ವ್ ಅನ್ನು ನಿರ್ಧರಿಸಲು ಸಹಾಯ ಮಾಡುತ್ತದೆ. ಅಲ್ಟ್ರಾಸೌಂಡ್‌ಗಳನ್ನು ನಡೆಸಬಹುದಾಗಿದ್ದು, ಅದರಿಂದ ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ (ಪಿಸಿಓಎಸ್ ಅಥವಾ ಪಿಸಿಓಡಿ) ಮತ್ತು ಗರ್ಭಾಶಯ ಸಮಸ್ಯೆಗಳನ್ನು ಗುರುತಿಸಬಹುದಾಗಿದೆ. ಅದೇ ಥರ ಪುರುಷರು ವೀರ್ಯ ವಿಶ್ಲೇಷಣೆ ಅಥವಾ ಸೀಮೆನ್ ಅನಾಲಿಸಿಸ್ ಅನ್ನು ಮಾಡಿಕೊಳ್ಳುವ ಮೂಲಕ ವೀರ್ಯದ ಆರೋಗ್ಯದ ಕುರಿತು ಮೌಲ್ಯಮಾಪನ ಮಾಡಬಹುದಾಗಿದೆ. ಸುಮಾರು ಶೇ.30ರಷ್ಟು ಬಂಜೆತನ ಸಮಸ್ಯೆಗಳು ಪುರುಷರಿಂದ ಉಂಟಾಗುತ್ತವೆ ಎನ್ನುವುದನ್ನು ಇಲ್ಲಿ ಗಮನಾರ್ಹವಾಗಿದೆ. ಸ್ಪರ್ಮ್ ಕೌಂಟ್ ಕಡಿಮೆ ಇರುವುದು ಅಥವಾ ವೀರ್ಯದ ಗುಣಮಟ್ಟ ಕಡಿಮೆ ಇರುವುದು ಕೂಡ ಬಂಜೆತನಕ್ಕೆ ಕಾರಣವಾಗಿರಬಹುದು ಎಂದು ತಜ್ಞರು ಹೇಳುತ್ತಾರೆ.

ಬಂಜೆತನದ ಕುರಿತಂತೆ ಒಂದಷ್ಟು ಮಾಹಿತಿ ನೀಡಿರುವ ಬೆಂಗಳೂರಿನ ಕಲ್ಯಾಣ ನಗರದ ನೋವಾ ಐವಿಎಫ್ ಫರ್ಟಿಲಿಟಿಯ ಫರ್ಟಿಲಿಟಿ ತಜ್ಞೆ ಡಾ. ಅಪೂರ್ವ ಸತೀಶ್ ಅಮರನಾಥ್ ಅವರು, ಸುಮಾರು ಶೇ.30ರಷ್ಟು ಬಂಜೆತನ ಸಮಸ್ಯೆಗಳು ಪುರುಷರಿಂದ ಉಂಟಾಗುತ್ತವೆ ಎಂದು ಹೇಳಿದ್ದು, ಸಮಸ್ಯೆ ಎದುರಿಸುವ ಪುರುಷರು ಸಾಮಾನ್ಯವಾಗಿ ಸ್ಪರ್ಮ್ ಕೌಂಟ್ ಕಡಿಮೆ ಹೊಂದಿರುತ್ತಾರೆ ಅಥವಾ ಇತರ ಸಮಸ್ಯೆ ಹೊಂದಿರುತ್ತಾರೆ. ಇನ್ನು ಶೇ.30 ರಷ್ಟು ಬಂಜೆತನ ಮಹಿಳೆಯರಿಂದ ಉಂಟಾಗುತ್ತವೆ. ಅದಕ್ಕೆ ಆ ಮಹಿಳೆಯರ ಅಂಡೋತ್ಪತ್ತಿ ಸಮಸ್ಯೆ, ಆನುವಂಶೀಯತೆ ಇತ್ಯಾದಿ ಕಾರಣವಾಗುತ್ತದೆ.

ಶೇ.10ರಷ್ಟು ಬಂಜೆತನಗಳು ವಿವರಿಸಲಾಗದ ಕಾರಣಗಳನ್ನು ಹೊಂದಿರುತ್ತವೆ ಮತ್ತು ಉಳಿದ ಶೇ.30 ರಷ್ಟು ಸಮಸ್ಯೆಗಳು ಪುರುಷ ಮತ್ತು ಮಹಿಳೆ ಇಬ್ಬರಿಂದಲೂ ಉಂಟಾಗಬಹುದು. 12 ತಿಂಗಳುಗಳ ಕಾಲ ನಿಯಮಿತವಾಗಿ ರಕ್ಷಣೆಯಿಲ್ಲದ ದೈಹಿಕ ಸಂಪರ್ಕ ಮಾಡಿದ ಬಳಿಕವೂ ಗರ್ಭಧಾರಣೆಯಾಗದಿದ್ದಾಗ ಅಥವಾ 35 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು 6 ತಿಂಗಳ ನಂತರ ಗರ್ಭಧಾರಣೆ ಆಗದಿದ್ದಾಗ ತಕ್ಷಣ ಫರ್ಟಿಲಿಟಿ ತಜ್ಞರನ್ನು ಭೇಟಿಯಾಗಿ ಸಮಾಲೋಚನೆ ನಡೆಸಬೇಕು ಎಂಬ ಸಲಹೆಯನ್ನು ಅವರು ನೀಡುತ್ತಾರೆ.

ಅಂತರರಾಷ್ಟ್ರೀಯ ಮಾನದಂಡಗಳ ಫರ್ಟಿಲಿಟಿ ಚಿಕಿತ್ಸಾ ಪದ್ಧತಿಗಳನ್ನು ಹೊಂದಿರುವ ಅತಿದೊಡ್ಡ ಫರ್ಟಿಲಿಟಿ ಚೈನ್ ಗಳಲ್ಲಿ ಒಂದಾಗಿರುವ ನೋವಾ ಐವಿಎಫ್ ಫರ್ಟಿಲಿಟಿ ಹೇಳುವಂತೆ ಕನಿಷ್ಠ ಶೇ.10ರಷ್ಟು ಮಹಿಳೆಯರು ಬಂಜೆತನ ಎದುರಿಸುವ ಸಮಯದಲ್ಲಿ ತೀವ್ರ ಖಿನ್ನತೆಗೆ ಒಳಗಾಗುತ್ತಾರೆ ಎಂಬುದನ್ನು ಹೇಳಿದೆ. ಅಲ್ಲದೇ ಶೇ.50-60 ಮಹಿಳೆಯರು ಬಂಜೆತನ ಸಮಸ್ಯೆ ಮತ್ತು ಫರ್ಟಿಲಿಟಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಒತ್ತಡ ಅನುಭವಿಸುವುದಾಗಿ ಹೇಳಿದೆ. ಬಂಜೆತನ ಸಮಸ್ಯೆ ಎದುರಿಸುತ್ತಿರುವ ದಂಪತಿಗಳು ತಜ್ಞರನ್ನು ಕಂಡು ಚಿಕಿತ್ಸೆ ಪಡೆಯಬೇಕಾಗುತ್ತದೆ. ವೈದ್ಯರ ಸಲಹೆಯನ್ನು ಪಾಲಿಸಬೇಕಾಗುತ್ತದೆ.

ಇದರಾಚೆಗೆ ಇನ್ನೊಂದಷ್ಟು ಸಮಸ್ಯೆಗಳು ಮಹಿಳೆ ಅಥವಾ ದಂಪತಿಯನ್ನು ಕಾಡಬಹುದು. ಇದಕ್ಕೆ ಕಾರಣಗಳು ಹಲವು ಇರಬಹುದಾದರೂ ಈ ಸಮಯದಲ್ಲಿ ದಂಪತಿ ತಮ್ಮ ನಿತ್ಯದ ಬದುಕಿನಲ್ಲಿ ಒಂದಷ್ಟು ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಕಡೆಗೆ ಹೆಚ್ಚು ಗಮನಹರಿಸಬೇಕಾಗುತ್ತದೆ. ಮನಸ್ಸಿನಲ್ಲಿ ಇಲ್ಲಸಲ್ಲದ ಗೊಂದಲಗಳನ್ನು ಮಾಡಿಕೊಳ್ಳದೆ ಖುಷಿ, ಖುಷಿಯಾಗಿ ಇರುವುದನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ಮದುವೆಯಾಗಿ ವರ್ಷವಾಗುತ್ತಿದ್ದಂತೆಯೇ ಮಗು ವಾಗಬೇಕೆಂದು ಬಯಸುವುದು ಹಿಂದಿನಿಂದಲೂ ನಡೆದು ಕೊಂಡು ಬಂದಿದೆ. ಆದರೆ ಬದಲಾದ ಕಾಲದಲ್ಲಿ ಇಬ್ಬರೂ ದುಡಿಮೆಯಲ್ಲಿರುವ ಕಾರಣ ಮದುವೆಯಾಗಿ ಒಂದಷ್ಟು ವರ್ಷ ಕಳೆಯಲಿ ಆಮೇಲೆ ಮಕ್ಕಳ ಬಗ್ಗೆ ಯೋಚಿಸೋಣ ಎಂದು ಬಯಸುವುದು ಸಹಜ. ಆದರೆ ತಡವಾಗಿ ಮಕ್ಕಳನ್ನು ಬಯಸುವುದು ಕೆಲವೊಮ್ಮೆ ಬಂಜೆತನಕ್ಕೂ ಕಾರಣವಾಗಬಹುದು. ಈ ವಿಚಾರದಲ್ಲಿ ತಜ್ಞರ ಸಲಹೆ ಪಡೆದುಕೊಳ್ಳುವುದು ಇಲ್ಲಿ ಮುಖ್ಯವಾಗಿರುತ್ತದೆ.

ಇಂತಹ ಸಮಯದಲ್ಲಿ ದಂಪತಿಯಲ್ಲಿ ಮಾನಸಿಕ ಒತ್ತಡವೂ ಹೆಚ್ಚಬಹುದು. ಏಕೆಂದರೆ ಸಂಬಂಧಿಕರು, ಪರಿಚಯಸ್ಥರು ಮದುವೆಯಾಗಿ ಒಂದೆರಡು ತಿಂಗಳು ಕಳೆಯುತ್ತಿದ್ದಂತೆಯೇ ಗುಡ್ ನ್ಯೂಸ್ ಇಲ್ವ ಅಂಥ ಕೇಳಲು ಆರಂಭಿಸುತ್ತಾರೆ. ಹೀಗಾಗಿ ಕೆಲವೊಮ್ಮೆ ಮಗು ಬೇಕು ಎಂದು ಬಯಸಿದರೂ ಅದು ಸಾಧ್ಯವಾಗದೆ ಹೋದಾಗ ಮಾನಸಿಕ ಹಿಂಸೆಯಾಗಿ ಕೆಲವು ದಂಪತಿಗೆ ಕಿರಿಕಿರಿ ಎನಿಸಬಹುದು. ಆದರೆ ಇಂತಹದೊಂದು ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ಪ್ರಯತ್ನ ಬಹುತೇಕವಾಗಿ ಎಲ್ಲೂ ನಡೆಯುವುದಿಲ್ಲ. ಇದು ಭಾವನಾತ್ಮಕವಾಗಿ ಕುಗ್ಗಿ ಸಮಸ್ಯೆ ಮತ್ತಷ್ಟು ಹೆಚ್ಚಲು ಕಾರಣವಾಗಬಹುದು.

ಈ ಸಂದರ್ಭದಲ್ಲಿ ದಂಪತಿ ಹಿಂಜರಿಕೆಯಿಂದ ಕುಗ್ಗಬಹುದು, ಸಂಬಂಧಗಳಲ್ಲಿ ತೊಂದರೆಗಳಾಗಬಹುದು, ಆತ್ಮೀಯತೆಯ ಕೊರತೆ ಕಾಡಬಹುದು, ಹೆಚ್ಚಿನ ಒತ್ತಡ ಉಂಟಾಗಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ಆತ್ಮಹತ್ಯೆಯ ಆಲೋಚನೆಗಳು ಬಂದರೂ ಅಚ್ಚರಿಯಿಲ್ಲ, ಹೀಗಾಗಿ ಅಂಥ ಸಮಯದಲ್ಲಿ ಅವರಿಗೆ ಮನೆಯವರ ಪ್ರೀತಿ, ಆತ್ಮೀಯತೆ, ಸಲಹೆಗಳು ಬೇಕಾಗುತ್ತವೆ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ. ದಂಪತಿ ಕೂಡ ಈ ವೇಳೆ ತಜ್ಞರನ್ನು ಕಂಡು ಚಿಕಿತ್ಸೆಗಳನ್ನು ಪಡೆಯಬೇಕಾಗುತ್ತದೆ.



ಇನ್ನು ಬಂಜೆತನ ಸಮಸ್ಯೆ ಎದುರಿಸುವ ಸಂದರ್ಭದಲ್ಲಿ ದಂಪತಿಗೆ ಕುಟುಂಬದ ಬೆಂಬಲವು ಬಹಳ ಮುಖ್ಯವಾಗುತ್ತದೆ. ಪದೇ ಪದೇ ಫ್ಯಾಮಿಲಿ ಪ್ಲಾನಿಂಗ್ ಕುರಿತ ಪ್ರಶ್ನೆಗಳನ್ನು ಕೇಳಿ, ಕೇಳಿ ಒತ್ತಡವನ್ನು ಹೆಚ್ಚಿಸುವ ಬದಲು ಕುಟುಂಬದ ಸದಸ್ಯರು ಮತ್ತು ಸಂಬಂಧಿಕರು ಅವರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು. ಅವರ ಖಾಸಗಿತನವನ್ನು ಗೌರವಿಸಬೇಕು. ಪ್ರೋತ್ಸಾಹದಾಯಕ ಮತ್ತು ಎಲ್ಲವನ್ನೂ ಅರ್ಥೈಸಿಕೊಳ್ಳುವ ವಾತಾವರಣವನ್ನು ಸೃಷ್ಟಿಸಿಕೊಡಬೇಕು. ಕೆಲವೊಮ್ಮೆ ಕುಟುಂಬದಲ್ಲಿ ಒಳ್ಳೆಯ ವಾತಾವರಣ ಇಲ್ಲದೆ ಹೋದರೆ ದಂಪತಿಗಳು ವೈದ್ಯಕೀಯ ಮತ್ತು ಭಾವನಾತ್ಮಕ ಸವಾಲುಗಳನ್ನು ಎದುರಿಸಲು ಮಾನಸಿಕ ತಯಾರಿ ಮಾಡಿಕೊಳ್ಳಬೇಕಾಗುತ್ತದೆ.

ಬಂಜೆತನದ ಸಮಸ್ಯೆ ಎದುರಿಸುವ ದಂಪತಿ ಕುರಿತಂತೆ ನೋವಾ ಐವಿಎಫ್ ಫರ್ಟಿಲಿಟಿಯ ಚೀಫ್ ಸೈಕಾಲಾಜಿಕಲ್ ಕೌನ್ಸಿಲರ್ ಡಯಾನಾ ದಿವ್ಯಾ ಕ್ರಾಸ್ಟಾ ಅವರು ಒಂದಷ್ಟು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಅವರು ಹೇಳುವಂತೆ ಸಾಮಾನ್ಯವಾಗಿ ನಮ್ಮಲ್ಲಿ ಬಹಳಷ್ಟು ಜನರು ಬಂಜೆತನವನ್ನು ತಮ್ಮ ಆತ್ಮಗೌರವದ ಜೊತೆ ಜೋಡಿಸಿಬಿಡುತ್ತಾರೆ. ಇದೊಂದು ಸಮಸ್ಯೆಯಾಗಿದೆ. ನಿಜಹೇಳಬೇಕೆಂದರೆ ಬಂಜೆತನ ಎನ್ನುವುದು ದೇಹಕ್ಕೆ ಸಂಬಂಧಿಸಿದ್ದಾದರೂ ಸಾಮಾಜಿಕ ಕಳಂಕ ಮತ್ತು ಭಾವನಾತ್ಮಕ ಒತ್ತಡದಿಂದಾಗಿ ಬಂಜೆತನ ಸಮಸ್ಯೆ ಇರುವವರು ಆತಂಕ ಮತ್ತು ಖಿನ್ನತೆಯಂತಹ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುವಂತಾಗಿದೆ.



ಬಂಜೆತನ ಸಮಸ್ಯೆ ಎದುರಿಸುವ ಸಂದರ್ಭದಲ್ಲಿ ಹೆಣ್ಮಕ್ಕಳು ಒಂಟಿತನ ಅನುಭವಿಸುತ್ತಾರೆ. ಏಕೆಂದರೆ ಅವರಿಗೆ ಕುಟುಂಬದಿಂದ ಗರ್ಭಧಾರಣೆಗೆ ಒತ್ತಡ ಇರುತ್ತದೆ. ಗರ್ಭಧಾರಣೆ ಆಗದಿರುವುದಕ್ಕೆ ಸಮಾಜ ಅವರನ್ನು ವಿಚಿತ್ರವಾಗಿ ನೋಡುತ್ತದೆ. ಕೆಲವೊಮ್ಮೆ ಬಂಜೆತನದ ಆರೋಪಗಳನ್ನು ಮಹಿಳೆಯರ ಮೇಲೆ ಹೊರಿಸಲಾಗುತ್ತದೆ. ಅಂಥದ್ದನ್ನೆಲ್ಲಾ ಧೈರ್ಯವಾಗಿ ಎದುರಿಸಲು ಬಂಜೆತನ, ಗರ್ಭಪಾತದ ಸಮಸ್ಯೆ ಎದುರಿಸುತ್ತಿರುವ ದಂಪತಿ ಸಜ್ಜಾಗಬೇಕಾಗುತ್ತದೆ. ಈ ಸಮಯದಲ್ಲಿ ಮಾನಸಿಕ ಸಮಾಲೋಚನೆಯಲ್ಲಿ ಅಥವಾ ಸೈಕಾಲಾಜಿಕಲ್ ಕೌನ್ಸಿಲಿಂಗ್ ನಲ್ಲಿ ಭಾಗವಹಿಸಿ ಮಾನಸಿಕ ಬೆಂಬಲ ಪಡೆಯಬೇಕು. ಆ ಮೂಲಕ ಎಲ್ಲವನ್ನು ಎದುರಿಸಿ ಖುಷಿಯಾಗಿ ಜೀವನ ನಡೆಸುವುದನ್ನು ಕಲಿಯ ಬೇಕಾಗುತ್ತದೆ.

ಇಲ್ಲಿ ಬಂಜೆತನದ ಸಮಸ್ಯೆ ಎದುರಿಸುವ ದಂಪತಿಯಾಗಲೀ ಅವರ ಕುಟುಂಬದವರಾಗಲೀ ಅರ್ಥ ಮಾಡಿಕೊಳ್ಳಬೇಕಾದ ಮುಖ್ಯವಿಚಾರ ಏನೆಂದರೆ ಬಂಜೆತನ ಸಮಸ್ಯೆಯು ವ್ಯಕ್ತಿಯ ಆತ್ಮಗೌರವಕ್ಕೆ ಮಾತ್ರ ಕುಂದು ತರುವುದಲ್ಲ ಜೊತೆಗೆ ಭಾರಿ ಒತ್ತಡವನ್ನು ಸೃಷ್ಟಿಸುತ್ತದೆ ಮತ್ತು ಸಂಬಂಧಗಳಲ್ಲಿ ಬಿರುಕು ಉಂಟು ಮಾಡುವ ಸಾಧ್ಯತೆ ಇರುತ್ತದೆ. ಇದನ್ನು ಅರಿತು ತುಂಬಾ ಎಚ್ಚರಿಕೆಯಿಂದ ಮನೆಯವರು ನಡೆದುಕೊಳ್ಳಬೇಕಾಗುತ್ತದೆ. ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬುವ ಕೆಲಸವನ್ನು ಮಾಡಬೇಕಾಗುತ್ತದೆ.

# ಪಾತಕ ಪ್ರಪಂಚ

# ಮದುವೆ ಆಗದೆ ಹುಚ್ಚು ಬಿಡದು

ಮದುವೆ ಆಗದೆ ಹುಚ್ಚು ಬಿಡೋಲ್ಲ, ಹುಚ್ಚು ಬಿಡದೆ ಮದುವೆ ಆಗೋಲ್ಲ.

ಇದೊಂದು ವಿಚಿತ್ರ ಪ್ರಸಂಗ.

ಈ ದೇಶದಲ್ಲಿ ಎಲ್ಲೆಲ್ಲಿ ಏನೇನು ಆಗುತ್ತಿದೆ ಎಂಬುದನ್ನು ಊಹೆ ಮಾಡಲು ಆಗುತ್ತಿಲ್ಲ. ಅದು ಮಾಧ್ಯಮಗಳಲ್ಲಿ ಪ್ರಸಾರವಾದಾಗ ಮಾತ್ರ ಶಾಕ್ ಉಂಟಾಗುತ್ತದೆ. ಅಂತಹ ಘಟನೆಗಳ ಆಧಾರದ ಮೇಲೆ ಈ ಲೇಖನ ಈ ರಚನೆ ಯಾಗಿದೆ.

●●●

ಅವಳ ಹೆಸರು ಚಾಂದಿನಿ...!

ಪ್ರಾಯ ಇಪ್ಪತ್ತೊಂದು.

ಕಾಲೇಜಿನ ಕನ್ಯೆ ಆಗಿರುವ ಅವಳು ಪೂರ್ತಿ ಓದಲು ಆಗಿರಲಿಲ್ಲ.

ಕಾರಣ ಬಡತನ.

ತೀವ್ರ ರೀತಿಯ ಹಣದ ಸಮಸ್ಯೆ.

ಮನೇಲಿ ತಂದೆಗೆ ಅನಾರೋಗ್ಯ. ತಂಗಿಯರ ಮತ್ತು ತಮ್ಮಂದಿರು ಓದಬೇಕು. ಆದಾಯ ಇಲ್ಲ. ಏನು ಮಾಡಲಿ ಎಂಬ ಚಿಂತೆ ಕಾಡುತ್ತಿದೆ. ಅವಳು ಕಾಲೇಜಿಗೆ ಗುಡ್‌ಬೈ ಹೇಳಿ ಕೆಲಸಕ್ಕೆ ಸೇರಿದ್ದಾಳೆ. ಹನ್ನೆರಡು ಸಾವಿರ ಸಂಬಳ ಬರುತ್ತದೆ. ಯಾವುದಕ್ಕೂ ಸಹ ಸಾಕಾಗುವುದಿಲ್ಲ.

ಅವಳು ತುಂಬಾ ತಲೆಕೆಡಿಸಿಕೊಂಡಿದ್ದಾಳೆ. ತನ್ನವರನ್ನು ಸುಖವಾಗಿಡಬೇಕು ಮತ್ತು ತಂಗಿ, ತಮ್ಮಂದಿರ ಭವಿಷ್ಯ ರೂಪಿಸಬೇಕು ಎಂಬ ಮಹದಾಸೆ ಇದೆ.

ಆದರೆ ಅದಕ್ಕೆಲ್ಲಾ ಹಣ ಬೇಕು.

ದುಡಿಯುವವರು ಯಾರೂ ಇಲ್ಲ.

ಸಂಬಂಧಿಕರು ದೂರಾಗಿದ್ದಾರೆ.

ಈ ಸ್ಥಿತಿಯಲ್ಲಿ ಏನು ಮಾಡಲು ಸಾಧ್ಯ? ಅವಳಿಗೆ ದೂರದ ಸಂಬಂಧಿ ಮತ್ತು ಆತ್ಮೀಯಳೂ ಆಗಿದ್ದ ಕಾಮಾಕ್ಷಿ ಸಲಹೆ ನೀಡಿದ್ದಳು.

ಅವಳು ಶ್ರೀಮಂತಿಕೆಯ ಐಷಾರಾಮಿ ಜೀವನವನ್ನು ನಡೆಸುತ್ತಿದ್ದಳು. ಅವಳ ಬದುಕು ಹಸನಾಗಿತ್ತು.

ದುಡಿಯದೆ ಸುಖವಾಗಿದ್ದಳು.

ಇದೇ ಆಶ್ಚರ್ಯದೊಂದಿಗೆ ಬೇರೆ ರೀತಿಯ ಅನುಮಾನಕ್ಕೆ ಕಾರಣ ಆಗಿತ್ತು.

ಆಕೆಯ ಗಂಡ ಸೆಕೆಂಡ್ ಡಿವಿಜನ್ ಕ್ಲರ್ಕ್. ಅವನಿಗೆ ಬರುವ ಸಂಬಳದಲ್ಲಿ ಕಾರು, ಬೈಕು, ಬಂಗಲೆ ಮತ್ತು ಶ್ರೀಮಂತಿಕೆಯ ಜೀವನ ನಡೆಸುವುದು ಅಸಾಧ್ಯವಾಗಿತ್ತು.

ಕಾಮಾಕ್ಷಿ ಹೇಳಿದ್ದಳು.

ಇದೆಲ್ಲಾ ನನ್ನ ಸಂಪಾದನೆ.

''ಚಾಂದಿನಿ... ನೀನು ನನ್ನಂತೆ ಬದಲಾದರೆ ನಿನ್ನವರ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ನೀನು ಲೈಫಲ್ಲಿ ಎಂಜಾಯ್ ಮಾಡಬಹುದು.

ಇದು ತುಂಬಾ ಮುಖ್ಯ.

ಅವಳಂತೆ ದುಡಿಯಬೇಕು.

ಯಾವ ರೀತಿ ಎಂದು ಹೇಳಿದ್ದಳು. ಅದನ್ನು ಕೇಳಿ ಶಾಕ್ ಆಗಿತ್ತು.

ರಹಸ್ಯವಾಗಿ ದಂಧೆ ಮಾಡುವುದು.

ಚಾಂದಿನಿ ಗಾಬರಿಯಿಂದ ''ನಿನ್ನ ಗಂಡನಿಗೆ ಅನುಮಾನ ಬಂದಿಲ್ವ? ಪ್ರಶ್ನೆ ಮಾಡಿಲ್ವ?''

ಅವಳು ನಗಾಡಿದಳು.

ವ್ಯಂಗ್ಯ ಬೆರೆತ ನಗು.

ಅವಳೀಗ ನಗುತ್ತಲೇ ''ಸುಲಭವಾಗಿ ಶ್ರೀಮಂತಿಕೆಯ ಜೀವನ ಸಿಗುತ್ತಿದೆ. ಹಾಗಾಗಿ ದುಡಿಮೆಯ ರಹಸ್ಯ ಗೊತ್ತಿದ್ದರೂ ಪ್ರಶ್ನೆ ಮಾಡೋಲ್ಲ. ಅವರು ನನ್ನ ಸಂಪಾದನೆಯಿಂದ ಹೈಲೆವೆಲ್‌ನಲ್ಲಿ ಎಂಜಾಯ್ ಮಾಡುತ್ತಾರೆ. ಅಂದ ಮೇಲೆ ನನ್ನನ್ನು ಪ್ರಶ್ನೆ ಮಾಡುವ ಪ್ರಮೇಯ ಬರೋಲ್ಲ'' ಎಂದಳು.

''ಅಂದರೆ... ಅಂದರೆ...''

''ನೀನು ನನಗಿಂತ ತುಂಬಾ... ತುಂಬಾ ಚೆನ್ನಾಗಿದ್ದೀಯ. ಮುಖ್ಯವಾಗಿ ಮದುವೆ ಆಗಿಲ್ಲ. ಪ್ರಾಯ ಮತ್ತು ಸೌಂದರ್ಯ ತುಂಬಿರುವ ನಿನಗೆ ರಸಿಕ ಶ್ರೀಮಂತರು ಸಾವಿರ, ಸಾವಿರಗಳ ಲೆಕ್ಕದಲ್ಲಿ ಹಣ ಕೊಡುತ್ತಾರೆ. ಆ ರಸಿಕರನ್ನು ಯಾವ ರೀತಿ ಆಟ ಆಡಿಸಿ, ಕಲಾತ್ಮಿಕತೆಯ ಬುದ್ಧಿವಂತಿಕೆಯಿಂದ ಕಸ್ಟಮರ್‌ಗಳನ್ನು ಕೆರಳಿಸಿ ಅವರಿಂದ ಗಿಫ್ಟ್, ಬೋನಸ್ ಅಂತ ಹೆಚ್ಚಿನ ಹಣ ಪೀಕಬಹುದು. ನೀನು ಒಪ್ಪಿಕೊಂಡರೆ ನಾನು ವ್ಯವಸ್ಥೆ ಮಾಡ್ತೀನಿ.''

ಚಾಂದಿನಿ ಚಡಪಡಿಸಿದಳು.

ಅವಳಿಂದ ಉತ್ತರಿಸಲಾಗಲಿಲ್ಲ.

''ನೀನು ಓ.ಕೆ. ಅಂದರೆ ಮೇಕಪ್ ಮತ್ತು ಡ್ರೆಸ್ ಮಾಡಿ ಫೋಟೋಗಳನ್ನು ಮತ್ತು ವೀಡಿಯೋ ಕ್ಲಿಪ್‌ಗಳನ್ನು ತೆಗೆಯುತ್ತೇನೆ.''

ಚಾಂದಿನಿ ತುಂಬಾ ಗೊಂದಲದಿಂದಲೇ ''ನಾನು ಯೋಚನೆ ಮಾಡಿ ನನ್ನ ಅಭಿಪ್ರಾಯ ರಾತ್ರಿ ಹೇಳ್ತೀನಿ'' ಎಂದಳು.

ಆ ರಾತ್ರಿ ಒಂಭತ್ತು ಗಂಟೆ.

ಚಾಂದಿನಿ ತನ್ನ ನಿರ್ಧಾರ ತಿಳಿಸಿದಳು.

''ಸಾರಿ ಕಾಮಾಕ್ಷಿ... ಮೈ ಮಾರಿಕೊಂಡು ಸಂಪಾದಿಸಲಾರೆ. ಹತ್ತಾರು ಮಂದಿ ಗಂಡಸರ ವಿಕೃತ ಕಾಮದ ಚಪಲಗಳನ್ನು ತೀರಿಸಲಾರೆ. ನನ್ನಿಂದ ಅಸಾಧ್ಯ.''

ಕಾಮಾಕ್ಷಿ ಬಲವಂತ ಮಾಡಿದರೂ ಸಹ ಅವಳ ನಿರ್ಧಾರ ಬದಲಾಗಲಿಲ್ಲ.

ಆರ್ಥಿಕ ಸಮಸ್ಯೆ ಎದುರಾಗಿದೆ.

ಸಂಸಾರ ಕಡು ಕಷ್ಟದಲ್ಲಿದೆ.

●●●

ಚಾಂದಿನಿಗೆ ಬೆಳಗಿನ ಒಂಭತ್ತು ಗಂಟೆ ಸಮಯದಲ್ಲಿ ಫೋನ್ ಕಾಲ್ ಬಂದಿತು.

ಗ್ರೀನ್ ಬಾಟಿಯ ಕಂಪನಿ!

ಅದರ ಎಂ.ಡಿ. ಫೋನ್ ಮಾಡಿದ್ದಾರೆ.

''ಯೂ ಆರ್ ಮಿಸ್ ಚಾಂದಿನಿ.''

''ಎಸ್ ಸಾರ್... ತಾವು...''

''ಗ್ರೀನ್ ಹಿಲ್ ಕಂಪನಿಯ ಎಂ.ಡಿ. ಸಾಗರ್ ಬಾಟಿಯ ಅಂತ.''

ಅವಳಿಗೆ ಆಶ್ಚರ್ಯದೊಂದಿಗೆ ಒಂದು ರೀತಿ ಕುತೂಹಲ ಉಂಟಾಗುತ್ತಿದೆ.

''ಹೇಳಿ ಸಾರ್.''

''ನಿನ್ನ ಬಗ್ಗೆ ಪೂರ್ಣ ವಿವರ ನನಗೆ ತಿಳಿದಿದೆ. ಹೇಗೆ ಏನು ಅಂತ ಪ್ರಶ್ನೆ ಮಾಡ್ಬೇಡ. ಇವತ್ತು ಹನ್ನೆರಡು ಗಂಟೆಗೆ ನಮ್ಮ ಆಫೀಸ್‌ಗೆ ಬಾ.''

''ಯಾಕೆ ಅಂತ ಕೇಳಬಹುದಾ ಸಾರ್?''

''ನಿನ್ನ ಬಡತನದ ಬಗ್ಗೆ ಗೊತ್ತಿದೆ. ನಿನಗೊಂದು ವಿಶೇಷವಾದ ಉದ್ಯೋಗ ಸಿಗಲಿದೆ.''

''ನನ್ನಂತಹ ಅಪರಿಚಿತಳಿಗೆ...''

''ನಿನ್ನ ಬಗ್ಗೆ ಎಲ್ಲಾ ತಿಳಿದುಕೊಂಡಿದ್ದೇನೆ ಅಂತ ಆಗಲೇ ಹೇಳಿದ್ದೀನಲ್ಲ.''

''ಆರತಿ ಸಾರ್...''

''ನೀನು ಬೇರೆ ರೀತಿ ಅನುಮಾನ ಪಡುವ ಅಗತ್ಯ ಇಲ್ಲ. ನಿನ್ನಂತಹ ಯುವತಿನ ಕೆಟ್ಟ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಕರೆಯುತ್ತಿಲ್ಲ.''

''ನಾನು ಓದಿರೋದು ಪಿಯುಸಿ.''

''ಓದು ನನಗೆ ಮುಖ್ಯ ಅಲ್ಲ.''

''ಆದರೆ ಕಂಪನಿ ಕೆಲಸಕ್ಕೆ ಮುಖ್ಯ ಅಲ್ವ ಸಾರ್.''

''ನಿನಗೆ ಕೊಡಲಿರುವುದು ನೀನು ಊಹೆ ಮಾಡಿರದ ಸೂಪರ್ ಕೆಲಸ.''

''ಏನದು ಸಾರ್.''

''ಫೋನಿನಲ್ಲಿ ಹೇಳುವ ಸಂಗತಿ ಅಲ್ಲ.''

''ಹಾಗಾದರೆ ಬರ್ತೀನಿ.''

''ಆಫೀಸ್ ಅಡ್ರೆಸ್ ಮೆಸೇಜ್ ಮಾಡ್ತೀನಿ.''

''ಆಗಲಿ ಸಾರ್.''

●●●

ನಗರದ ಪ್ರಮುಖ ಕಮರ್ಷಿಯಲ್ ಸ್ಟ್ರೀಟ್ ಎಂ.ಜಿ. ರೋಡ್. ಅಲ್ಲಿರುವ ಎಂ.ಡಿ. ಚೇಂಬರ್‌ನಲ್ಲಿ ಚಾಂದಿಣಿ ಕುಳಿತಿದ್ದಾಳೆ. ಅವರೀಗ ಅವಳನ್ನು ಪರೀಕ್ಷೆ ಮಾಡುವ ರೀತಿ ನೋಡುತ್ತಾ ''ನನ್ನ ನಿರೀಕ್ಷೆಗೆ ತಕ್ಕಂತೆ ಇದ್ದೀಯ'' ಎಂದರು.

ಎಂ.ಡಿ. ಸಾಗರ್ ಬಾಟಿಯ!

ಅವಳು ಚಡಪಡಿಸಿದಳು.

''ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿರೋದು ಕಂಪನಿಯ ಕೆಲಸಕ್ಕೆ ಅಲ್ಲ. ನೀನು ಪರಮ ಸಂತೋಷ ಜೊತೆಗೆ ಆಶ್ಚರ್ಯ ಪಡ್ತೀಯ. ಕೆಲವು ಕ್ಷಣಗಳ ಕಾಲ ನಿನಗೆ ನಂಬಿಕೆ ಬರೋಲ್ಲ.''

ಅವಳು ಕುತೂಹಲಗೊಂಡಳು.

''ಅಂತಹ ಸಂಗತಿ ಏನು?''

''ನಾನು ನಿನ್ನ ಬಗ್ಗೆ ಎಲ್ಲಾ ತಿಳಿದುಕೊಂಡು ಈ ತೀರ್ಮಾನಕ್ಕೆ ಬಂದಿದ್ದೀನಿ.''

ಅವಳಿಗೆ ಕುತೂಹಲ ಹೆಚ್ಚಾಯಿತು.

''ಏನದು ಸಾರ್.''

ಸಾಗರ್ ಬಾಟಿಯ ಕುಳಿತಿದ್ದ ಜಾಗದಿಂದ ಎದ್ದು ಅವಳತ್ತ ಬಾಗಿ ತಲೆಯ ಮೇಲೆ ಕೈ ಇಡುತ್ತಾ ''ನಿನ್ನನ್ನು ನನ್ನ ಸೊಸೆಯಾಗಿ ಮಾಡಿಕೊಳ್ಳಲು ತೀರ್ಮಾನ ಮಾಡಿದ್ದೀನಿ.''

ಅವಳು ಬೆಚ್ಚಿಬಿದ್ದಳು.

''ವಾಟ್... ಸೊಸೆನಾ?''

ಅವರೀಗ ಮೊಬೈಲ್ ಆನ್ ಮಾಡಿ ಮಗನ ನಾಲ್ಕು ಬೇರೆ ಬೇರೆ ಭಂಗಿಗಳ ಫೋಟೋಗಳನ್ನು ತೋರಿಸಿದರು.

ಪ್ರಾಯದ ಆಕರ್ಷಕ ಯುವಕ!

ಅವಳು ಪುಳುಕಗೊಳ್ಳುತ್ತಿದ್ದಾಳೆ. ಆದರೂ ಸಹ ಪೂರ್ಣ ಪ್ರಮಾಣದಲ್ಲಿ ನಂಬಲಿಲ್ಲ. ಈಗ ಅವಳನ್ನು ಅನುಮಾನ ಕಾಡುತ್ತಿದೆ.

ಎಂತಹ ಅದೃಷ್ಟ ಕೂಡಿ ಬಂದಿದೆ.

ಶ್ರೀಮಂತ ಕುಟುಂಬದ ಸೊಸೆಯಾಗಿ, ಹೀರೋ ರೀತಿ ಇರುವ ಯುವಕನನ್ನು ವಿವಾಹವಾಗಿ, ಐಷಾರಾಮಿ ಶ್ರೀಮಂತಿಕೆಯೊಂದಿಗೆ ಸಂಸಾರ ಮಾಡುವ ಅವಕಾಶ ಒಲಿದು ಬಂದಿದೆ.

ಸಾಗರ್ ಬಾಟಿಯ ''ಚಾಂದಿನಿ... ಮೊದಲು ನಿನ್ನನ್ನು ನನ್ನ ಬಂಗಲೆಗೆ ಕರೆದುಕೊಂಡು ಹೋಗಿ ನನ್ನ ಮಗನನ್ನು ತೋರಿಸುತ್ತೇನೆ. ಅವನನ್ನು ನೋಡು. ಆದರೆ ಈ ವಿಚಾರವನ್ನು ಕೂಡಲೇ ನಿನ್ನವರಿಗೆ ಹೇಳಬೇಡ. ನಾನು ವಿವಾಹದ ಸಂಬಂಧ ಒಂದು ಹಂತಕ್ಕೆ ಬಂದ ಮೇಲೆ, ನಿನ್ನ ಸಮ್ಮತಿ ಗಟ್ಟಿಯಾದರೆ ಆಗ ನಿನ್ನವರಿಗೆ ಹೇಳಿದರಾಯಿತು'' ಎಂದರು.

ಅವಳು ''ಮನೆಯವರಿಗೆ ಹೇಳದೆ ನಾನು ಹೇಗೆ ಒಪ್ಪಿಕೊಳ್ಳಲಿ? ಅವರಿಗೆಲ್ಲಾ ನಿಮ್ಮ ಮಗನನ್ನು ತೋರಿಸಬೇಕು'' ಎಂದಳು.

ಅವರು ಗಂಭೀರವಾಗಿ ''ನೀನು ಸಾಮಾನ್ಯ ಬಡಕುಟುಂಬದವಳು. ವಿಪರೀತ ಹಣದ ತೊಂದರೆ ನನ್ನಂತಹ ಶ್ರೀಮಂತ ನಿನ್ನನ್ನು ಸೊಸೆ ಮಾಡಿಕೊಳ್ಳಲು ಒಪ್ಪಿರುವಾಗ ನಾನು ಹೇಳಿದಂತೆ ಕೇಳಬೇಕು. ಇದಕ್ಕೆ ಒಪ್ಪಿಗೆ ಇದ್ದರೆ ವ್ಯವಹರಿಸೋಣ'' ಎಂದಾಗ ಅವಳು ಗಾಬರಿಯಾದಳು.

''ಈಗ ನಾವಿಬ್ಬರೂ ಸದಾಶಿವನಗರದಲ್ಲಿರುವ ನಮ್ಮ ಮನೆಗೆ ಹೋಗಿ ಬರೋಣ. ನನ್ನ ಮಗನನ್ನು ಒಂದು ಸಲ ನೋಡು. ಆಮೇಲೆ ಉಳಿದ ವಿಚಾರ ಹೇಳ್ತೀನಿ. ಬೇಕಾದರೆ ನಿನ್ನವರಿಗೆ ಕೊಡಲಿರುವ ಸಹಾಯ ಇನ್ನೂ ಜಾಸ್ತಿ ಮಾಡ್ತೀನಿ'' ಎಂದು ಹೇಳಿ ಎದ್ದು ಅಲ್ಲಿಂದ ಹೊರಟು ಬಾಗಿಲಿನ ಹತ್ತಿರ ಬಂದು ಹಿಂತಿರುಗಿ ''ಸೈಲೆಂಟ್ ಆಗಿ ನನ್ನ ಫಾಲೋ ಮಾಡಿಕೊಂಡು ಬಂದು ಕಾರಲ್ಲಿ ಕೂರು. ಇಲ್ಲಿ ವರ್ಕರ್ಸ್ ಇದ್ದಾರೆ. ಅವರಿಗೆ ಬೇರೆ ಯಾವ ರೀತಿಯ ಅನುಮಾನ ಬರಬಾರದು'' ಎಂದು ಹೇಳಿದಾಗ ಅವಳಲ್ಲಿ ಒಂದು ರೀತಿಯಲ್ಲಿ ಭಯ ಮಿಶ್ರಿತ ಕುತೂಹಲ ಉಂಟಾಯಿತು.

ಪ್ರಶ್ನೆಗಳು ಕಾಡುತ್ತಿದೆ.

ಎಲ್ಲವೂ ನಾನು ಅಂದುಕೊಂಡ ರೀತಿ ಇಲ್ಲ. ಇಲ್ಲಿ ಬೇರೆ ಏನೋ... ಬೇರೆ ಏನೋ ಇದೆ. ಅದು ತುಂಬಾ ಮುಖ್ಯ. ಅದೇನು ಅಂತ ತಿಳಿದ ಮೇಲೆ ನನ್ನ ನಿರ್ಧಾರ ತಿಳಿಸಬೇಕು.

●●●

ಭವ್ಯವಾದ ಬಂಗಲೆ!

ಅವಳು ಎಂ.ಡಿ. ಸಾಗರ್ ಬಾಟಿಯ ಅವರ ಜೊತೆ ಒಳಗೆ ಬಂದಾಗ ಮನೆಯವರೆಲ್ಲಾ ಇವಳ ಕಡೆ ನೋಡಿದರು.

ಆ ನೋಟದಲ್ಲಿ ಏನಿದೆ?

ಅನುಕಂಪ ಭಾವವಿದೆ.

ಸಾಗರ್ ಸೂಚನೆ ನೀಡಿದ ಕೂಡಲೇ ಅವರ ಪತ್ನಿ ಬಂದು ಅವಳನ್ನು ಡೈನಿಂಗ್ ಹಾಲ್‌ಗೆ ಕರೆದುಕೊಂಡು ಹೋಗಿ ಉಪಚರಿಸಿದರು.

ಬಾದಾಮಿ ಹಲ್ವ

ಬೊಂಡಾ ಸೂಪು

ವೆಜಿಟೇಬಲ್ ವಡೆ

ಸ್ಪೆಷಲ್ ಕಾಫಿ.

ಅವಳಿಗೆ ತಿನ್ನುವುದರ ಬಗ್ಗೆ ಆಸಕ್ತಿ ಇರಲಿಲ್ಲ. ಮುಂದೇನಾಗಲಿದೆ ಎಂಬುದು ಅವಳನ್ನು ಕಾಡಿಸುತ್ತಿದೆ.

ತಿಂದ ಶಾಸ್ತ್ರ ಮಾಡಿದಳು. ಅವಳನ್ನು ಮತ್ತೊಬ್ಬ ಹೆಂಗಸು ಲಿಫ್ಟ್ ಮೂಲಕ ಮೂರನೆಯ ಮಹಡಿಯಲ್ಲಿರುವ ರೂಮಿಗೆ ಕರೆತಂದಳು.

ಅವಳು ಒಳಗೆ ಬಂದಳು.

ಡೋರ್ ಕ್ಲೋಸ್ ಆಯಿತು.

ಸ್ಟಾರ್ ಹೋಟೆಲ್‌ನ ಎಲ್ಲಾ ಅನುಕೂಲ ಮತ್ತು ಐಷಾರಾಮಿ ವೈಭವ ಇರುವ, ಕಲಾತ್ಮಕವಾಗಿ ನಿರ್ಮಿಸಿರುವ ವಿಶಾಲವಾದ ಕೊಠಡಿ.

ಕಿಟಕಿಯ ಹತ್ತಿರ ನಿಂತಿದ್ದಾರೆ ಸಾಗರ್ ಬಾಟಿಯ. ಅವಳು ಇಲ್ಲಿ ಬೇರೆ ಯಾರಿದ್ದಾರೆ ಎಂಬ ಕುತೂಹಲದೊಂದಿಗೆ ನೋಡುತ್ತಿರುವಾಗ ಆ ರೂಮಿನೊಳಗಿರುವ ಮತ್ತೊಂದು ರೂಮಿನ ಬಾಗಿಲು 'ದಡಾಲ್' ಎಂಬ ಶಬ್ದದೊಂದಿಗೆ ತೆರೆದುಕೊಂಡಿತು.

ಒಬ್ಬ ಯುವಕ ವಿಲಕ್ಷಣ ರೀತಿಯಲ್ಲಿ ನಡೆಯುತ್ತಾ ಇವಳ ಹತ್ತಿರ ಬಂದನು.

ತಲೆ ಕೂದಲು ಕೆದರಿದೆ.

ದೊಗಲೆ ಉಡುಪು ಧರಿಸಿದ್ದಾನೆ.

ಅವನು ಸಾಗರ್ ಬಾಟಿಯ ಹತ್ತಿರ ಬಂದು, ಅವಳ ತೋಳನ್ನು ಹಿಡಿದು ಎಳೆದಾಡುತ್ತಾ ''ಡ್ಯಾಡಿ... ಡ್ಯಾಡಿ... ಇವಳು ಯಾರು? ನನ್ನ ಹೆಂಡತಿನಾ...?'' ಎಂದು ಕೇಳಿದನು.

ಅವಳು ಗಾಬರಿಯಾಗಿದ್ದಾಳೆ.

ಗೊಂದಲ ಕಾಡುತ್ತಿದೆ.

ಇವನನ್ನು ಎಲ್ಲಿಯೋ ನೋಡಿದ್ದೇನಲ್ಲ ಎಂದು ಕೊಂಡು ಮತ್ತೊಮ್ಮೆ ಪರೀಕ್ಷೆ ಮಾಡುವ ರೀತಿಯಲ್ಲಿ ನೋಡಿದಳು.

ತಟ್ಟನೆ ನೆನಪಾಯಿತು.

ಸಾಗರ್ ಬಾಟಿಯ ಅವರ ಮಗ ಅವನ ಫೋಟೋಗಳನ್ನು ಮೊಬೈಲ್‌ನಲ್ಲಿ ತೋರಿಸಿದ್ದರು. ಆಕರ್ಷಕ ರೂಪಿನ ಹೀರೋ ಅಪಿಯರೆನ್ಸ್ ಇರುವ ಯುವಕ ಈಗ ಯಾಕೆ ಹೀಗಿದ್ದಾನೆ?

☞14

13 ☞

ಅವನ ವರ್ತನೆ ವಿಲಕ್ಷಣವಾಗಿದೆ ಯಾಕೆ? ಸಾಗರ್ ಬಾಟಿಯ ಮಗನ ತಲೆ ಮತ್ತು ಬೆನ್ನು ಸವರುತ್ತಾ "ಹೌದು... ಇವಳು ನಿನ್ನ ಹೆಂಡತಿ ಆಗ್ತಾಳೆ" ಎಂದ ಕೂಡಲೇ ಅವನು ಇವಳ ಕಡೆ ನುಗ್ಗಿದನು ಮತ್ತು ಬಿಗಿಯಾಗಿ ತಬ್ಬಿಕೊಂಡಳು. ಮುಂದಿನ ಕ್ಷಣಗಳಲ್ಲಿ ಅವಳನ್ನು ಅಲಕ್ಕಾಗಿ ಎತ್ತಿ ಕುಣಿದಾಡಲಾರಂಭಿಸಿದನು.

ಅವಳು ಗಾಬರಿಯಾದಳು. ಎಲ್ಲಿ ಎಸೆದುಬಿಡುತ್ತಾನೋ ಎಂದು ಹೆದರಿದಳು.

ಅವನು ನಗುತ್ತಿದ್ದಾನೆ.

ಅವಳನ್ನು ಎತ್ತಿಕೊಂಡು ಕುಣಿಯುತ್ತಿದ್ದಾನೆ.

ಹುಚ್ಚು ಕುಣಿತ...!

ಸಾಗರ್ ಬಾಟಿಯ ಹತ್ತಿರ ಬಂದು ಅವನಿಂದ ಚಾಂದಿನಿಯನ್ನು ಬಿಡಿಸಿ ದೂರ ಕರೆತಂದರು. ಅವಳು ಭೀತಳಾಗಿ ನಡುಗುತ್ತಿದ್ದಾಳೆ.

ಸಾಗರ್ "ಏ... ನೀನು ರೂಮಿಗೆ ಹೋಗಿ ಆಟ ಆಡಿಕೊಂಡಿರು. ಇವಳ ಜೊತೆ ಮದುವೆ ಮಾಡಿಸುವಾಗ ನಿನ್ನ ಕರೆಯುತ್ತೇನೆ. ಈಗ ಹೋಗು" ಎಂದು ರೇಗಿದರು.

"ಡ್ಯಾಡಿ... ಈಗಲೇ ಮದುವೆ ಮಾಡಿಸು, ಮದುವೆಯಾದ್ಮೇಲೆ ಇವಳು ನನ್ನ ಜೊತೆ ಇರ್ತಾಳೆ. ನನ್ನ ರೂಮಲ್ಲಿ ನನ್ನ ಜೊತೆ ಮಲಗ್ತಾಳೆ ಅಲ್ವ."

ಚಾಂದಿನಿ ಕೆಂಪಾದಳು.

"ಹೌದು... ಹೌದು... ಈಗ ಹೋಗು."

ಅವನು ವಿಲಕ್ಷಣ ರೀತಿಯಲ್ಲಿ ನಗುತ್ತಾ ಅಲ್ಲಿಂದ ಹೊರಟನು.

ಈಗ ಅವರಿಬ್ಬರೇ ಇದ್ದಾರೆ.

ಸಾಗರ್ ಬಾಟಿಯ "ನನ್ನ ಮಗ ಒಬ್ಬಳನ್ನು ತುಂಬಾ ಪ್ರೀತಿ ಮಾಡಿದ್ದ. ಅವಳು ಮದುವೆ ಆಗಲು ಒಪ್ಪಿದ್ದಳು. ಆದರೆ ಬೇರೊಬ್ಬನ ಜೊತೆ ಹೊರಟು ಹೋಗಿ ಮದುವೆ ಮಾಡಿಕೊಂಡಳು."

ಬಾಟಿಯ ನಿಟ್ಟುಸಿರು ಬಿಟ್ಟನು.

"ಅವತ್ತಿಂದ ಮದುವೆಯ ಹುಚ್ಚು ಹಿಡಿದಿದೆ. ಈಗ ನಿನಗೆ ಅರ್ಥವಾಗಿರಬೇಕು."

ಅವಳು ಗಾಬರಿಯಾಗಿದ್ದಾಳೆ.

"ನೀನು ಇವನನ್ನು ಮದುವೆ ಮಾಡಿಕೊಂಡು ಪ್ರೀತಿ, ಕಾಳಜಿಯಿಂದ ಹೆಂಡತಿಯಂತೆ ಸೇವೆ ಮಾಡಿದರೆ ಅವನ ಹುಚ್ಚು ಕಡಿಮೆ ಆಗಿ ಎಲ್ಲರಂತೆ ಆಗುತ್ತಾನೆ. ಕೆಲವು ದಿನಗಳ ಕಾಲ ನೀನು ತಾಳ್ಮೆಯಿಂದ ಸಹಕರಿಸಬೇಕು."

ಅವಳು ಗಾಬರಿಯಿಂದ "ಅಂದರೆ... ಅಂದರೆ ನಿಮ್ಮ ಮಗನನ್ನು ಮದುವೆಯಾಗಿ ಸಂಸಾರ ಮಾಡಬೇಕೆ?"

"ಅದಕ್ಕೆ ತಾನೇ ನಿನಗೆ ಇಪ್ಪತ್ತೈದು ಲಕ್ಷ ಮತ್ತು ನಿನ್ನವರಿಗೆ ಸ್ವಂತ ಮನೆ ಮತ್ತು ತಿಂಗಳಿಗೆ ಇಪ್ಪತ್ತೈದು ಸಾವಿರ ಸಂಸಾರ ನಿರ್ವಹಣೆ ಕೊಡ್ತೀನಿ ಅಂತ ಹೇಳಿರೋದು."

ಅವಳು ಗಾಬರಿ, ಉದ್ವೇಗ, ಆತುರದಿಂದ "ಇಲ್ಲ... ಇಲ್ಲ... ಇದು ನನ್ನಿಂದ ಆಗೋಲ್ಲ. ಇವನನ್ನು ಮದುವೆ ಮಾಡಿಕೊಂಡು ಸಂಸಾರ ಮಾಡಿದರೆ ನನಗೆ ಹುಚ್ಚು ಹಿಡಿಯುತ್ತೆ. ಕ್ಷಮಿಸಿ... ಇದು ನನ್ನಿಂದ ಆಗೋಲ್ಲ" ಎಂದು ಹೊರಟಳು.

ಅವನು ಗಡುಸಾಗಿ "ನಿಲ್ಲು... ನಿಲ್ಲು ಚಾಂದಿನಿ... ನೀನು ಒಪ್ಪಲೇಬೇಕು. ಇಲ್ಲದಿದ್ದರೆ..." ಎಂದನು.

"ಇಲ್ಲದಿದ್ದರೆ..." ಎಂದು ತಡವರಿಸುತ್ತಾ ಭಯ ಮತ್ತು ಗಾಬರಿಯಿಂದ ನೋಡಿದಳು.

"ನಿನ್ನ ತಂಗಿಯರ ಮೇಲೆ ಆ್ಯಸಿಡ್ ಎರಚುತ್ತಾರೆ ಮತ್ತು ನಿನ್ನ ತಮ್ಮಂದಿರಿಗೆ ಮಾಯಲೋಕದ ದಾರಿ ತೋರಿಸುತ್ತಾರೆ. ನಿನ್ನ ಮನೆಗೆ ಬೆಂಕಿ ಬೀಳುತ್ತೆ. ಆದರೆ ನಿನಗೇನೂ ಆಗೋಲ್ಲ. ಯಾಕೆ ಅಂದರೆ ನನ್ನ ಮಗನಿಗೆ ನೀನು ಹೆಂಡತಿ ಆಗಬೇಕು" ಎಂದು ಹೇಳಿ ಅವಳ ಹತ್ತಿರ ಬಂದು ಭುಜದ ಮೇಲೆ ಕೈ ಹಾಕಿ ಅದುಮುತ್ತಾ "ಮದುವೆಯಾದರೆ ನನ್ನ ಮಗನಿಗೆ ಹುಚ್ಚು ಬಿಡುತ್ತದೆ. ಆಮೇಲೆ ನೀನು ಎಲ್ಲರಂತೆ ಸುಖ, ಸಂತೋಷದಿಂದ ಸಂಸಾರ ಮಾಡಿಕೊಂಡಿರಬಹುದು. ಶ್ರೀಮಂತಿಕೆಯ ಈ ಅರಮನೆ ಬಂಗಲೆಯಲ್ಲಿ ಮಹಾರಾಣಿಯ ರೀತಿ ಬದುಕಬಹುದು. ಸ್ವಲ್ಪ ದಿವಸ ನನ್ನ ಮಗನ ಮಾನಸಿಕ ರೋಗ ಸರಿಪಡಿಸಲು ನೀನು ಹೆಂಡತಿಯಾಗಿ ಪ್ರೀತಿ, ಮಮಕಾರ ಮತ್ತು ಕಾಳಜಿಯಿಂದ ಅವನನ್ನು ಉಪಚರಿಸಬೇಕು. ಇದನ್ನು ನೀನು ಮಾಡಲೇಬೇಕು. ನೀನು ಮನಪೂರ್ವಕವಾಗಿ ಒಪ್ಪಿಕೊಂಡು ಮದುವೆ ಮಾಡಿಕೊಂಡರೆ ನಿನ್ನವರು ಶ್ರೀಮಂತಿಕೆಯ ವೈಭವದಲ್ಲಿ ಬದುಕುತ್ತಾರೆ" ಎಂದು ಹೇಳಿ ಅವಳಿಗೆ ಎದುರಾಗಿ ನಿಂತರು.

ಅವಳು ಅವರ ಮುಖ ನೋಡಿದಳು. ಆ ಶ್ರೀಮಂತನ ಮುಖದಲ್ಲಿ ಶೀತಲ ಕ್ರೌರ್ಯ ಕಂಡು ಬರುತ್ತಿದೆ.

ಆ ಕ್ಷಣಗಳಲ್ಲಿ ತೀರ್ಮಾನ ಮಾಡಿದಳು.

"ನಾನು ನಿಮ್ಮ ಮಗನನ್ನು ಮದುವೆ ಆಗುತ್ತೇನೆ."

●●●

ಮದುವೆ ಧರ್ಮಸ್ಥಳದ ಪುಣ್ಯಕ್ಷೇತ್ರದಲ್ಲಿ ತುಂಬಾ ಸರಳವಾಗಿ ನಡೆಯಿತು. ಸಂಬಂಧಿಕರಿಗೆ ಆಗಲಿ, ಶ್ರೀಮಂತ ಗಣ್ಯರಿಗೆ ಆಗಲಿ ಆಹ್ವಾನ ಇರಲಿಲ್ಲ.

ಚಾಂದಿನಿಯ ತಂದೆ-ತಾಯಿ, ತಂಗಿಯರು ಮತ್ತು ತಮ್ಮಂದಿರ ವಿನಹ ಬೇರೆ ಯಾರಿಗೂ ಅವಕಾಶ ಇರಲಿಲ್ಲ.

ಮದುವೆಗೆ ಮೊದಲೇ ಚಾಂದಿನಿಗೆ ಮುವತ್ತು ಲಕ್ಷ ರೂಪಾಯಿ ಹಣ ಮತ್ತು ಮನೆಯವರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿದ್ದರು. ಆದರೂ ಹೆತ್ತವರಿಗೆ ಸಂಕಟ ಆಗಿತ್ತು. ಅಪ್ಸರೆ ರೂಪಿನ ಚೆಲುವೆ ಮಗಳು ಒಬ್ಬ ಹುಚ್ಚನನ್ನು ತಮಗಾಗಿ ಮದುವೆ ಆಗುತ್ತಿದ್ದಾಳೆ ಎಂದು ಗೋಳಾಡಿದ್ದರು. ಆದರೆ ತಂಗಿಯರು ಮತ್ತು ತಮ್ಮಂದಿರು ಮಾತ್ರ ಒಳಗೊಳಗೆ ಖುಷಿಪಟ್ಟಿದ್ದರು.

ಬಡತನ ದೂರಾಗಿದೆ.

ಇದಕ್ಕಿಂತ ಬೇರೇನು ಬೇಕು?

ಮದುವೆ ಮಂಟಪದಲ್ಲಿ ಅವನ ಹುಚ್ಚಾಟದಲ್ಲೇ ಚಾಂದಿನಿಯನ್ನು ತಬ್ಬಿಕೊಂಡು "ನೀನು... ನೀನು ನನ್ನ... ನನ್ನ ಹೆಂಡತಿ" ಎಂದು ಕುಣಿದಾಡಿದ್ದನು.

ಮದುವೆ ಶಾಸ್ತ್ರ ಮುಗಿಯಿತು.

ಅವಳಿಗೆ ಸಾಗರ್ ಬಾಟಿಯ ಎಚ್ಚರಿಕೆ ನೀಡಿದ್ದರು. ಹೆಂಡತಿಯ ರೀತಿ ಅವನ ಜೊತೆ ಪ್ರೇಮ ಶೃಂಗಾರ ಕಲಾಪ ನಡೆಸಬೇಕು. ಅವನು ನಿನ್ನವನಾಗಿ ಸುಖ ಪಡಬೇಕು. ಪ್ರೀತಿ, ಮಮಕಾರ ಮತ್ತು ಕಾಳಜಿಯಿಂದ ನೋಡಿಕೊಳ್ಳಬೇಕು" ಎಂದು ಎಚ್ಚರಿಕೆ ಮಾತುಗಳನ್ನು ಹೇಳಿ, ಮೊದಲೇ ಸಿದ್ಧಪಡಿಸಿದ್ದ ಪ್ರಸ್ಥದ ಕೊಠಡಿಗೆ ಕಳುಹಿಸಿದರು.

ಹೂವಿನ ಅಲಂಕಾರ ಮಾಡಲಾಗಿದೆ.

ಹುಚ್ಚ ಮಲಗಿದ್ದಾನೆ.

ಗಾಢವಾಗಿ ನಿದ್ದೆ ಬಂದಿದೆ.

ಅವಳಿಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಆಗ ಆ ಪ್ರಸ್ಥದ ಕೊಠಡಿಯ ಮೂಲೆಯಿಂದ ಕೇಳಿ ಬಂದಿತು ಸಾಗರ್ ಬಾಟಿಯ ಅವರ ಗಡುಸಾದ ಧ್ವನಿ- ಏ ಚಾಂದಿನಿ... ನನ್ನ ಮಗ ಮಲಗಿದ್ದಾನೆ. ಅವನು ರಾತ್ರಿ ಒಂಭತ್ತು ಗಂಟೆಗೆಲ್ಲಾ ಮಲಗುತ್ತಾನೆ. ಹಾಗಂತ ನೀನು ಮಲಗಬೇಡ. ಹೆಂಡತಿಯಾಗಿ ನೀನು ಅವನನ್ನು ಪ್ರಚೋದನೆ ಮಾಡಬೇಕು ಎಂದನು.

ಅವಳ ಮುಖ ಕೆಂಪಾಯಿತು.

ನನಗೆ ಮಾವ ಆಗಿರುವ, ಶ್ರೀಮಂತಿಕೆಯ ಮಹಾ ಅಹಂಕಾರದ ಸರ್ವಾಧಿಕಾರಿ ಸಾಗರ್ ಬಾಟಿಯ ವೀಡಿಯೋ ಕ್ಯಾಮರಾಗಳನ್ನು ಫಿಕ್ಸ್ ಮಾಡಿದ್ದಾನ?

ಛೇ... ಛೇ ಇರಲಾರದು. ಅವನು ಎಷ್ಟೇ ಕೆಟ್ಟವನಾಗಿದ್ದರೂ ಸಹ ಇಂತಹ ಅಸಹ್ಯಕರ ಕೆಲಸ ಮಾಡಲಾರ ಎಂದುಕೊಂಡು ಹತ್ತಿರ ಸರಿದಳು.

ಅವನ ಕೈ ಹಿಡಿದು ಎಳೆದು ತನ್ನ ಮುಖದ ತುಂಬಾ ಸವರಿಕೊಂಡಳು.

ತುಟಿಗಳಿಂದ ಮುದ್ದಾಡಿದಳು.

ಅವನ ದಪ್ಪ ಬೆರಳನ್ನು ಅವನಿಗೆ ಹಿತವಾಗುವ ರೀತಿ ಕಚ್ಚುತ್ತಾ ನಾಲಿಗೆಯ ಸ್ಪರ್ಶ ಮಾಡಿದಳು.

ಅವನ ಎದೆ ಸವರಿದಳು.

ಅವನನ್ನು ತಬ್ಬಿಕೊಂಡು ಎದೆಗೆ ತನ್ನ ಎದೆ ಸೌಂದರ್ಯದ ಉಬ್ಬುಗಳಿಂದ ತೀಡುತ್ತಾ ಮುದ್ದಾಡಿದಳು.

ಅವನು ಎಚ್ಚರಗೊಂಡನು.

ಪಿಳಿಪಿಳಿ ಕಣ್ಣು ಬಿಡುತ್ತಿದ್ದಾನೆ.

ಅವಳ ಆಲಿಂಗನ, ಸ್ಪರ್ಶ ಮತ್ತು ಚುಂಬನದಿಂದ ಅವಳು ಉದ್ರೇಕಗೊಂಡಿದ್ದಾಳೆ. ಎಷ್ಟೇ ಆಗಲಿ ಪ್ರಾಯದ ಯುವಕ ಅಲ್ಲವೆ? ಅವಳು ಅವನ ಒರಟು ಕೆನ್ನೆಗೆ ಮುತ್ತು ಕೊಟ್ಟಳು. ತುಟಿಗಳ ಚುಂಬನ ಮಾಡುತ್ತಾ ಬಲಗೈನಿಂದ ಎದೆ, ಹೊಟ್ಟೆ ಸವರುತ್ತಾ, ಶೃಂಗಾರದಾಟ ಆಡಲು ಕೈ ಜಾರಿಸಿದಳು.

ಕೆರಳಿ ಬಿಟ್ಟನು ಯುವಕ!

"ನೀನು... ನೀನು ಯಾರು?

"ನಿನ್ನ ಹೆಂಡತಿ..."

ಅವನು ವಿಲಕ್ಷಣವಾಗಿ ನಗುತ್ತಾ ಅವಳನ್ನು ಬಿಗಿಯಾಗಿ ತಬ್ಬಿಕೊಂಡು ಮುದ್ದಾಡಿದನು ಮತ್ತು ಅವಳನ್ನು ಆವರಿಸಿಕೊಳ್ಳಲಾರಂಭಿಸಿದನು. ಚಾಂದಿನಿ ಹಂತ ಹಂತವಾಗಿ ವಸ್ತ್ರಗಳನ್ನು ಸಡಿಲಿಸಿದಳು.

ಅವನು ವಿಜೃಂಭಿಸಿದನು. ಅವಳಿಗೆ ಇದು ಮೊದಲ ಸುಖದ ಅನುಭವ.

ಪೂರ್ಣ ತೃಪ್ತಳಾಗಿದ್ದಾಳೆ.

ಗಂಡ ಎಂಬ ಪ್ರೀತಿ, ಅಭಿಮಾನ ಮೂಡಿದೆ. ಹಾಗಾಗಿ ಅವನನ್ನು ಪ್ರೀತಿ-ಕಾಳಜಿಯಿಂದ ನೋಡಿಕೊಳ್ಳಲಾರಂಭಿಸಿದಳು. ಅವನು ಬಯಸಿದಾಗಲೆಲ್ಲಾ ರತಿಯಾಗಿ ಸಹಕರಿಸಿದಳು.

ದಿನಗಳು ಉರುಳುತ್ತಿವೆ.

ಹುಚ್ಚನ ಮಾನಸಿಕ ಸ್ಥಿತಿ ನಿಯಂತ್ರಣಕ್ಕೆ ಬರುತ್ತಿದೆ. ಅವನು ಬದಲಾಗುತ್ತಿದ್ದಾನೆ.

ಮತ್ತೊಂದು ತಿಂಗಳು ಕಳೆಯಿತು.

ಅವನು ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯವಂತನಾಗಿದ್ದಾನೆ. ತಂದೆಯ ಜೊತೆ ಆಫೀಸ್‌ಗೆ ಹೋಗಿ ವ್ಯವಹಾರಗಳ ಕಡೆ ಗಮನ ನೀಡುವಷ್ಟು ಬದಲಾಗಿದ್ದಾನೆ.

ಆದರೆ ವಿಷಾದತೆ ಏನು?

ಅವನು ಬದಲಾಗುತ್ತಿದ್ದಾನೆ. ಹೆಂಡತಿಯಾಗಿ, ಪ್ರೇಯಸಿಯಂತೆ, ಶೃಂಗಾರ ದೇವತೆಯಂತೆ, ಮಮಕಾರ ಮತ್ತು ಕಾಳಜಿಯ ಸೇವಕಿಯಂತೆ ಇವನ ಸೇವೆ ಮಾಡಿದ್ದಳು.

ಇತ್ತೀಚಿಗಿನ ದಿನಗಳಲ್ಲಿ ಅವಳ ಬಗ್ಗೆ ಆಸಕ್ತಿ ಕಡಿಮೆಯಾಗಿದೆ. ಆರೋಗ್ಯ ಸುಧಾರಿಸಿ ಸಿನಿಮಾ ಹೀರೋ ರೀತಿ ಆಕರ್ಷಕವಾಗಿರುವ ಪತಿಯನ್ನು ಕಂಡು ಅವಳಲ್ಲಿ ಪ್ರಾಯದ ಬಯಕೆ ಮೂಡುತ್ತಿದೆ. ಅವಳು ರಾತ್ರಿ ಅವನನ್ನು ತಬ್ಬಿಕೊಂಡು ಪ್ರಚೋದಿಸಿದಾಗ ರೇಗುತ್ತಾ ದೂರ ತಳ್ಳಿದನು. ಅವಳನ್ನು ಎಳೆದು ಅಲ್ಲಿದ್ದ ಸೋಫಾದ ಮೇಲೆ ತಳ್ಳಿದನು.

"ನನ್ನ ಮನಸ್ಸು ಸರಿ ಇಲ್ಲದಿರುವಾಗ ನನ್ನಪ್ಪ ಮಾಡಿದ ಮದುವೆಗೆ ಪ್ರಾಮುಖ್ಯತೆ ಕೊಡಲಾರೆ."

ಅವಳು ಬೆಚ್ಚಿಬಿದ್ದಳು.

"ನಿನ್ನನ್ನು ಹೆಂಡತಿ ಅಂತ ಒಪ್ಪಿಕೊಳ್ಳಲಾರೆ."

"ನಿನ್ನ ಜೊತೆ ಸಂಸಾರ ಮಾಡಲಾರೆ."

ಆ ರಾತ್ರಿ ಕಳೆಯಿತು.

ಸಾಗರ್ ಬಾಟಿಯ ಬೆದರಿಕೆ ಹಾಕಿದರು "ನೀನಾಗಿಯೇ ಡೈವೋರ್ಸ್ ಅಪ್ಲೈ ಮಾಡಿ ದೂರಾಗಬೇಕು. ಇಲ್ಲದಿದ್ದರೆ ನೀನು ನಿನ್ನ ಮನೆಯವರೆಲ್ಲಾ ನರಕಯಾತನೆ ಅನುಭವಿಸುತ್ತಾ ಸಾಯುತ್ತೀರ."

ಅದು ನಿಜವಾಯಿತೆ?

ರೌಡಿಗಳು ಅವಳ ತಂದೆ-ತಾಯಿ ಇದ್ದ ಮನೆಯ ಹತ್ತಿರ ತಿರುಗುತ್ತಿದ್ದನು.

ತನ್ನವರನ್ನು ಕಾಪಾಡಲು ಡೈವೋರ್ಸ್ ನೀಡಿ ದೂರಾದಳು.

ಆ ಹುಚ್ಚ ಆಕರ್ಷಕ ರೂಪಿನ ಸಿನಿಮಾ ನಟಿಯನ್ನು ಮದುವೆ ಆಗಿದ್ದಾನೆ.

ದುರಂತ ಏನು?

ಆ ಸಿನಿಮಾ ನಟಿಯ ಹತ್ತಾರು ಮಂದಿ ಗಂಡಸರ ಜೊತೆ ಸೆಕ್ಸ್ ಲಿಂಕ್ ಅನ್ನು ಮದುವೆಯಾದ ಮೇಲೆ ಸಹ ಮುಂದುವರೆಸಿದ್ದಳು.

ರಹಸ್ಯ ಬಹಿರಂಗವಾಗಿದೆ.

ಅವನಿಗೆ ಮಾನಸಿಕ ಆಘಾತವಾಗಿ ಪುನಹ ಹುಚ್ಚ ಆಗಿದ್ದಾನೆ. ☯

# ಮದ್ವೆಯಾದ ಹೆಂಡ್ತಿಯನ್ನೇ ಕೊಂದ!

7 ☞

ಎನ್ನುವ ನೇಮಪದಲ್ಲಿ, ಪತಿ ಬೀರಪ್ಪ ತನ್ನ ಪತ್ನಿ ಸಾಕ್ಷಿತಾರನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ.

ಏಪ್ರಿಲ್ 29ರಂದು ರಾತ್ರಿ 2 ಗಂಟೆಗೆ ಇಬ್ಬರ ಮಧ್ಯೆ ಜಗಳ ಶುರುವಾಗಿದೆ. ಗಲಾಟೆ ತಾರಕಕ್ಕೇರಿ ಪತಿ ತನ್ನ ಪತ್ನಿಯ ಎದೆ ಮೇಲೆ ಕೂತು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಮೃತಳ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಕೊಲೆ ಮಾಡಿದ ಬೀರಪ್ಪನಿಗೆ ಗಲ್ಲು ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ಇನ್ನು ಸ್ಥಳಕ್ಕೆ ಮುಧೋಳ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿ ಬೀರಪ್ಪನನ್ನ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ವಿಚಾರಣೆ ವೇಳೆ ಪೊಲೀಸರಿಗೆ ಬೀರಪ್ಪನಿಗೆ ಅಕ್ರಮ ಸಂಬಂಧ ಇತ್ತು ಎನ್ನುವ ಮಾಹಿತಿ ಸಿಕ್ಕಿದೆ. ಅದಕ್ಕಾಗೇ ಪಲ್ಯ, ಸಾಂಬಾರ್ ಸರಿ ಮಾಡುವುದಿಲ್ಲ ಎಂಬ ನೆಪದಲ್ಲಿ ಪ್ರೀತಿಸಿ ಮದುವೆಯಾದ ಪತ್ನಿಯನ್ನೇ ಕೊಲೆ ಮಾಡಿದ್ನಾ ಎಂಬ ಅನುಮಾನ ವ್ಯಕ್ತವಾಗಿದೆ.

ಈ ಬಗ್ಗೆ ಬಾಗಲಕೋಟೆ ಎಸ್ಪಿ ಅಮರನಾಥ ರೆಡ್ಡಿ ಮಾಹಿತಿ ನೀಡಿದ್ದು ಪತಿ-ಪತ್ನಿ ಒಂದೇ ಸಮುದಾಯದವರು. ಅಪ್ರಾಪ್ತ ವಯಸ್ಸಲ್ಲೇ ಲವ್ ಮಾಡಿದ್ದರು. ಒಂದೇ ಸಮುದಾಯ ಆದ ಕಾರಣ ಎಲ್ಲ ಹಿರಿಯರು ಸೇರಿ ಮದುವೆ ಮಾಡಿದ್ದರು. ಕೇವಲ ಅಡುಗೆ ಮಾಡಲು ಬಾರದ ಹಿನ್ನೆಲೆ ಕೊಲೆ ಮಾಡಿಲ್ಲ ಎಂಬ ಸಂಶಯವಿದೆ. ಬೀರಪ್ಪನಿಗೆ ಬೇರೆ ಮಹಿಳೆಯರ ಜೊತೆ ಅಕ್ರಮ ಸಂಬಂಧ ಇತ್ತು ಎಂಬ ಮಾಹಿತಿ ಇದೆ. ಆತನ ಮೊಬೈಲ್‌ನಲ್ಲಿ ಬೇರೆ ಮಹಿಳೆಯರ ಜೊತೆಗಿರುವ ಫೋಟೋಗಳು ಸಿಕ್ಕಿವೆ. ಇದೇ ಕಾರಣಕ್ಕೆ ಇಬ್ಬರ ಮಧ್ಯೆ ಜಗಳ ನಡೆಯುತ್ತಿತ್ತು ಎಂಬ ಸಂಶಯವಿದೆ. ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸುತ್ತಿದ್ದೇವೆ. ಕೊಲೆ ಹಿಂದೆ ಈತನೊಬ್ಬನದ್ದೇ ಪಾತ್ರ ಇದೆಯಾ ಅಥವಾ ಬೇರೆಯವರ ಕೈವಾಡ ಇದೆಯಾ ಎಂದು ತನಿಖೆ ನಡೆಸುತ್ತಿದ್ದೇವೆ ಎಂದು ಹೇಳಿದರು.


ಎಸ್ಪಿ ಅಮರನಾಥ್ ರೆಡ್ಡಿ

ಒಟ್ಟಿನಲ್ಲಿ ಪ್ರೀತಿಸಿದ ಹುಡುಗನ ಜೊತೆಗೆ ಬದುಕಬೇಕು ಎನ್ನುವ ಆಸೆಯಿಂದ ಮದುವೆ ಮಾಡಿಕೊಂಡ ಯುವತಿ ತನ್ನ ಪತಿಯಿಂದಲೇ ಕೊಲೆಯಾಗಿದ್ದಾಳೆ. ಇದು ಅಡುಗೆಗಾಗಿ ನಡೆದ ಕೊಲೆಯೋ ಅಥವಾ ಪತಿಯ ಅನೈತಿಕ ಸಂಬಂಧಕ್ಕೆ ಪತ್ನಿ ಬಲಿಯಾಗಿದ್ದಾಳೋ ಎನ್ನೋದು ಪೊಲೀಸರ ತನಿಖೆಯಿಂದ ಹೊರಬರಬೇಕಿದೆ. ☯

# ಅಣ್ಣಾವ್ರ ಮುಂದೆ ನಾಲ್ಕು ಅಡಿ ಎದ್ದು ನಿಂತಿದ್ದ ಕಾಳಿಂಗ ಸರ್ಪ; ಈ ಘಟನೆ ನಡೆದಿದ್ದು ಯಾವಾಗ?

ಕನ್ನಡ ಚಿತ್ರರಂಗದ ವರನಟನ ಬಗ್ಗೆ ಸಿನಿಮಾ ಮಂದಿಗೆ ಒಂದಲ್ಲ ಒಂದು ಅನುಭವಗಳು ಆಗಿರುತ್ತೆ. ರಾಜ್‌ಕುಮಾರ್ ಬಗ್ಗೆ ಒಬ್ಬೊಬ್ಬರಿಗೂ ಒಂದೊಂದು ಅನುಭವ. ಅಣ್ಣಾವ್ರು ಅಗಲಿ 19 ವರ್ಷಗಳಾಗಿದ್ದರೂ, ಅವರೊಂದಿಗೆ ಕಳೆದ ದಿನಗಳನ್ನು ಇನ್ನೂ ನೆನಪಿಸಿಕೊಳ್ಳುತ್ತಲೇ ಇದ್ದಾರೆ. ಅಂತಹವರಲ್ಲಿ ಸ್ಯಾಂಡಲ್‌ವುಡ್‌ನ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಕೂಡ ಒಬ್ಬರು.



ಶಂಕರ್‌ನಾಗ್ ನಿರ್ದೇಶಿಸಿದ 'ಒಂದು ಮುತ್ತಿನ ಕಥೆ' ಸಿನಿಮಾದ ಶೂಟಿಂಗ್‌ಗಾಗಿ ಯಾಣಗೆ ಪ್ರಯಾಣ ಬೆಳೆಸಿದ್ದರು. ಆ ವೇಳೆ ಅಲ್ಲಿಗೆ ಹೋಗುವುದಕ್ಕೆ ಸಾಕಷ್ಟು ದೂರ ನಡೆಯಬೇಕಿತ್ತು. ಅಣ್ಣಾವ್ರು, ಮುಖ್ಯಮಂತ್ರಿ ಚಂದ್ರು ಹಾಗೂ ಗನ್ ಮ್ಯಾನ್ ಜೊತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಬಿಸಿಲು ಹೆಚ್ಚಿದ್ದಿದ್ದರಿಂದ ಅಣ್ಣಾವ್ರು ಅಲ್ಲೇ ಹರಿಯುತ್ತಿದ್ದ ಝರಿಯಲ್ಲಿ ಕೂತು, ನೀರು ಕುಡಿದು ಮುಂದಕ್ಕೆ ಹೋಗೋಣ ಎಂದಿದ್ದರು. ಆ ವೇಳೆ ಆದ ಎರಡು ಅನುಭವಗಳನ್ನು ಮುಖ್ಯಮಂತ್ರಿ ಚಂದ್ರು ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಸ್ವಾರಸ್ಯಕರವಾಗಿ ಹೇಳಿಕೊಂಡಿದ್ದಾರೆ.

ಯಾಣಗೆ ಕಾಡಿನಲ್ಲಿ 8ರಿಂದ 10 ಕಿ.ಮೀ ನಡೆದುಕೊಂಡು ಹೋಗಬೇಕಿತ್ತು. ಒಂದು ಮುತ್ತಿನ ಕಥೆ ಶೂಟಿಂಗ್‌ಗೆ ಶಂಕರ್‌ನಾಗ್ ಮುಂಚೆ ಹೋಗಿದ್ದ, ನಾನು ರಾಜ್‌ಕುಮಾರ್, ಕೃಷ್ಣೇಗೌಡರು, ರಮೇಶ್ ಭಟ್, ಸುಂದರ್‌ರಾಜ್ ಎಲ್ಲರೂ ನಡೆದುಕೊಂಡು ಹೋಗುತ್ತಿದ್ವಿ, ರಾಜ್‌ಕುಮಾರ್ ಅವರಿಗೆ ಬಿಸಿಲು ತಡೆದುಕೊಳ್ಳಲು ಆಗಲಿಲ್ಲ, ಆಗ ಚಂದ್ರು ಅವರೇ ಇಲ್ಲಿ ಝರಿ ಹರಿಯುತ್ತಿದೆ. ನೀರು ನೋಡುವುದಕ್ಕೆ ಮುದ್ದಾಗಿತ್ತು. ಎರಡು ನಿಮಿಷ ಇಲ್ಲಿ ಕೂತಿದ್ದು, ಶೂಟಿಂಗ್ ತಡವಾದರೆ ಏನಂತೆ, ನಮ್ಮದೇ ಪಿಚ್ಚರ್, ಇಲ್ಲಿ ಕೂತಿದ್ದು ಮುಖಕ್ಕೆ ನೀರು ಹಾಕೊಂಡು ತಣ್ಣಗೆ ಮಾಡಿಕೊಂಡು ಹೋಗೋಣವೇ ಅಂತ ಹೇಳಿದ್ದರು. ಎಂದು ಆ ದಿನದ ಘಟನೆಯನ್ನು ನೆನಪಿಸಿಕೊಂಡಿದ್ದಾರೆ.

ಮಂಡಿಯುದ್ದ ನೀರು ಇರುವ ಜಾಗ. ಅವರು ಕೂತುಕೊಂಡು ಅಣ್ಣಾವ್ರು ಬಟ್ಟೆ ಬಿಚ್ಚಿ ಕೂತುಬಿಟ್ಟರು. ಬಿಸಿಲಿನ ಬೇಗೆಗೆ ನೀರು ಚಿಮುಕಿಸಿಕೊಂಡರು. ಐಸ್ ಕೋಲ್ಡ್ ಇದ್ದಂಗೆ ನೀರು ಇತ್ತು. ಆ ನೀರು ಕುಡಿಯುವ ಹೊತ್ತಿಗೆ, ಒಂಬತ್ತು ವರ್ಷದ ಹುಡುಗ ಓಡಿ ಅಲ್ಲಿಗೆ ಬಂದಿದ್ದ. ಅವನಿಗೆ ರಾಜ್‌ಕುಮಾರ್ ಯಾರು ಅಂತ ಗೊತ್ತಿರಲಿಲ್ಲ, ಚಂದ್ರು ಯಾರು ಅಂತ ಗೊತ್ತಿರಲಿಲ್ಲ, ಸಿನಿಮಾ ಏನು ಅಂತ ಗೊತ್ತಿರಲಿಲ್ಲ, ಕಾಡಿನ ಹುಡುಗ ಅವನು. ನೋಡಿ ಗುರುತಿಸುವ ಸ್ಥಿತಿಯಲ್ಲಿ ಇರಲಿಲ್ಲ.

ಎದ್ದೇಳಿ ಬೇಗ ಹೊರಟು ಬಿಡಿ ಇಲ್ಲಿಂದ ಅಂತ ಅಂದ. ರಾಜ್‌ಕುಮಾರ್ ಯಾಕೆ ಅಂತ ಕೇಳಿದರು. ಇನ್ನು ಸ್ವಲ್ಪ ಹೊತ್ತಿಗೆ ಹುಲಿ ಬಂದು ನೀರು ಕುಡಿದುಕೊಂಡು ಹೋಗುತ್ತೆ. ಇಲ್ಲಿಂದ ಹೋಗಿ ಅಂದ. ಹೇಗೆ ಎದ್ದಿದ್ದೀವಿ ಓಡಿದ್ದೇವೆ ಅನ್ನೋದೆ ಗೊತ್ತಿಲ್ಲ. ಆ ಟೈಮ್‌ನಲ್ಲೂ ಎಷ್ಟು ತಮಾಷೆ ಮಾಡಿದರು ಅಂದರೆ, ನಾನು ಹೀರೋ, ನೀವು ವಿಲನ್. ಗನ್ ಮ್ಯಾನ್ ಪಕ್ಕದಲ್ಲಿ ಇದ್ದಾನೆ. ಇನ್ನಿಬ್ಬರು ವಿಲನ್‌ಗಳು ನಾವ್ಯಾರು ಅಲ್ಲ ಈಗ. ಆ ಒಂಬತ್ತು ವರ್ಷದ ಹುಡುಗನೇ ಇಲ್ಲಿ ಹೀರೋ. ಹುಲಿಗೆ ಹೆದರದೆ ಇಲ್ಲಿ ನಿಂತು ಹೇಳುತ್ತಿದ್ದಾನೆ ನೋಡಿ ಎಂದು ಅಣ್ಣಾವ್ರು ತಮಾಷೆ ಮಾಡಿದ್ದರು.




ಆನಂತರ ಆ ಹುಡುಗ ಹುಲಿ ಎಲ್ಲೋ ಬೇಟೆ ಆಡಿರುತ್ತೆ. ಬೇಟೆ ಆಡಿದ ಮೇಲೆ ನೀರು ಕುಡಿಯಬೇಕಿರುತ್ತೆ. ಅದಕ್ಕೆ ಇಲ್ಲಿಗೆ ಬರುತ್ತೆ. ಅದು ಬರುವುದಕ್ಕೂ ಮುನ್ನ ದೊಡ್ಡದಾಗಿ ಘರ್ಜನೆ ಮಾಡುತ್ತೆ. ಒಮ್ಮೆ ಬಂದು ನೀರು ಕುಡಿದ ಮೇಲೆ ಶಾಂತವಾಗುತ್ತೆ. ನಾವು ಏನೂ ಮಾಡದೆ ಸುಮ್ಮನೆ ನಿಂತಿದ್ದರೆ, ಅದು ಏನು ಮಾಡುವುದಿಲ್ಲ ಅದರ ಪಾಡಿಗೆ ಅದು ಹೋಗುತ್ತೆ ಎಂದು ಆ ಹುಡುಗ ಹೇಳಿದ್ದನಂತೆ. ಆಮೇಲೆ ಎಲ್ಲರೂ ಓಡುವುದಕ್ಕೆ ಶುರು ಮಾಡಿದ್ದರಂತೆ. ಆಗ ಆ ಹುಡುಗನೇ ತಾನೂ ಜೊತೆಗೆ ಬರುವುದಾಗಿ ಹೇಳಿದ್ದ ಎಂದು ಮುಖ್ಯಮಂತ್ರಿ ಚಂದ್ರು ನೆನಪಿಸಿಕೊಳ್ಳುತ್ತಾರೆ.



ಗನ್‌ಮ್ಯಾನ್ ಇದ್ದಾನೆ ಅವನು ನಡುಗುತ್ತಿದ್ದಾರೆ. ನೀವು ನಡುಗುತ್ತಿದ್ದೀರ. ನಾನು ನಡುಗುತ್ತಿದ್ದೇನೆ. ನೋಡಿ ಅವನು ಎಷ್ಟು ಧೈರ್ಯವಾಗಿ ಹುಲಿ ಬಂದು ಕುಡಿದುಕೊಂಡು ಹೋಯ್ತು ಅಂತ ಹೇಳುತ್ತಿದ್ದಾನೆ. ಸತ್ಯ ನೋಡಿ. ಪ್ರಪಂಚ ಹೇಗಿದೆ ಅಂತ ಮಾತಾಡಿಕೊಂಡು ಕರೆದುಕೊಂಡು ಹೋಗುತ್ತಿದ್ದರು. ಹುಲಿಯ ಘರ್ಜನೆ ಕೇಳಿತ್ತು. ಅದೇ ವೇಳೆ ಉಶ್ ಅಂತ ಒಂದು ಸದ್ದು ಕೇಳಿಸಿತು. ನೋಡಿದರೆ ಕಾಳಿಂಗ ಸರ್ಪ ಹೆಡೆ ಎತ್ತಿ ನಿಂತಿದೆ ಎಂದು ಆ ಘಟನೆಯನ್ನು ಇನ್ನೂ ಸ್ವಾರಸ್ಯಕರವಾಗಿ ಮಾಧ್ಯಮಕ್ಕೆ ಮುಖ್ಯಮಂತ್ರಿ ಚಂದ್ರು ಹೇಳಿದ್ದಾರೆ.

ಅದೊಂದು 12 ಅಡಿ ಕಾಳಿಂಗ ಸರ್ಪ. ನಾಲ್ಕು ಅಡಿ ಎದ್ದು ನಿಂತಿದೆ. ಕರಿ ಮೀಸೆ ಹೀಗೆ ನೋಡುತ್ತಿದೆ. ನನಗೆ ತೊಡೆಯೆಲ್ಲ ನಡುಗಿ ಹೋಗಿತ್ತು. ಆ ಹುಡುಗ ಏನು ಮಾಡಬೇಡಿ ಸುಮ್ಮನೆ ನಿಂತುಕೊಳ್ಳಿ, ಅಲ್ಲಾಡಬೇಡಿ, ಹಿಂದಕ್ಕೂ ಹೋಗಬೇಡಿ ಅಂದ. ಅವನೇನೋ ಹೇಳಿದ, ಆದರೆ, ನಮ್ಮ ಕಡೆಗೆ ಬಂದರೆ ಏನು ಮಾಡೋದು. ಯಾರಿಗೆ ಗುರಿ ಇಟ್ಟಿದೆಯೋ ಏನೋ? ರಾಜ್‌ಕುಮಾರ್‌ಗೆ ಎಷ್ಟು ಧೈರ್ಯ ಅಂದರೆ, ಅವನು ಏನು ಹೇಳುತ್ತಾನೋ ಕೇಳಿ ಅವನಿಗೆ ಗೊತ್ತಿದೆ. ನಾವು ಏನೋ ಮಾತಾಡುವುದು ಬೇಡ. ನಾವು ಅಲ್ಲಾಡದೆ ಇದ್ದಿದನ್ನು ನೋಡಿ ಅದು ಹೆಡೆ ಇಳಿಸಿತು. ನಮ್ಮ ಕಡೆಗೂ ಬರಲ್ಲ, ನಿಮ್ಮ ಕಡೆಗೂ ಬರಲ್ಲ ಸುಮ್ಮನೆ ಇದ್ದು ಬಿಡಿ ಅಂದರು. ಆಮೇಲೆ ಪೊದೆಗೆ ಹೋಯ್ತು ಎಂದು ಆ ಘಟನೆಯನ್ನು ನೆನೆದು ಅಣ್ಣಾವ್ರ ಧೈರ್ಯದ ಬಗ್ಗೆ ಮಾತಾಡಿದ್ದಾರೆ.

ಹಾಗೇ ಜ್ವಾಲಾಮುಖಿ ಸಿನಿಮಾದ ವೇಳೆ ಅವರ ವೋಕಲ್ ಕಾರ್ಡ್‌ಗೆ ಸಮಸ್ಯೆ ಆದಾಗ ಅಣ್ಣಾವ್ರು ಹೇಳಿದ ಮಾತನ್ನು ನೆನಪಿಸಿಕೊಂಡಿದ್ದಾರೆ. ಶೂಟಿಂಗ್ ಮುಗಿದ ಬಳಿಕ ಮುಖ್ಯಮಂತ್ರಿ ಚಂದ್ರು ಅವರಿಗೆ ಡಬ್ಬಿಂಗ್ ಮಾಡುವುದಕ್ಕೆ ಕಷ್ಟ ಆಗಿತ್ತು. ಹೀಗಾಗಿ ಬೇರೆಯವರ ಬಳಿಕ ಮಾಡಿಸಿಕೊಳ್ಳಿ ಎಂದಿದ್ದರಂತೆ. ಅದಕ್ಕೆ ರಾಜ್‌ಕುಮಾರವ ಇಬ್ಬರ ಡಬ್ಬಿಂಗ್‌ಗಾಗಿ ನಾಲ್ಕು ತಿಂಗಳು ಸಿನಿಮಾ ರಿಲೀಸ್ ಮಾಡಿರಲಿಲ್ಲ. ಜ್ವಾಲಾಮುಖಿ ಸಿನಿಮಾದ ಸಮಯದಲ್ಲಿ ವೋಕಲ್ ಕಾರ್ಡ್ ಡ್ಯಾಮೇಜ್ ಆಗಿ ಹೋಯ್ತು. ವೋಕಲ್ ಕಾರ್ಡ್ ಸೀಳು ಬಿಟ್ಟು ಮಾತೇ ನಿಂತು ಹೋಯ್ತು. ಆಗ ನಾನು ಪಾರ್ವತಮ್ಮನವರಿಗೆ ಒಂದು ಚೀಟಿ ಬರೆದು ಕಳಿಸಿದೆ. ನಾನು ಈಗ ಪಿಚ್ಚರ್‌ಗೆ ಡಬ್ಬಿಂಗ್ ಮಾಡುವುದಕ್ಕೆ ಆಗುವುದಿಲ್ಲ ನಿಮಗೆ ಸಿನಿಮಾ ರಿಲೀಸ್ ಮಾಡಬೇಕು ಅಂತಿದ್ದರೆ, ನೀವು ಯಾರ ಹತ್ತಿರವಾದರೂ ಡಬ್ ಮಾಡಿಸಿಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ. ಅವರು ರಾಜವಕುಮಾರ್ ಅವರಿಗೆ ಹೇಳಿದರು. ಮೂರು ಅಲ್ಲ, ನಾಲ್ಕು ತಿಂಗಳು ಆಗಲಿ. ಅವರ ವಾಯ್ಸ್ ಬೇಕು. ಅಲ್ಲಿವರೆಗೂ ಪಿಚ್ಚರ್ ನಿಲ್ಲಿಸುತ್ತೇವೆ ಅಂತ ಹೇಳು ಅಂದಿದ್ದರು. ಎನ್‌ಓಸಿ ಕೊಟ್ಟರೂ, ನೀನೇ ಬರಬೇಕು. ಎಷ್ಟು ದಿನ ಆದರೂ ಪರ್ವಾಗಿಲ್ಲ, ನನಗೇನು ಅವಸರವಿಲ್ಲ, ನಮ್ಮದೇ ಪ್ರೊಡಕ್ಷನ್ ಚಿಂತೆ ಮಾಡಬೇಡ ಎಂದಿದ್ದರು. ಆಗಾಗ ಫೋನ್ ಮಾಡೋರು. ಆಮೇಲೆ ಬಾಂಬೆಗೆ ಹೋಗಿ ಆಪರೇಷನ್ ಮಾಡಿಸಿಕೊಂಡು ಬಂದ್ಮೇಲೆ ಫೋನ್ ಮಾಡಿದೆ. ಅವರೇ ಫೋನ್ ತೆಗೆದುಕೊಂಡು ಈಗ ಮಾಡೋಣ ಬನ್ನಿ ನಿಮಗೆ ಒಂದು ದಿನದಲ್ಲಿ ಮಾಡುವುದಕ್ಕೆ ಆಗಲಿಲ್ಲ ಅಂದರೆ, ಎರಡು ಮೂರು ದಿನ ತಗೊಳ್ಳಿ ನಿಮ್ಮ ವಾಯ್ಸ್ ಬೇಕಾಗಿರೋದು. ನಿಮ್ಮ ವಾಯ್ಸ್ ಮುಖ್ಯ ಅಂತ ಹೇಳಿದರು. ಅಷ್ಟು ಸೌಜನ್ಯ ತೋರಿಸುವಂತಹ ವ್ಯಕ್ತಿ.

# ಕನ್ನಡಿಗರ ಭಯೋತ್ಪಾದಕರಿಗೆ ಹೋಲಿಸಿದ ಸೋನು ನಿಗಂ!

ಕನ್ನಡಿಗರ ಕನ್ನಡಾಭಿಮಾನವನ್ನು ಭಯೋತ್ಪಾದನೆಗೆ ಹೋಲಿಸಿದ ಗಾಯಕ ಸೋನು ನಿಗಂ ವಿರುದ್ಧ ಕನ್ನಡ ರಕ್ಷಣಾ ಪಡೆ ಸದಸ್ಯರು ದೂರು ನೀಡಿದ್ದಾರೆ. ಮಾತ್ರವಲ್ಲದೆ ಸೋನು ನಿಗಂ ಅನ್ನು ಕನ್ನಡ ಚಲನಚಿತ್ರದಿಂದ ನಿಷೇಧಿಸಬೇಕೆಂದು ವಾಣಿಜ್ಯ ಮಂಡಳಿ ಮತ್ತು ನಿರ್ಮಾಪಕರ ಸಂಘಕ್ಕೆ ಆಗ್ರಹಿಸಿದ್ದಾರೆ.



ಖ್ಯಾತ ಗಾಯಕ ಸೋನು ನಿಗಂ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡಿಗರ ಬಗ್ಗೆ, ಕನ್ನಡತನದ ಬಗ್ಗೆ ನೀಡಿರುವ ವಿವಾದಾತ್ಮಕ ಹೇಳಿಕೆ ಬಗ್ಗೆ ಈಗಾಗಲೇ ಕನ್ನಡಿಗರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಕನ್ನಡಿಗರ ಕನ್ನಡ ಪ್ರೀತಿಯನ್ನು ಭಯೋತ್ಪಾದನೆಗೆ ಗಾಯಕ ಸೋನು ನಿಗಂ ಹೋಲಿಸಿದ್ದು, ಇದೀಗ ಸೋನು ನಿಗಂ ವಿರುದ್ಧ ದೂರು ಸಹ ದಾಖಲಾಗಿದೆ. ಸೋನು ನಿಗಂ ಅವರ ಮತಿಹೀನ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಕನ್ನಡಪರ ಸಂಘಟನೆಗಳು ಸೋನು ನಿಗಂ ವಿರುದ್ಧ ದೂರು ದಾಖಲಿಸಿವೆ. ಕನ್ನಡ ಚಿತ್ರರಂಗ ಸೋನು ನಿಗಂ ಅವರನ್ನು ನಿಷೇಧಿಸಬೇಕೆಂದು ಸಹ ಒತ್ತಾಯಿಸಲಾಗಿದೆ.

ಕನ್ನಡ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಸದಸ್ಯರು ಸೋನು ನಿಗಂ ವಿರುದ್ಧ ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಕನ್ನಡಿಗರ ಕನ್ನಡ ಪ್ರೇಮವನ್ನು ಭಯೋತ್ಪಾದಕತೆಗೆ ಹೋಲಿಸಿದ ಸೋನು ನಿಗಂ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಇದರ ಜೊತೆಗೆ ಕನ್ನಡಪರ ಹೋರಾಟಗಾರ ರೂಪೇಶ್ ರಾಜಣ್ಣ ಅವರು ಚಲನಚಿತ್ರ ವಾಣಿಜ್ಯ ಮಂಡಳಿಗೆ ಭೇಟಿ ನೀಡಲಿದ್ದು, ಸೋನು ನಿಗಂ ವಿರುದ್ಧ ದೂರು ದಾಖಲಿಸಲಿದ್ದಾರೆ.

ವಿವಾದದ ಬಗ್ಗೆ ಮಾತನಾಡಿರುವ ಕರವೇ ಅಧ್ಯಕ್ಷ ನಾರಾಯಣಗೌಡ ಅವರು, ಸೋನು ನಿಗಂ ಒಬ್ಬ ಸಾಂಸ್ಕೃತಿಕ ಭಯೋತ್ಪಾದಕ. ಸೋನು ನಿಗಮ್ ಕನ್ನಡದಿಂದ ಬ್ಯಾನ್ ಮಾಡಬೇಕು, ಕನ್ನಡಿಗರನ್ನು ಭಯೋತ್ಪಾದಕರಿಗೆ ಹೋಲಿಸುತ್ತಾನಾ? ಸೋನು ನಿಗಂ ಈ ಕೂಡಲೇ ಕನ್ನಡಿಗರ ಕ್ಷಮೆ ಕೇಳಬೇಕು, ಇಲ್ಲವಾದರೆ ಸೋನು ನಿಗಮ್ ಕನ್ನಡ ಹಾಡು ಹಾಡುವಂತಿಲ್ಲ, ಸೋನು ನಿಗಂ ಮೇಲೆ ನಿಷೇಧ ಹೇರಬೇಕು ಎಂದು ಕನ್ನಡ ಚಲನಚಿತ್ರ ಮಂಡಳಿ, ನಿರ್ಮಾಪಕ ಸಂಘಕ್ಕೆ ಆಗ್ರಹಿಸುತ್ತೇನೆ ಎಂದಿದ್ದಾರೆ.

ಈ ರೀತಿ ದುರಭಿಮಾನಿ ತೋರಿಸುವ ಸೋನು ನಿಗಮ್‌ಗೆ ಹಾಡಲು ಅವಕಾಶ ಕೊಡಬೇಡಿ, ಕನ್ನಡ ಹಾಡು ಹಾಡಿ ಎಂದು ಕೇಳೋದು ತಪ್ಪಾ? ನೂರಾರು ಕನ್ನಡ ಚಿತ್ರ ಹಾಡನ್ನು ಸೋನು ನಿಗಮ್ ಹಾಡಿದ್ದಾರೆ, ಬಾಲಿವುಡ್ ಕೈ ಕೊಟ್ಟಾಗ ಕನ್ನಡಗರು ಕೈಹಿಡಿದು ಗೆಲ್ಲಿಸಿದರು. ನಮ್ಮ ಹಣ, ನಮ್ಮ ಅನ್ನ ತಿಂದು ಕನ್ನಡ ಹಾಡು ಎಂದರೆ ಅದು ಅಪರಾಧವೇ?, ಕನ್ನಡತನವನ್ನು ಭಯೋತ್ಪಾದಕರಿಗೆ ಹೋಲಿಸಿ ಆಮೇಲೆ ಕನ್ನಡದ ಮೇಲೆ ತೋರಿಕೆಯ ಪ್ರೀತಿ ಮಾತಾಡ್ತಿಯಾ? ಕನ್ನಡ ಹಾಡು ಎಂದು ಕೇಳಿದಾಗ ಹಾಡಬೇಕಿತ್ತು ಇಲ್ಲವೇ ತೆಪ್ಪಗಿರಬೇಕಿತ್ತು, ಅದು ಬಿಟ್ಟು ಕನ್ನಡಿಗರ ಸ್ವಾಭಿಮಾನ ಕೆಣಕುವ ಕೆಲಸ ಮಾಡ್ತಿಯಾ? ಭಯೋತ್ಪಾದಕರ ರೀತಿ ಮಾಡಿದರೆ ನಾವು ಸುಮ್ಮನಿರಲ್ಲ ಎಸ್‌ಪಿಬಿ ಅಂಥ ಶ್ರೇಷ್ಠ ಗಾಯಕರು ಕನ್ನಡದ ಬಗ್ಗೆ ಎಂಥ ಗೌರವ ಇಟ್ಟುಕೊಂಡಿದ್ದರು. ಆದರೆ ನಿಗಮ್ ಈ ರೀತಿ ನಡೆದುಕೊಂಡು ಸರಿಯಲ್ಲ, ಕೂಡಲೆ ಕ್ಷಮೆ ಕೇಳಬೇಕು ಎಂದು ನಾರಾಯಣಗೌಡ ಆಗ್ರಹಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಕಾಲೇಜೊಂದರಲ್ಲಿ ಸೋನು ನಿಗಂ ಲೈವ್ ಗಾಯನಗೋಷ್ಠಿ ಆಯೋಜಿಸಲಾಗಿತ್ತು. ಈ ವೇಳೆ ವಿದ್ಯಾರ್ಥಿಯೊಬ್ಬ ಕನ್ನಡ ಹಾಡು ಹಾಡುವಂತೆ ಒತ್ತಾಯಿಸಿದ ಆಗ ಮಾತನಾಡಿದ ಸೋನು ನಿಗಂ, 'ಕನ್ನಡ, ಕನ್ನಡ... ಇದರಿಂದಲೇ ಪಹಲ್ಗಾಮ್ ದಾಳಿ ಆಗಿರುವುದು' ಎಂದು, ಕನ್ನಡಿಗರ ಕನ್ನಡಾಭಿಮಾನವನ್ನು ಭಯೋತ್ಪಾದಕತೆಗೆ ಹೋಲಿಸಿದ್ದರು. ಸೋನು ನಿಗಂ ಅವರ ಈ ಹೇಳಿಕೆಗೆ ಕನ್ನಡಿಗರ ಒಕ್ಕೊರಲ ಆಕ್ರೋಶ ವ್ಯಕ್ತವಾಗಿದೆ. ಚಿತ್ರರಂಗದ ಕೆಲ ಪ್ರಮುಖರು ಸೋನು ನಿಗಂ ಅವರ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 4.5.2025

# ‘ಭಾರ್ಗವ’ ಚಿತ್ರಕ್ಕಾಗಿ ಮತ್ತೆ ಒಂದಾದ ಉಪೇಂದ್ರ-ನಾಗಣ್ಣ!

ಕೋಟಿಗೊಬ್ಬ, ಕೋಟಿಗೊಬ್ಬ-2 ಮತ್ತು 3 ಚಿತ್ರಗಳಿಗೆ ಹೆಸರುವಾಸಿಯಾದ ರಾಮ್ ಬಾಬು ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಸೂರಪ್ಪಬಾಬು ಅವರು ಈ ಚಿತ್ರವನ್ನು ನಿರ್ಮಿಸಲಿದ್ದಾರೆ. ಇದು ಉಪೇಂದ್ರ ಜೊತೆಗಿನ ಅವರ ಮೊದಲ ಸಿನಿಮಾವಾಗಿದೆ. ಈ ಹಿಂದೆ ಕುಟುಂಬ, ಗೋಕರ್ಣ, ದುಬೈ ಬಾಬು, ಮತ್ತು ಗೌರಮ್ಮ ಮುಂತಾದ ಗಮನಾರ್ಹ ಕೌಟುಂಬಿಕ ಚಿತ್ರಗಳನ್ನು ನೀಡಿದ ನಟ ಉಪೇಂದ್ರ ಮತ್ತು ನಿರ್ದೇಶಕ ನಾಗಣ್ಣ ಅವರ ಜೋಡಿ ‘ಭಾರ್ಗವ’ ಚಿತ್ರಕ್ಕಾಗಿ ಮತ್ತೆ ಒಂದಾಗುತ್ತಿದ್ದಾರೆ. ಅಕ್ಷಯ ತೃತೀಯ ಸಂದರ್ಭದಲ್ಲಿ ಟೈಟಲ್ ಟೀಸರ್‌ನೊಂದಿಗೆ ಹೊಸ ಸಿನಿಮಾವನ್ನು ಅಧಿಕೃತವಾಗಿ ಘೋಷಿಸಲಾಯಿತು. ಚಿತ್ರಕ್ಕೆ a violent family man ಎಂಬ ಅಡಿಬರಹವಿದೆ.

ಕೋಟಿಗೊಬ್ಬ, ಕೋಟಿಗೊಬ್ಬ 2 ಮತ್ತು 3 ಚಿತ್ರಗಳಿಗೆ ಹೆಸರುವಾಸಿಯಾದ ರಾಮ್‌ಬಾಬು ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಸೂರಪ್ಪಬಾಬು ಅವರು ಈ ಚಿತ್ರವನ್ನು ನಿರ್ಮಿಸಲಿದ್ದಾರೆ. ಇದು ಉಪೇಂದ್ರ ಜೊತೆಗಿನ ಅವರ ಮೊದಲ ಸಿನಿಮಾವಾಗಿದೆ. ಭಾರ್ಗವ ಚಿತ್ರಕ್ಕಾಗಿ ಕೆಲಸ ಮಾಡುತ್ತಿರುವ ಕಥೆಗಾರರನ್ನು ಒಟ್ಟುಗೂಡಿಸಿದ ಸೂರಪ್ಪಬಾಬು, ಇದು ಯಾವುದೇ ಸಿನಿಮಾಗಳಿಂದ ಪ್ರೇರಣೆ ಪಡೆದಿಲ್ಲ ಎಂದು ಖಚಿತಪಡಿಸಿದ್ದಾರೆ.



ಇದು ಸಂಪೂರ್ಣವಾಗಿ ಕನ್ನಡಿಗರಿಗಾಗಿ ಮತ್ತು ಇದು ಪ್ಯಾನ್-ಇಂಡಿಯಾ ಚಿತ್ರವಾಗಿರುವುದಿಲ್ಲ ಎಂದು ಸೂರಪ್ಪ ಬಾಬು ಬಹಿರಂಗಪಡಿಸಿದರು. ಭಾರ್ಗವ ಎಂಬ ಹೆಸರನ್ನು ಸಾಮಾನ್ಯವಾಗಿ ಪೌರಾಣಿಕವಾಗಿ ಉಲ್ಲೇಖಿಸಲಾಗುತ್ತದೆ. ಭಾರ್ಗವ ಅಸ್ತ್ರ ಎಂದು ಕರೆಯಲ್ಪಡುವ ರಾಮನ ಬಿಲ್ಲು ದೈವಿಕ ಶಕ್ತಿಯ ಸಂಕೇತವಾಗಿದೆ. ಆದಾಗ್ಯೂ, ಈ ಚಿತ್ರದ ಅಡಿಬರಹವು ವಿಭಿನ್ನ ಕಥೆಯನ್ನು ಹೇಳುತ್ತದೆ.

ಸಿನಿ ಎಕ್ಸ್‌ಪ್ರೆಸ್ ಜೊತೆಗೆ ಮಾತನಾಡಿದ ನಿರ್ದೇಶಕ ನಾಗಣ್ಣ, ಅಡಿಬರಹ, ಸಂಘರ್ಷವನ್ನು ಪ್ರತಿಬಿಂಬಿಸುತ್ತದೆ ಎಂದು ಬಹಿರಂಗಪಡಿಸಿದರು. ಹಿಂಸಾತ್ಮಕ ಕುಟುಂಬದ ಮನುಷ್ಯನ ವ್ಯತಿರಕ್ತ ಬದಲಾವಣೆಯ ಕಥೆ ಹೇಳಲಾಗುತ್ತಿದೆ ಎಂದು ತಿಳಿಸಿದರು. ಅರ್ಜುನ್ ಜನ್ಯ ಅವರ ನಿರ್ದೇಶನದ ಚೊಚ್ಚಲ 45 ರಲ್ಲಿ ಮುಂದಿನ ಬಾರಿ ಕಾಣಿಸಿಕೊಳ್ಳಲಿರುವ ಉಪೇಂದ್ರ, ಭಾರ್ಗವ ಚಿತ್ರದಲ್ಲಿ ಎರಡು ವಿಭಿನ್ನ ಶೆಡ್ ಗಳ ಪಾತ್ರ ಮಾಡುತ್ತಿದ್ದಾರೆ. ಇದೊಂದು ಭಾವನೆ, ಹಾಸ್ಯಗಳ ತೀವ್ರತೆಯನ್ನೊಳಗೊಂಡ ಪಾತ್ರವಾಗಿದ್ದು, ಉಪೇಂದ್ರ ಅವರಿಗೆ ಹೊಸ ರೀತಿಯ ಪಾತ್ರ.



ಕಥೆಯು ಕುಟುಂಬದ ವ್ಯಕ್ತಿಯ ಸುತ್ತ ಸುತ್ತುತ್ತದೆಯಾದರೂ, ಆತ ಎದುರಿಸುವ ಸನ್ನಿವೇಶಗಳು ಮಿತಿಯನ್ನು ಮೀರಿ ಆತನನ್ನು ಸಂಘರ್ಷಕ್ಕೆ ತಳ್ಳುತ್ತವೆ ಎಂದು ನಿರ್ದೇಶಕರು ವಿವರಿಸಿದರು. ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಲಿದ್ದಾರೆ. ರಾಜರತ್ನಂ ಛಾಯಾಗ್ರಹಣ ಒದಗಿಸಲಿದ್ದಾರೆ. ಅವರು ಈ ಹಿಂದೆ ಕೋಟಿಗೊಬ್ಬ 2 ನಲ್ಲಿಯೂ ಕೆಲಸ ಮಾಡಿದ್ದಾರೆ. ಸ್ಕ್ರಿಪ್ಟ್ ಅಂತಿಮಗೊಂಡಿದ್ದು, ತಂಡವು ಪ್ರಸ್ತುತ ಪೂರ್ಣ ಪಾತ್ರವರ್ಗ ಆಯ್ಕೆ ಮಾಡುವಲ್ಲಿ ನಿರತವಾಗಿದೆ. ಹಿರಿಯ ನಟರಾದ ಅವಿನಾಶ್ ಮತ್ತು ರಂಗಾಯಣ ರಘು ಈಗಾಗಲೇ ಚಿತ್ರಕ್ಕೆ ಸೇರ್ಪಡೆಗೊಂಡಿದ್ದು, ನಾಯಕಿ ಹೆಸರು ಶೀಘ್ರದಲ್ಲೇ ಘೋಷಣೆಯಾಗಲಿದೆ. ☯



# ಸಂಭಾವನೆಯಲ್ಲಿ ಎಲ್ಲಾ ದಕ್ಷಿಣದ ನಟಿಯರನ್ನು ಹಿಂದಿಕ್ಕಿದ ನಯನತಾರಾ!


ನಟಿ ನಯನತಾರಾ ದಶಕಗಳಿಂದಲೂ ಚಿತ್ರರಂಗದಲ್ಲಿದ್ದಾರೆ. ನಯನತಾರಾ ಅನ್ನು ಲೇಡಿ ಸೂರ್ಪ ಸ್ಟಾರ್ ಎಂದೂ ಸಹ ಕರೆಯಲಾಗುತ್ತದೆ. ಈಗಲೂ ಬೇಡಿಕೆ ಉಳಿಸಿಕೊಂಡಿರುವುದು ಮಾತ್ರವೇ ಅಲ್ಲದೆ, ದಕ್ಷಿಣ ಭಾರತದಲ್ಲಿಯೇ ಅತಿ ಹೆಚ್ಚು ಸಂಭಾವನೆ ಪಡೆವ ನಟಿ ಸಹ ಎನಿಸಿಕೊಂಡಿದ್ದಾರೆ ನಯನತಾರಾ. ಅಂದಹಾಗೆ ಈ ನಟಿಯ ಸಂಭಾವನೆ ಎಷ್ಟು?

ಕಾಲಿವುಡ್ ನಟಿ ನಯನತಾರಾ ಅವರು ಲೇಡಿ ಸೂಪರ್ ಸ್ಟಾರ್ ಎಂದೇ ಫೇಮಸ್ ಆದವರು. ದಕ್ಷಿಣ ಭಾರತದಲ್ಲಿ ಅವರಿಗೆ ಭರ್ಜರಿ ಬೇಡಿಕೆ ಇದೆ. ಅವರು ಈಗ ದಕ್ಷಿಣ ಭಾರತದ ಅತಿ ಹೆಚ್ಚು ಸಂಭಾವನೆ ಪಡೆದ ನಾಯಕಿ ಎನ್ನುವ ಪಟ್ಟ ಪಡೆದುಕೊಂಡಿದ್ದಾರೆ ಎಂಬುದಾಗಿ ವರದಿ ಆಗಿದೆ. ಈ ವಿಚಾರ ಅವರ ಅಭಿಮಾನಿಗಳಿಗೆ ಖುಷಿಯನ್ನು ಕೊಟ್ಟರೆ, ಅವರ ಜೊತೆ ಸಿನಿಮಾ ಮಾಡಬೇಕು ಎಂದು ಯೋಚಿಸುತ್ತಿರುವ ನಿರ್ಮಾಪಕರಿಗೆ ಇದು ಹೆಚ್ಚು ಚಿಂತೆಯನ್ನು ಉಂಟುಮಾಡಿದೆ ಎನ್ನಬಹುದು.

ನಯನತಾರಾ ಅವರು ಲೇಡಿ ‘ಸೂಪರ್ ಸ್ಟಾರ್’ ಎಂದು ಕರೆಸಿಕೊಳ್ಳಲು ಕಾರಣ ಅವರು ಮಾಡಿರೋ ಪಾತ್ರಗಳು ಎಂದೇ ಹೇಳಬಹುದು. ಅವರು ಅನೇಕ ಪಾತ್ರಗಳನ್ನು ಮಾಡಿ ಗಮನ ಸೆಳೆದಿದ್ದಾರೆ. ಚಿರಂಜೀವಿ ಜೊತೆ ಅವರು ಈಗ ಸಿನಿಮಾ ಮಾಡುತ್ತಿದ್ದಾರೆ. ಅವರ ವೃತ್ತಿ ಜೀನವದಲ್ಲೇ ಅತಿ ಹೆಚ್ಚಿನ ಸಂಭಾವನೆಯನ್ನು ಈ ಪಾತ್ರಕ್ಕಾಗಿ ಪಡೆದುಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ. ನಯನತಾರಾ ಅವರು ಬಿಗ್ ಬಜೆಟ್ ಚಿತ್ರಗಳಿಗೆ ಪಡೆಯೋದು 10 ಕೋಟಿ ರೂಪಾಯಿ. ಈ ಮೊದಲು ‘ಪಠಾಣ್’ ಸಿನಿಮಾದಲ್ಲಿ ನಟಿಸಿದ್ದಕ್ಕಾಗಿ ಅವರು ಇದೇ ಮಟ್ಟದಲ್ಲಿ ಸಂಭಾವನೆ ಪಡೆದುಕೊಂಡಿದ್ದರು. ಇದನ್ನು ಅವರು ಈಗಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಈಗ ಇದನ್ನು ಸುಮಾರು ದುಪ್ಪಟ್ಟು ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ.

ನಯನತಾರಾ ಅವರು ಚಿರಂಜೀವಿ ಸಿನಿಮಾಗಾಗಿ 18 ಕೋಟಿ ರೂಪಾಯಿ ಕೇಳಿದ್ದಾರಂತೆ. ಈ ಚಿತ್ರದಲ್ಲಿ ಅವರ ಕಾಲ್‌ಶೀಟ್ ಹೆಚ್ಚಿನ ದಿನ ಇದೆಯಂತೆ. ಅಲ್ಲದೆ, ಅವರ ಪಾತ್ರ ಕೂಡ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಎಲ್ಲಾ ಕಾರಣದಿಂದ ಅವರು ಇಷ್ಟು ದೊಡ್ಡ ಮೊತ್ತಕ್ಕೆ ಬೇಡಿಕೆ ಇಟ್ಟಿದ್ದಾರೆ. ಸದ್ಯ ನಿರ್ಮಾಪಕರು ಈ ಬಗ್ಗೆ ಮಾತುಕತೆ ನಡೆಸುತ್ತಿದ್ದಾರೆ. ಇದು ನಿಜವಾದಲ್ಲಿ ಅವರು ದಕ್ಷಿಣ ಭಾರತದ ಅತಿ ಹೆಚ್ಚಿನ ಸಂಭಾವನೆ ಪಡೆದ ನಟಿ ಆಗಲಿದ್ದಾರೆ.

ಪ್ರಿಯಾಂಕಾ ಚೋಪ್ರಾ ಅವರು 30 ಕೋಟಿ ರೂಪಾಯಿ ಸಂಭಾವನೆ ಪಡೆದು ಭಾರತದಲ್ಲಿ ಅತಿ ದುಬಾರಿ ನಟಿ ಎನಿಸಿಕೊಂಡಿದ್ದಾರೆ. ರಾಜಮೌಳಿ-ಮಹೇಶ್ ಬಾಬು ಚಿತ್ರಕ್ಕೆ ಅವರು ಇಷ್ಟು ದೊಡ್ಡ ಸಂಭಾವನೆ ಪಡೆದಿದ್ದರು. ಕಂಗನಾ ರಣಾವತ್ ಅವರು ಕೂಡ 15-20 ಕೋಟಿ ರೂ. ಸಂಭಾವನೆ ಪಡೆಯುತ್ತಾರೆ. ಇದಾದ ಬಳಿಕದ ಸ್ಥಾನದಲ್ಲಿ ನಯನತಾರಾ ಇದ್ದಾರೆ ಎಂದು ಹೇಳಲಾಗುತ್ತಿದೆ. ದಕ್ಷಿಣದಲ್ಲಿ ಅವರು ಟಾಪ್‌ನಲ್ಲಿ ಇದ್ದಾರೆ. ☯



# ನಟ ಧರ್ಮ ಕೀರ್ತಿರಾಜ್- ರಾಗಿಣಿ ದ್ವಿವೇದಿ ಮುಖಾಮುಖಿ

ನಟ ಧರ್ಮ ಕೀರ್ತಿರಾಜ್ ತಮ್ಮ ಮುಂಬರುವ ಚಿತ್ರಗಳಾದ ಟಕೀಲಾ, ಅಮರಾವತಿ ಪೊಲೀಸ್ ಸ್ಟೇಷನ್ ಮತ್ತು ಬ್ಲಡ್ ರೋಸಸ್ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಸದ್ಯ ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿರುವ ಅವರು, ಇತ್ತೀಚೆಗೆ ‘ಸಿಂಧೂರಿ’ ಚಿತ್ರದಲ್ಲಿ ನಟಿಸಲು ಒಪ್ಪಿದ್ದಾರೆ. ಚಿತ್ರತಂಡದ ಪ್ರಕಾರ, ಧರ್ಮ ಕೀರ್ತಿರಾಜ್ ಅವರು ನಟಿ ರಾಗಿಣಿ ದ್ವಿವೇದಿ ಅವರೊಂದಿಗೆ ತೆರೆ ಮೇಲೆ ತೀವ್ರವಾದ ಮುಖಾಮುಖಿಯಾಗಲಿದ್ದಾರೆ.



ಚಿತ್ರವನ್ನು ಶಂಕರ್ ಕೋನಮಾನಹಳ್ಳಿ ಬರೆದು ನಿರ್ದೇಶಿಸಿದ್ದು, ಎಸ್. ರಮೇಶ್ ಬಂಡವಾಳ ಹೂಡಿದ್ದಾರೆ. ಚಿತ್ರದ ಬಗ್ಗೆ ಮಾತನಾಡಿದ ಧರ್ಮ, ‘ಸಿಂಧೂರಿಯಲ್ಲಿ ನಾನು ಎರಡು ಛಾಯೆಗಳಲ್ಲಿ ನಟಿಸಿದ್ದೇನೆ. ಒಂದು ನಾಯಕನಾಗಿ ಮತ್ತು ಇನ್ನೊಂದು ನಕಾರಾತ್ಮಕ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ರಾಗಿಣಿ ದ್ವಿವೇದಿ ಅವರೊಂದಿಗಿನ ಘರ್ಷಣೆ ಆಸಕ್ತಿದಾಯಕವಾಗಿರುತ್ತದೆ. ನನ್ನ ಪ್ರೇಯಸಿಯಾಗಿ ನಟಿಸುವ ಮತ್ತೊಬ್ಬ ನಾಯಕಿ ಕೂಡ ಇದ್ದಾರೆ. ಆದರೆ ಆ ಪಾತ್ರವನ್ನು ಇನ್ನೂ ಅಂತಿಮಗೊಳಿಸಿಲ್ಲ’ ಎಂದರು.

ನಿರ್ದೇಶಕರು 1990ರ ದಶಕದ ಶೈಲಿಯ ನಿರೂಪಣೆ ಮತ್ತು ಹಿನ್ನೆಲೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದು ಚಿತ್ರಕ್ಕೆ ಹಿಂದಿನ ಶೈಲಿಯ ವಿನ್ಯಾಸವನ್ನು ನೀಡಿದೆ. ಚಿತ್ರದ ಸಂಪೂರ್ಣ ಚಿತ್ರೀಕರಣ ಸಕಲೇಶಪುರದಲ್ಲಿ ನಡೆಯಲಿದ್ದು, ಒಂದೇ ಹಂತದಲ್ಲಿ ಚಿತ್ರೀಕರಣಗೊಳ್ಳಲಿದೆ ಎನ್ನುತ್ತಾರೆ ಧರ್ಮ.

ಈ ಮಧ್ಯೆ, ಧರ್ಮ ಮತ್ತೊಂದು ಯೋಜನೆಗೆ ಹಸಿರು ನಿಶಾನೆ ತೋರಿದ್ದಾರೆ. ನಿರ್ದೇಶಕ ಪುನೀತ್ ಕೆಜಿಆರ್ ಅವರ ‘ನಯನ ಮಧುರ’ ಎಂಬ ಚಿತ್ರದಲ್ಲಿಯೂ ನಟಿಸಲಿದ್ದಾರೆ. ಚಿತ್ರದ ಅಧಿಕೃತ ಘೋಷಣೆ ಶೀಘ್ರದಲ್ಲೇ ನಿರೀಕ್ಷಿಸಲಾಗಿದೆ. ☯

Vol. 40 No. 48 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 📱 9513892666
Email: policenewsreporter@gmail.com